ಕಲ್ಯಾಣ ಕಿರಣ

ಸಂಪುಟ ೭
ಸಂಚಿಕೆ ೨-೩
ಜೂನ್-ಜುಲೈ
೧೯೮೧
ಬಸವ ಶಕೆ ೮೭೫
ಬೆಲೆ : ೩-೦೦



Digitalized by e-Sahithya Documentation Forum
Sponsored by Sarayu Foundation Trust

ಕಲ್ಯಾಣ ಕಿರಣ

ಮಾಸ ಪತ್ರಿಕೆ

ವಾರ್ಷಿಕ ಚಂದಾ ರೂ. ೧೬ ಆಜೀವ ಸದಸ್ಯತ್ವ ೧೫೧ ರೂ

ಬಿಡಿ ಪ್ರತಿ ೧-೫೦ ರೂ.

ಕಿರಣಗನ್ನಡಿ

ಮುಖಪುಟ : ಪೂಜ್ಯ ಶ್ರೀ ನಾದಬ್ರಹ್ಮಾನಂದ ಸ್ವಾಮಿಗಳು

ಮೂರನೆಯ ಪುಟ : 86ನೆಯ ಹುಟ್ಟುಹಬ್ಬದಂದು

ಹಿಂಬದಿಯ ಚಿತ್ರ : ಮಲ್ಲೇಶ್ವರಂ ಪ್ರವಚನದಲ್ಲಿ ಸತ್ಕಾರ

ಕಲ್ಯಾಣ ಕಿರಣ

ಸಂಪುಟ ೭] ಜೂನ್, ಜುಲೈ 1981 [ಸಂಚಿಕೆ ೧೨

ಬಸವ ಚರಣಕೆ

ನುಡಿ-ನೈವೇದ್ಯ

ಬಸವ ನಿನ್ನ ಒಲಿಮೆಯನ್ನು ಹೇಗೆ ನಾನು ಸ್ಮರಿಸಲಿ ?
ಯಶದಿಂದ ಮರುಜನ್ಮವೆಮಗೆ ನೀನು ಇತ್ತೆಯಾ ॥ ಪ ॥

ಬಿರುಗಾಳಿ ಬೀಸುತಿರಲು, ಮುಸಲಧಾರೆ ಸುರಿಯುತಿರಲು
ಬರಸಿಡಿಲು ಎರಗಿ ಬರಲು ಪಾರು ಮಾಡಿ ಉಳಿಸುತ
ಕರುಣ ಕವಚ ನಿರುತ ಹೊದಿಸಿ ಎಮ್ಮ ಕಾಯ್ದು ರಕ್ಷಿಸಿದ
ಕರುಣಿ ನಿನ್ನ ಪ್ರೇಮವನ್ನು ಹೇಗೆ ನಾನು ಸ್ಮರಿಸಲಿ ? ॥ ೧ ॥

ರೆಪ್ಪೆ ಆಲಿಯ ರಕ್ಷಿಸುವೊಲ್ ಚಿಪ್ಪು ಮೆದುಳ ಕಾಯುವವೊಲು
ಎದೆಯ ಗೂಡು ಹೃದಯ ಕಾಯ್ವ ತೆರದಿ ಎಮ್ಮ ರಕ್ಷಿಪೆ
ಎಡರು ಎನಿತು ಬಂದರೂ, ತೊಡರು ಎನಿತು ಸಂದರೂ
ತಾಯಿ ಗರ್ಭದಲ್ಲಿ ಶಿಶುವ ಇಟ್ಟು ಕಾಯುವಂತೆ ಕಾಯ್ವೆ. ॥ ೨ ॥

ಕೋಲ ತುದಿಯ ಕೋಡಗದೊಲ್ ನೇಣ ತುದಿಯ ಬೊಂಬೆಯವೊಲ್
ಒಲವಿನಿಂದ ನೀನು ಕುಣಿಸೆ ಕುಣಿವ ಬೊಂಬೆಯಂತೆ ಆವು
ವೀಣೆ ಹಿಡಿದ ವೈಣಿಕ ನೀ, ನಿನ್ನ ಕೈಯ ವೀಣೆಯಾವು
ಜಾಣ ನಾದಯೋಗಿ ನೀನು ನುಡಿಪ ಹೊಣೆಯು ನಿನ್ನದೈ ॥ ೩ ॥

ವಿಶ್ವದ ಬಾನಿನಲ್ಲಿ ಬಾಳ ಗಾಳಿ ಪಟವ ಬಿಟ್ಟು
ವಿಶ್ವಾಸದ ಬಾಲಗೋಸಿ ಪವನಪಟಕೆ ಸೇರಿಸಿಟ್ಟು
ಕರುಣೆಯಿಂದ ಸೂತ್ರವನ್ನು ಭದ್ರವಾಗಿ ಕೈಯಲಿಟ್ಟು
ನಿರುತ ಕಾವ ಗುರುವು ನೀನು ಸಚ್ಚಿದಾನಂದ ರೂಪನೆ ॥ ೪ ॥

—ಜಗದ್ಗುರು ಮಾತೆ ಮಹಾದೇವಿ

Digitalized by e-Sahithya Documentation Forum
Sponsored by Sarayu Foundation Trust

ಮನೆಯ ಪರಿಸರ ಪ್ರಶಾಂತವೂ
ಪ್ರಸನ್ನವೂ ಆಗಿರಬೇಕಾದರೆ


ಮೈಸೂರು ಕಾವೇರಿ ಪ್ರಾಡಕ್ಟ್ಸನ
ಊದು ಬತ್ತಿಗಳನ್ನೇ ಉರಿಸಿರಿ



FOR TRADE ENQUIRIES
MYSORE KAVERI PRODUCTS
1161 14 SREERAMAPURAM BANGALORE-560021

ಮೈಸೂರು ಕಾವೇರಿ ಪ್ರಾಡಕ್ಟ್ಸನ
ಊದಿನ ಕಡ್ಡಿಗಳ ವೈಶಿಷ್ಟ್ಯವೇನು ?

- ಅನಾವಶ್ಯಕ ಹೊಗೆಯಿಲ್ಲ, ಘಾಟಿಲ್ಲ.
- ಮೂಗಿಗೆ ಉದ್ರೇಕವನ್ನುಂಟು ಮಾಡದೆ ಮಧುರವಾದ, ಆಪ್ಯಾಯಮಾನವಾದ ಸುವಾಸನೆ ನೀಡುತ್ತದೆ.
- ಪರಿಸರದಲ್ಲಿ ಅತ್ಯಂತ ಸ್ವಾಭಾವಿಕ ಸುಗಂಧವಾಸನೆ ಬೀರಿ ಅತಿಥಿಗಳನ್ನು ಸಂತೃಪ್ತಗೊಳಿಸುತ್ತದೆ.
- ಧ್ಯಾನ ಮಾಡುವ ಮನಸ್ಸನ್ನು ಶಾಂತಗೊಳಿಸಿ, ಏಕಾಗ್ರ ಚಿತ್ತತೆ ಪಡೆಯಲು ಸಹಾಯಕವಾಗುತ್ತದೆ.



—ಜಗದ್ಗುರು ಮಾತೆ ಮಹಾದೇವಿ

ಬಸವನ ರಕ್ಷೆಯೇ ರಕ್ಷೆ !

'ದೈವೀಶಕ್ತಿ' ಎಂದರೇನು ? ದೈವಾನುಗ್ರಹ ಎಂದರೇನು ? ಅದನ್ನು ಪ್ರತ್ಯಕ್ಷೀಕರಿಸಿ ತೋರಿಸುವುದು ಹೇಗೆ ? ಕೆಲವರು ಇಂಥ ಪ್ರಶ್ನೆಗಳನ್ನು ಆಗಾಗ ಕೇಳುತ್ತಿರುತ್ತಾರೆ. ವಿದ್ಯುತ್ ಶಕ್ತಿ ಎಂದರೇನು ? ಅದನ್ನು ನಾವು ಹೇಗೆ ಸಿದ್ಧಪಡಿಸಬಲ್ಲೆವು ? ಅದು ಒಂದು ನಿರಾಕಾರ ಶಕ್ತಿ. ಅದು ಮಾಡುವ ಕಾರ್ಯಚಟುವಟಿಕೆಗಳಿಂದ ಅದರ ಅಸ್ತಿತ್ವವನ್ನು ನಾವು ಗುರುತಿಸಬೇಕಾಗುತ್ತದಷ್ಟೆ. ದೀಪಗಳು ಉರಿಯುತ್ತಿದ್ದರೆ, ಸ್ಟೋವ್ ಕಾಯಿಸುತ್ತಿದ್ದರೆ, ಟೇಪ್ ರೆಕಾರ್ಡರ್ ಹಾಡುತ್ತಿದ್ದರೆ, ಫ್ಯಾನ್ ತಿರುಗುತ್ತಿದ್ದರೆ ತನ್ಮೂಲಕ ನಾವು ವಿದ್ಯುತ್ತಿನ ಇರುವಿಕೆಯನ್ನು, ಶಕ್ತಿಯನ್ನು ಗುರುತಿಸುತ್ತೇವೆ. ಹಾಗೆಯೇ ದೈವಾನುಗ್ರಹವೂ ಕೂಡ. ಅದು ಒಂದು ಭೌತವಸ್ತುವಲ್ಲ ಪ್ರಮಾಣೀಕರಿಸಿ ತೋರಲಿಕ್ಕೆ. ಅದರ ಪರಿಣಾಮ, ಫಲಿತಾಂಶಗಳಿಂದ ಮಾತ್ರ ಸ್ಥಿರೀಕರಿಸಬಹುದು. ಅಂಥದೊಂದು ಘಟನೆ ನಡೆಯಿತು, ದಿನಾಂಕ 29ನೇ ಮೇ 81ರಂದು ಬಸವ ಭಾರತಿ ಶಾಲೆಯ ಆರಂಭದ ದಿನಗಳು; ವಿಪರೀತ ಜನ ಸಂದಣಿ, ಮಕ್ಕಳ ಪ್ರವೇಶ ದೊರಕಿಸಲು ಧಾವಿಸುವ ವಿದ್ಯಾಕಾಂಕ್ಷೆಯುಳ್ಳ ಪಾಲಕರು. ಕೆಲಸದ ಒತ್ತಡದಿಂದ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಬಸವ ಮಂಟಪದಲ್ಲೇ ಕಾರ್ಯನಿರ್ವಹಿಸಿ, ಎರಡು ಗಂಟೆಯ ಮೇಲೆ ಗಂಗೋತ್ರಿಗೆ ಹೊರಟೆವು. ಪೂಜ್ಯ ಗುರೂಜಿಯವರು ಕಟ್ಟಡ ಕೆಲಸದ ಉಸ್ತುವಾರಿ ನೋಡಿಕೊಂಡು ಸೂಕ್ತ ಮಾರ್ಗದರ್ಶನ ನೀಡಿ ನಾಲ್ಕೂವರೆಯ ತನಕ ನಿರಂತರವಾಗಿ ಹೊಲದ ತುಂಬೆಲ್ಲ ಅಡ್ಡಾಡಿ ಬಂದು, ಮಂಚದ ಮೇಲೆ ದಣಿವಾರಿಸಿಕೊಳ್ಳಲು ಅಡ್ಡಾದರು. ಪ್ರತಿನಿತ್ಯದಂತೆ ಶುಲ್ಕ ವಸೂಲಿಯ

Digitalized by e-Sahithya Documentation Forum
Sponsored by Sarayu Foundation Trust

ಲೆಕ್ಕವನ್ನು ಲೋಹಿತಾಳಿಂದ ಪಡೆದು, ಲೆಕ್ಕದ ಪುಸ್ತಕವನ್ನು ಪರಿಶೀಲಿಸುತ್ತಾ ನಾನು ಕುಳಿತಿದ್ದೆ. ಇನ್ನೊಂದಿಬ್ಬರು ಅಲ್ಲೇ ನೆಲವನ್ನು ಒರೆಸುತ್ತಾ ಸಾಮಾನುಗಳನ್ನು ಹೊಂದಿಸುತ್ತಾ ಕಾರ್ಯನಿರತರಾಗಿದ್ದರು. ಕಾರ್ಮುಗಿಲುಗಳು ತ್ವರಿತ ವೇಗದಿಂದ ಸಂಚಯಿಸ ತೊಡಗಿದ್ದವು. ಪ್ರಚಂಡವಾದ ವೇಗದಿಂದ ಗಾಳಿ ಸಂಚರಿಸ ತೊಡಗಿತು. ಕಿಟಕಿ ಬಾಗಿಲುಗಳನ್ನು ಮುಚ್ಚಲು ಅವಸರದಿಂದ ಪ್ರಯತ್ನಿಸಲು ಕೆಲಸಗಾರರು ತೊಡಗಿದರು. ಗಾಳಿಯ ರಭಸಕ್ಕೆ ಬಾಗಿಲನ್ನು ಮುಚ್ಚಲು ಸಹ ಆಗುತ್ತಿರಲಿಲ್ಲ. ಮುಚ್ಚ ಹೋದರೆ ಅದು ರಪ್ಪೆಂದು ವಾಪಸ್ಸಾಗುತ್ತಿತ್ತು.

ಅದೇ ವೇಳೆಗೆ ಟೆಲಿಫೋನ್ ಗಂಟೆ ಬಾರಿಸತೊಡಗಿತು. ಪೂಜ್ಯ ಗುರೂಜಿಯವರು ಉತ್ತರಿಸಲೋಸುಗ ಟೆಲಿಫೋನಿನತ್ತ ಧಾವಿಸಿದರು. ಗಾಳಿಯ ಭರಾಟೆಯಿಂದಾಗಿ, ಕೊರ್ ಅನ್ನುವ ಶಬ್ದದಿಂದಾಗಿ ಗುರುಗಳಿಗೆ ಮಾತನಾಡಿದ್ದೇನೂ ಕೇಳಿರಲಿಲ್ಲ. "ನನಗೇನೂ ಕೇಳಿಸುತ್ತಾ ಇಲ್ಲ. ಜೋರಾಗಿ ಮಾತನಾಡಿ, ಮಾತಾಜಿಯವರನ್ನು ಕರೆಯುತ್ತೇನೆ ಇರಿ" ಎಂದು ಗುರೂಜಿಯವರು ಉತ್ತರಿಸುವುದನ್ನು ಕೇಳಿ, ನಾನು ಅವಸರದಿಂದ ಎದ್ದು ಲೆಕ್ಕದ ಪುಸ್ತಕ-ಪೆನ್ನು-ಕ್ಯಾಷ್ ಹಾಗೆಯೇ ಬಿಟ್ಟು ಕೋಣೆಯಿಂದ ಫೋನಿನ ಬಳಿಗೆ ಧಾವಿಸಿದೆ. ಕೇವಲ ಹದಿನೈದು ಅಡಿಗಳಷ್ಟು ದೂರವನ್ನು ಕ್ಷಣಾರ್ಧದಲ್ಲಿ ಸವೆಸಿ ಕೈಯಲ್ಲಿ ಫೋನ್ ತೆಗೆದುಕೊಂಡು 'ಹಲೋ' ಎನ್ನುವುದರಲ್ಲಿ ಬಾಂಬ್ ಎಸೆದಂಥ ಒಂದು ಅನುಭವ, ಭಯಂಕರವಾದ ಕಿವಿ ಗಡುಚಿಕ್ಕುವ ಶಬ್ದ. ಬಸವ ಮಂಟಪದಿಂದ ಮಾತೆ ಗಂಗಾದೇವಿ ಫೋನ್ ಮಾಡಿದ್ದರು. ಓರ್ವರು ಮಕ್ಕಳ ಪ್ರವೇಶದ ಸಲುವಾಗಿ ಬಂದಿದ್ದು ಅವರಿಗಾಗಿ ವಿವರಗಳನ್ನು ನನ್ನಿಂದ ಪಡೆಯಲು ಫೋನ್ ಮಾಡಿದ್ದರು. ನನಗೆ ಒಂದೆರಡು ಶಬ್ದಗಳನ್ನೂ ಮಾತನಾಡಲಾಗಿರಲಿಲ್ಲ. ಫೋನನ್ನು ಕೆಳಗಡೆ ಕುಕ್ಕಿದೆ. ಅಷ್ಟರಲ್ಲಿ ನೆಲವನ್ನು ಸ್ವಚ್ಛ ಮಾಡುತ್ತಿದ್ದ ಕಲ್ಯಾಣಿ ಗಾಬರಿಯಿಂದ ಬಂದು ನುಡಿದಳು: "ಎಲ್ಲ ಕೆಳಗೆ ಬಿತ್ತು." ಕಣ್ಮುಚ್ಚಿ ಕಣ್ತೆರೆಯುವಲ್ಲಿ ನಾವು ಈವರೆಗೆ ಕುಳಿತಿದ್ದ ಕೋಣೆಯ ಮೇಲ್ಛಾವಣಿ ಸಂಪೂರ್ಣ ಕುಸಿದು, ಪುಡಿ ಪುಡಿಯಾಗಿ ಬಿದ್ದಿತ್ತು. ತ್ವರೆಯಿಂದ ಧಾವಿಸಿ ನೋಡಿ, ಸ್ತಂಭೀಭೂತರಾಗಿ ನಿಂತುಬಿಟ್ಟೆವು. ಮಾತುಗಳೇ ಬಾಯಿಂದ ಹೊರಬರುತ್ತಿಲ್ಲ. ಪೂಜ್ಯ ಗುರೂಜಿಯವರು ಮಲಗಿದ್ದ ಮಂಚದ ಮೇಲೆ ಗೋಡೆಗೆ ಹಾಕಿದ್ದ ಟ್ಯೂಬ್ ಲೈಟನ್ನು ಪುಡಿ ಮಾಡಿ, ಛಾವಣಿಗೆ ಹೊದ್ದಿಸಿದ್ದ ಸಿಮೆಂಟು ತಗಡುಗಳು ಪುಡಿ ಪುಡಿಯಾಗಿ ಬಿದ್ದಿದ್ದವು. ಶೀಟುಗಳ ಮೇಲೆ ಕಟ್ಟಿದ್ದ ಸಿಮೆಂಟಿನ ಕುಂಬಿ ಕತ್ತರಿಸಿ ದೊಡ್ಡ ದೊಡ್ಡ ತುಂಡುಗಳಾಗಿ ಬಿದ್ದಿತ್ತು. ಇನ್ನೊಂದು ಮೂಲೆಯಲ್ಲಿ, ನಾನು ಕುಳಿತಿದ್ದ ಜಾಗದಲ್ಲಿ ಕ್ಯಾಷ್ ಬ್ಯಾಗ್, ಲೆಕ್ಕದ ಪುಸ್ತಕ ಹಾಗೆಯೇ ಇದ್ದು, ಅದರ ಮೇಲೆ ತಗಡಿನ ಚೂರುಗಳು

ಬಿದ್ದಿದ್ದವು. ಕೋಣೆಯ ತುಂಬ ಚೂಪು ಚೂಪಾದ ಶೀಟಿನ ತುಂಡುಗಳು ವಿಕ್ರಾಂತ ಅವಸ್ಥೆಯಲ್ಲಿ ಬಿದ್ದಿದ್ದವು. ಶರವೇಗದಲ್ಲಿ ಬಿರುಗಾಳಿಯೊಡನೆ ಬಂದೆರಗಿದ ಸಿಡಿಲು ಎರಡು ದೊಡ್ಡ ಕೋಣೆಯ ಛಾವಣಿಯನ್ನು ಕುಟ್ಟಿ ಪುಡಿಮಾಡಿ, ಮುಂದೆ ಸಾಗಿತ್ತು. ವಾಸಿಸುತ್ತಿದ್ದ ಕಟ್ಟಡದ ಅನೇಕ ಭಾಗಗಳಲ್ಲಿ ಗೋಡೆ ಬಿರುಕುಬಿಟ್ಟಿದೆ. ಒಂದು ಕಡೆ ನೆಲಗಟ್ಟು (ಫೌಂಡೇಷನ್ ಸಡಲಿದೆ) ಸೀಳಿದೆ. ಇದೆಲ್ಲ ನೋಡಿ, ನಡೆದು ಹೋದ ಘಟನೆ ನೆನೆಸಿಕೊಂಡು ಮೂಕರಾಗಿ ನಿಂತೆವು. ಹೊರಗೆ ರಪರಪನೆ ಅಪ್ಪಳಿಸುತ್ತಿದ್ದ ಮುಸಲಧಾರೆಯ ಮಧ್ಯೆ ಸಂಚರಿಸುವುದೂ ಸಾಧ್ಯವಿರಲಿಲ್ಲ. ಪೂಜೆಗಾಗಿ ಇರಿಸಿದ್ದ ಬಸವಣ್ಣನವರ ಫೋಟೋ ಕೆಳಗೆ ಬಿದ್ದು, ಗಾಜು ಪುಡಿಯಾಗಿತ್ತು : ಆದರೆ ಅಭಯ ಮುದ್ರೆ ಹೊತ್ತು ನಸುನಗುವಂತಿತ್ತು. 'ಅಪ್ಪಾ, ಬಸವಣ್ಣಾ, ನೀನು ಬಿದ್ದು, ನಮಗೆ ಜೀವದಾನ ಮಾಡಿದೆಯಾ ?' ಎಂದು ಹರ್ಷಾತಿರೇಕದಲ್ಲಿ ನಾನು ನುಡಿದೆ. ಇದೊಂದು ಅದ್ಭುತ ದೈವೀ ಲೀಲೆ, ಪವಾಡ ಸದೃಶ್ಯವಾಗಿ ನಡೆದಿತ್ತು. ಪರಮಾತ್ಮನ ಅಖಂಡ ಕರುಣೆಯನ್ನು, ಬಸವಣ್ಣನವರ ಭದ್ರ ರಕ್ಷಾಕವಚದ ಮಹಿಮೆಯನ್ನು ಸಾದೃಶ್ಯಗೊಳಿಸಿತ್ತು. ಬೆಂಗಳೂರಿನಿಂದ ಟೆಲಿಫೋನ್ ಕರೆ ಬಂದಿರದಿದ್ದರೆ, ಎಕ್ಸ್‌ಛೇಂಜ್‌ನವರು ಆ ವೇಳೆಯಲ್ಲಿ ಸಂಪರ್ಕ ಕಲ್ಪಿಸಿರದಿದ್ದರೆ ಗುರೂಜಿಯವರು ತಮ್ಮ ಪಾಡಿಗೆ ತಾವು ಆರಾಮ ಪಡೆಯುತ್ತ ಮಲಗಿರುತ್ತಿದ್ದರು. ನಾನು ಲೆಕ್ಕ ಪತ್ರ ನೋಡುತ್ತ ಕುಳಿತಿರುತ್ತಿದ್ದೆ. ಅನಿರೀಕ್ಷಿತವಾಗಿ ಎರಗಿದ ಸಿಡಿಲು ಬಲಿತೆಗೆದುಕೊಂಡು ಬಿಡುತ್ತಿತ್ತು. ಹೀಗಾಗದೇ ಒಂದು ವೇಳೆ ಟೆಲಿಫೋನ್ ಕರೆಗೆ ನಾನೇ ಉತ್ತರಿಸಲು ಹೋಗಿದ್ದರೆ, ನನಗೆ ಸರಿಯಾಗಿ ಕೇಳಿಬಂದಿರುತ್ತಿತ್ತು, ನಾನೇನೂ ಗುರೂಜಿಯವರನ್ನು ಕರೆಯುತ್ತಿರಲಿಲ್ಲ. ಆಗ ಗುರುಗಳು ಅದೇ ಕೋಣೆಯಲ್ಲಿ ಇರುತ್ತಿದ್ದರು. ಗುರುಗಳು ಮೊದಲು ಹೋದುದರಿಂದ ಅವರಿಗೆ ಪೂರ್ತಿ ಕೇಳ ಬರದ್ದರಿಂದ ನನ್ನನ್ನು ಕರೆದರು. ನಾನು ಹೊರ ಬಂದ ಅರ್ಧ ನಿಮಿಷದಲ್ಲಿ ಸಿಡಿಲೆರಗಿ ಕೋಣೆಯು ಕತ್ತರಿಸಿ ಬಿದ್ದಿತ್ತು. ಪರಮಾತ್ಮನ ಅಗಾಧ ಕೃಪೆಗೆ ಮೂಕರಾಗಿ ನಿಲ್ಲುವಂಥ ಪ್ರಸಂಗ. "ನನ್ನ ಭದ್ರವಾದ ರಕ್ಷಾಕವಚ ನಿಮ್ಮ ಮೇಲಿದೆ. ಇದು ನಿಮ್ಮನ್ನು ಆಧಿಭೌತಿಕ, ಅಧಿದೈವಿಕ; ಆಧ್ಯಾತ್ಮಿಕ ಯಾವುದೇ ಎಡರುಗಳಿಂದಲೂ ಪಾರು ಮಾಡಬಲ್ಲದು. ಈ ಅಭಯಾಶೀರ್ವಾದಕ್ಕೆ ಇದೇ ಸಾಕ್ಷಿ...."ಎಂಬಂತೆ ನಡೆದ ಘಟನೆ ಡಂಗುರ ಸಾರಿತ್ತು. ಮಳೆ ಧಾರಾಕಾರವಾಗಿ ಸುರಿಯುತ್ತಿತ್ತು. ಅದು ನಿಂತಾನಂತರ ಎಲ್ಲೆಲ್ಲೋ ಚದುರಿದ್ದವರೆಲ್ಲ ಬರತೊಡಗಿದರು. ಶೀಟ್ಸ್ ತುಂಡಾಗಿ ಬಿದ್ದಿರುವುದು, ಗಾಳಿ-ಸಿಡಿಲುಗಳ ಹೊಡೆತಕ್ಕೆ ನುಚ್ಚುನೂರಾದುದು- ಎಲ್ಲಾ ನೋಡಿ ದಿಗ್ಭ್ರಾಂತರಾಗಿ ನಿಂತರು. ನಮಗಂತೂ ಇದೊಂದು ಪುನರ್ಜನ್ಮವೇ ಎನಿಸಿತು. ಅಂದಿನ ಸಂಜೆ ಮಲ್ಲೇಶ್ವರಂ ಪ್ರವಚನದಲ್ಲಿ ಅನೇಕ ಸದ್ಭಕ್ತರು ಈ ಕಥೆಯನ್ನು ಕೇಳಿ, ಪುನರ್ಜನ್ಮ ನೀಡಿದುದಕ್ಕಾಗಿ ಬಸವಣ್ಣನನ್ನು ಸ್ಮರಿಸಿ, ನೆರೆದ

Digitalized by e-Sahithya Documentation Forum
Sponsored by Sarayu Foundation Trust

ಸಭಿಕರಿಗೆಲ್ಲ ಸಿಹಿಯನ್ನು ಹಂಚಿದರು. ಅಂದು ನಮ್ಮೊಡನೆ ಗಂಗೋತ್ರಿಗೆ ಬಂದು, ಅಲ್ಲಿದ್ದ ಪ್ರತ್ಯಕ್ಷದರ್ಶಿ ಪ್ರಸಿದ್ಧ ಜಾದೂಗಾರ ಪ್ರೊ. ಶಿವನ್‌ರವರೂ ಈ ಬಗ್ಗೆ ಭಾಷಣ ಮಾಡಿದರು. ಬಸವಣ್ಣನವರ ಒಂದು ವಚನ ಇದರಿಂದ ಚೆನ್ನಾಗಿ ಅರ್ಥವಾಗುತ್ತದೆ.


"ಆಯುಷ್ಯ ತೀರಿದಲ್ಲದೆ ಮರಣವಿಲ್ಲಯ್ಯ.
ಭಾಷೆ ತಪ್ಪಿದಲ್ಲದೆ ದಾರಿದ್ರ್ಯವಿಲ್ಲಯ್ಯ.
ಅಂಜಲದೇಕೋ ಲೋಕವಿಗುರ್ಬಣೆಗೆ
ಅಂಜಲದೇಕೋ ಕೂಡಲ ಸಂಗಮದೇವಾ ನಿಮ್ಮಾಳಾಗಿ.

ಆಯುಷ್ಯ ತೀರಿದಾಗ ಮರಣವು ಬಂದೀತೇ ವಿನಾ, ಅದು ತೀರುವ ಮುನ್ನ ಅಲ್ಲ. ಅಲ್ಲದೆ ಪರಮಾತ್ಮನ ಶ್ರೀಚರಣಕ್ಕೆ ಶರಣಾಗತರಾದ ಬಳಿಕ, ಅವನ ಸಂಕಲ್ಪದಂತೆ ಬದುಕೆಲ್ಲ ನಿಗ್ರಹಿಸಲ್ಪಡುವಾಗ, ಅವನ ಇಚ್ಛೆಯಂತೆ ಇಹದಲ್ಲಿ ಬಾಳುತ್ತಿರುವಾಗ ಸಂರಕ್ಷಣೆಯ ಹೊಣೆ ಹೊತ್ತ ಅವನು ಕಾಯದಿರನೆ ? ಮನುಷ್ಯನಿಗೆ ದಾರಿದ್ರ್ಯ ಬರುವುದಾವಾಗ ? ತಾನು ಕೊಟ್ಟ ಭಾಷೆ ತಪ್ಪಿದಾಗ. ತನ್ನ ಅಂತಃಸಾಕ್ಷಿಗೆ ಅನುಗುಣವಾಗಿ ತಾನು ನಡೆಯುತ್ತೇನೆ ಎಂದು ಮುನ್ನಡೆಯುವವನಿಗೆ ದೈವೀಕರುಣೆ ಕಟ್ಟಿಟ್ಟದ್ದು. ಲೋಕದ ವಿಗುರ್ಬಣೆಯ ಮೇಲೆ, ಅನ್ಯರು ಆಡುವ ಕಿಡುನುಡಿ, ಕುಹಕ ಕುತ್ಸಿತಗಳ ಮೇಲೆ ಓರ್ವನ ವ್ಯಕ್ತಿತ್ವವನ್ನು ನಿರ್ಣಯಿಸಲು ಬರದು. ಅವನ ಜೀವನದ ಪ್ರಗತಿಯ ಮೇಲೆ ಮಾತ್ರ ನಿರ್ಧರಿಸಬೇಕು. ಕೂಡಲ ಸಂಗಮದೇವನ ಆಳಾಗಿ ಶರಣಾಗತನಾದವನು ಮರಣಕ್ಕಾಗಲಿ, ದಾರಿದ್ರ್ಯಕ್ಕಾಗಲಿ, ಲೋಕದ ಕಿಡುನುಡಿಗಾಗಲೀ ಅಂಜಬೇಕಾಗಿಲ್ಲ, ಅಳುಕಬೇಕಾಗಿಲ್ಲ. ತನ್ನ ಸಾಕ್ಷಿಯಾಗಿ ತಾನು ನಡೆಯಬೇಕು.

ದೈವೀಕರುಣೆ ಅತ್ಯಂತ ಅನಿರೀಕ್ಷಿತವಾಗಿ ಕಾರ್ಯಮಾಡುವುದು. ದೇವರಿಗೆ ಮಾನವರಂತೆ ಕಣ್ಣಿಲ್ಲ, ಆದರೂ ಎಲ್ಲವನ್ನೂ ನೋಡಬಲ್ಲ. ಅದಕ್ಕೇ ಸರ್ವಜ್ಞ ಎಂಬ ಬಿರುದು ಅವನಿಗೆ; ಅವನಿಗೆ ಖಂಡಿತವಾದ ರೂಪು, ಕೈಗಳಿಲ್ಲ ಆದರೂ ಸರ್ವಶಕ್ತನಾಗಿ ಎಲ್ಲವನ್ನೂ ಮಾಡಬಲ್ಲ. ನಮ್ಮನ್ನು ಸಿಡಿಲ ಹೊಡೆತದಿಂದ ತಪ್ಪಿಸಲು ಯಾರಿಗೋ ಪ್ರೇರಣೆ ನೀಡಿ ಫೋನ್ ಮಾಡುವಂತೆಮಾಡಿ, ಎಕ್ಸ್‌ಛೇಂಜ್‌ನವರೂ ಆಗಲೇ ಕೊಡುವಂತೆ ಮಾಡಿ, ನಮ್ಮನ್ನು ಫೋನ್‌ಬಳಿ ವಿಲಕ್ಷಣವಾಗಿ ಕರೆಸಿಕೊಂಡು, ಕ್ಷಣಾರ್ಧದಲ್ಲಿ ಅಪ್ಪಳಿಸಲಿದ್ದ ಸಿಡಿಲಿನ ಹೊಡೆತದಿಂದ ರಕ್ಷಿಸುವ ವ್ಯೂಹರಚನೆಯನ್ನು ನೋಡಿದರೆ ದೈವೀಶಕ್ತಿಯ ಮಹಿಮೆಗೆ ಅಚ್ಚರಿ ಎನಿಸದಿರದು. ಇಂಥ ದೈವೀಶಕ್ತಿಯನ್ನು ನಂಬಲಿಕ್ಕೆ ನಮಗೆ ದೊರೆಯುವ ಬಲವಾದ ಪುರಾವೆಗಳು ಅನಿರೀಕ್ಷಿತ, ಪವಾಡ ಸದೃಶ್ಯ ಘಟನೆಗಳು.

★

ಮಾತೆ ಮಹಾದೇವಿ



—ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ಸದ್ಭಕ್ತನ ಸಲ್ಲಕ್ಷಣ

ಭಕ್ತನು ತಾನು ತಾನಾಗಿರಬೇಕು
ಸಕಲ ಪ್ರಾಣಿಗಳ ತನ್ನಂತೆ ಕಾಣಬೇಕು
ತನು ಮನ ಧನವ ಗುರುಲಿಂಗ ಜಂಗಮಕ್ಕೆ ಸವೆಸಬೇಕು
ಅಪಾತ್ರದಾನವ ಮಾಡಲಾಗದು
ಸಕಲೇಂದ್ರಿಯಂಗಳ ತನ್ನ ವಶವ ಮಾಡಬೇಕು
ಇದೇ ಮೊದಲಲ್ಲಿ ಬೇಹ ಶೌಚ ನೋಡಾ
ಲಿಂಗವ ಪೂಜಿಸಿ ಪ್ರಸಾದವಂ ಪಡೆವಡೆ
ಇದೇ ಸಾಧನ ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ.

— ಚನ್ನಬಸವಣ್ಣನವರು

ಅಧ್ಯಾತ್ಮಜೀವಿ ಸದ್ಭಕ್ತನು ತಾನು ತಾನಾಗಿರಬೇಕು ಎಂದರೆ ಅಧ್ಯಾತ್ಮಿಕ ಅರ್ಥದಲ್ಲಿ ಸ್ವರೂಪಾನಂದದಲ್ಲಿ ತಲ್ಲೀನನಾಗಿರಬೇಕು, ಸದಾ ಆತ್ಮಾನುಸಂಧಾನದಲ್ಲಿ ತೊಡಗಿರಬೇಕು ಎಂದರ್ಥ. ಲೋಕದ ರಂಗದಲ್ಲಿ ಕರ್ತವ್ಯ-ಕರ್ಮಗಳನ್ನು ಮಾಡುತ್ತಿದ್ದರೂ, ಅಂತರ್ಮನವು ಶಿವಧ್ಯಾನಾಮೃತವನ್ನು ಸದಾ ಪಾನಮಾಡಬೇಕು. ಇನ್ನು ವ್ಯವಹಾರರಂಗದಲ್ಲಿ ಹೇಗಿರಬೇಕು ? ಸಕಲ ಜೀವದಯಾಪಾರಿಯಾಗಿ, ತನ್ನಲ್ಲಿ ಇರುವಂತಹ ಆತ್ಮವೇ ಸಕಲ ಜೀವರಾಶಿಗಳಲ್ಲಿ ಇದೆ ಎಂತಲೂ, ಆ ಆತ್ಮವು ಪರಮಾತ್ಮನ

Digitalized by e-Sahithya Documentation Forum
Sponsored by Sarayu Foundation Trust

ಅಂಶವಲ್ಲದೆ ಬೇರೆ ಅಲ್ಲವೆಂತಲೂ ಭಾವಿಸಬೇಕು. ಆಗ ಮಾತ್ರವೇ ಸಕಲ ಜೀವ ರಾಶಿಯ ಬಗೆಗೆ ದಯಾರಸ ಪುಟಿಯಲು ಸಾಧ್ಯ.

ಮಾನವನಲ್ಲಿರುವ ಸಂಪತ್ತು ಮೂರು: ತನು–ಮನ–ಧನ. ಈ ಮೂರೂ ಪರಾರ್ಥಕ್ಕಾಗಿ ಸವೆಯಬೇಕು. ತನುವು ಗುರುವಿಗಾಗಿ ಸವೆಯಬೇಕು. ಇದರರ್ಥ:

1) ಧರ್ಮಗುರು, ಆದಿಗುರು ಬಸವಣ್ಣನವರು ಹಾಕಿಕೊಟ್ಟ ವಿಧಿಶಾಸನಗಳ ಆಚರಣೆಯಲ್ಲಿ ತನು ಸವೆದು ಪಕ್ವವಾಗಬೇಕು. ಉದಾಹರಣೆಗೆ ಕಾಯಕವೇ ಕೈಲಾಸ ಎಂಬ ಸೂತ್ರವನ್ನು ಅವರು ಹಾಕಿಕೊಟ್ಟಿರಷ್ಟೆ; ದಾಸೋಹವೇ ದೇವಧಾಮ ಎಂಬ ತತ್ತ್ವವನ್ನು ಮನಗಾಣಿಸಿಕೊಟ್ಟಿರುವರಷ್ಟೆ; ದಯವೇ ಧರ್ಮದ ಮೂಲ ಎಂದು ಘೋಷಿಸಿರುವರಷ್ಟೆ. ಇಂಥ ತತ್ತ್ವಗಳನ್ನು ಅನುಷ್ಠಾನಿಸಲು ದೇಹವು ಸವೆಯಬೇಕು.

2) ದೀಕ್ಷಾಗುರುವು ದೀಕ್ಷಾಕಾಲದಲ್ಲಿ ಧರ್ಮಗುರುವಿನ ಧರ್ಮಶಾಸ್ತ್ರಗಳ ತತ್ತ್ವವನ್ನು ಮನಗಾಣಿಸಿ, ಅವನ್ನು ಅನುಷ್ಠಾನಮಾಡಲು ಬೋಧಿಸಿ, ಪ್ರತಿಜ್ಞೆ ಮಾಡಿಸುವನಷ್ಟೇ. ಆ ವಾಣಿಯನ್ನು ಅನುಸರಿಸಲು ತನು ಸವೆಯಬೇಕು.

3) ಗುರುವು ಬಹಿರಂಗದ ಅಷ್ಟಾವರಣ; ಅದಕ್ಕೆ ಸಮಾನವಾದ ಅಂತರ್ ಅಷ್ಟಾವರಣವೇ ಅರಿವು. ಇಂಥ ಅರಿವಿನ ಸಂಪಾದನೆಗಾಗಿ ತನುವು ಸವೆಯಬೇಕು.

ಮನಸ್ಸು ಒಂದು ಅಂತಃಕರಣ, ಅದೊಂದು ಸಂಪತ್ತು. ಮನ್ ಎಂಬ ಧಾತುವಿನಿಂದಲೇ "ಮಾನವ" ಎಂಬ ಪದದ ಉತ್ಪತ್ತಿ. ವಿಚಾರ ಶೀಲತೆ, ವಿಮರ್ಶಾಪ್ರಜ್ಞೆ ಮನದ ವಿಶೇಷ ಗುಣಗಳು. ಇಂಥ ಗುಣಗಳುಳ್ಳ ಮನಸ್ಸು ಪಡೆದ ಮಾನವ ಅದನ್ನು ಪರಮಾತ್ಮನ ಚಿಂತನೆಗೆ, ಅವನ ಸ್ವರೂಪವನ್ನು ಅರಿಯಲು ಬಳಸಬೇಕು. ಅಂಥ ಮನಸ್ಸನ್ನು ಕೊಟ್ಟ ಮಹಾದೇವನನ್ನು ಕೃತಜ್ಞತೆಯಿಂದ ಸ್ಮರಿಸಬೇಕು.

"ಧನ" ಎಂಬುದಕ್ಕೆ ಎರಡು ಅರ್ಥಗಳ ಬಳಕೆ ವಚನ ಸಾಹಿತ್ಯದಲ್ಲಿದೆ– ಸಂಪತ್ತು ಮತ್ತು ಪ್ರಾಣ ಎಂಬುದಾಗಿ. ಈ ಧನವು ಜಂಗಮಕ್ಕೆ ಸವೆಯಬೇಕು. ಜಂಗಮವೆಂದರೆ (1) ಜ್ಞಾನಿ, ತ್ಯಾಗಿ ಎಂಬುದಾಗಿಯೂ (2) ಜೀವಂತ ಜನರ ಒಕ್ಕೂಟವಾದ ಸಮಾಜ ಎಂತಲೂ ಅರ್ಥೈಸಬಹುದು. ಧನವು ಅಂದರೆ ಸಂಪತ್ತು ಜ್ಞಾನಿಗಳು, ತ್ಯಾಗಿಗಳು ಆದವರಿಗೆ ಸಲ್ಲಿಸುವುದರ ಮುಖಾಂತರ ಸದ್ವಿನಿಯೋಗವಾಗಬೇಕು. ದೇವರು ನಿರಾಕಾರ, ನಿರವಯವ; ಅವನಿಗೆ ಉಣ್ಣಲು ಕೈ, ಬಾಯಿ, ಕಣ್ಣುಗಳಿಲ್ಲ...ಅವನ ಸಾಕಾರಮುಖವೇ ಸಮಾಜ. ಸಮಾಜಕ್ಕೆ ಸಂದಾಗ ದೇವರಿಗೆ

ಸಂತೃಪ್ತಿ. "ಜಂಗಮಾಪ್ಯಾಯನವಾದರೆ ಲಿಂಗ ಸಂತೃಪ್ತಿಯಯ್ಯಾ," "ಲಿಂಗದ ಬಾಯಿ ಜಂಗಮ" ಎಂಬ ಬಸವವಾಣಿ ಇದನ್ನೇ ಸಾರುತ್ತದೆ. ಇದಕ್ಕೆ ಧನಸಂಪತ್ತು ಸವೆದು ಸಾರ್ಥಕವಾಗಬೇಕು.

ಪ್ರಾಣವೂ ಒಂದು ಸಂಪತ್ತು. ಆಯುಷ್ಯದ ಪೂರ್ಣವಿರಾಮವೇ ಸಾವು. ದೀಪವು ಹಚ್ಚಿದ ತಕ್ಷಣ ಉರಿಯಲಾರಂಭಿಸುತ್ತದೆ. ಹಾಗೆಯೇ ಜೀವದ ದೀಪವು ಜನನ ಕಾಲದಲ್ಲಿ ಹಚ್ಚಲ್ಪಟ್ಟು ಸಾವಿನವರೆಗೂ ಉರಿಯುತ್ತದೆ. ಇದು ಸಮಾಜದ ಹಿತ, ರಾಷ್ಟ್ರದ ಏಳಿಗೆಗಾಗಿ ಉರಿದರೆ ಮಾತ್ರ ಸಾರ್ಥಕವಾಗುತ್ತದೆ. ಹೀಗೆ ತನು, ಮನ, ಧನದ ಸಂಪತ್ತುಗಳು ಗುರುಲಿಂಗ ಜಂಗಮಕ್ಕೆ ಸವೆಯಬೇಕು.

"ಅಪಾತ್ರದಾನವ ಮಾಡಲಾಗದು" ಎಂಬುದು ಚನ್ನಬಸವಣ್ಣನವರ ಸತ್ಯನಿಷ್ಠುರ ವಾಣಿ. ಯಾರಿಗಾದರೇನು ದಾನ ಮಾಡಿದರೆ ಸಾಕು ಪುಣ್ಯಪ್ರಾಪ್ತಿ ಎಂಬುದನ್ನು ಶರಣರು ಒಪ್ಪರು: ಚಾಕುವೊಂದನ್ನು ಕಟುಕನ ಕೈಗೆ ದಾನಮಾಡಿದರೆ ಆಗುವ ಪರಿಣಾಮವೇ ಬೇರೆ; ವೈದ್ಯನಿಗೆ ದಾನಮಾಡಿದರೆ ಆಗುವ ಪರಿಣಾಮವೇ ಬೇರೆ. ಒಂದರಿಂದ ಜೀವಹರಣ; ಇನ್ನೊಂದರಿಂದ ಜೀವರಕ್ಷಣೆ. ಕೊಟ್ಟುದು ಸಾರ್ಥಕವಾಗುತ್ತದೆಯೇ ಎಂಬುದನ್ನು ಪರಿಶೀಲಿಸಿಕೊಡುವುದು ಶ್ರೇಯಸ್ಕರ.

ಕಾಯವು ದುರಾಚಾರ, ದುರ್ವ್ಯಸನಗಳಲ್ಲಿ ತೊಡಗದೆ, ಸದಾಚಾರ ಸದ್ವೃತ್ತಿಗಳಲ್ಲಿ ತೊಡಗಬೇಕು. ಆ ರೀತಿಯಲ್ಲಿ ಇಂದ್ರಿಯಗಳನ್ನು ತೊಡಗಿಸುವುದು ದೇಹ ಶೌಚ, ಅಥವಾ ಬಹಿರಂಗಶುದ್ಧಿ. ಈ ಬಹಿರಂಗಶುದ್ಧಿಯಲ್ಲಿ ಶುಚಿತ್ವ ಮುಂತಾದ ಆರೋಗ್ಯ ನಿಯಮಗಳು, ಸದ್ವೃತ್ತಿಯೇ ಮುಂತಾದ ನೈತಿಕ ನಿಯಮಗಳು, ಕಾಯಕನಿಷ್ಠೆ ಮುಂತಾದ ಸಾಮಾಜಿಕ ಕರ್ತವ್ಯಗಳು ಎಲ್ಲವೂ ಮೇಳವಿಸಬೇಕು. ತನು ಸ್ವಚ್ಛವಾಗುವುದು ಸ್ನಾನದಿಂದ, ಶುದ್ಧವಾಗುವುದು ಕಾಯಕದಿಂದ, ದಿವ್ಯವಾಗುವುದು ಪೂಜೆ, ಜಪ, ತಪಗಳಿಂದ. ಈ ಮೂರರ ಮೇಳವೇ ಬಾಹ್ಯ ಶೌಚ.

ಹೀಗೆ ಶೌಚವನ್ನು ಅಳವಡಿಸಿಕೊಂಡು ಅಂತರಂಗ ಶೌಚಕ್ಕಾಗಿ ಪ್ರಾರ್ಥನೆ, ಧ್ಯಾನ, ಅರ್ಚನೆಗಳಲ್ಲಿ ತೊಡಗಿ ಲಿಂಗಪ್ರಸಾದವನ್ನು ಪಡೆಯಬೇಕು. ಲಿಂಗದೇವನ ಅಂತಃಕರುಣೆಯ ಪ್ರತಿಫಲವಾದ ಪ್ರಸಾದದಿಂದ ಪ್ರಸನ್ನ ಚಿತ್ತವನ್ನು, ಪ್ರಶಾಂತ ಬದುಕನ್ನು ಹೊಂದಬೇಕು. ಇದುವೇ ಶರಣನ ಆದರ್ಶ ಜೀವನ. ★

ದುರ್ವಸನಿ ದುರಾಚಾರಿ ಎಂದೆನಿಸದಿರಯ್ಯ.
ಎನ್ನ ಲಿಂಗ ವ್ಯಸನಿ ಜಂಗಮಪ್ರೇಮಿ ಎಂದೆನಿಸಯ್ಯ.
ಕೂಡಲ ಸಂಗಮ ದೇವಾ, ಸೆರಗೊಡ್ಡಿ ಬೇಡುವೆನು.

Digitalized by e-Sahithya Documentation Forum
Sponsored by Sarayu Foundation Trust

ಸಮಸ್ಯೆ! ಸಮಾಧಾನ!

ವಿ. ಎಸ್. ಹಿರೇಮಠ, ಚಂದಾ ನಂಬರ್ 9020, ಎಗಲಕೇರಾ

★ ಡಿ. ವಿ. ಜಿ. ಯವರು ತಮ್ಮ ಮಂಕುತಿಮ್ಮನ ಕಗ್ಗದ ಆದಿಯಲ್ಲಿ 'ಯಾವ ವಿಷ್ಣುವು ವಿಶ್ವಾದಿ ಮೂಲನು, ಮಾಯಾಲೋಲನು, ಸರ್ವೇಶ ಪರಬೊಮ್ಮನು ಆಗಿಹನು' ಎಂದು ಕಾಣದಿದ್ದರೂ ನಂಬಿಕೆಯಿಂದ ನಂಬಿರುವೆವೋ ಆ ವಿಚಿತ್ರಕೆ ನಮಿಸು ಎಂದು ಹೇಳಿದ್ದಾರೆ. ಯಾರಿಗೂ ಕಾಣದ ಹೆಣ್ಣು ಗಂಡು ಎರಡೂ ಅಲ್ಲದ ಆ ಸತ್ಯವನ್ನು ನಂಬುವುದು ಹೇಗೆ? ಸ್ತುತಿಸುವುದು ಹೇಗೆ? ಪೂಜಿಸುವುದು ಹೇಗೆ?

* ಆಕಾರ, ಸ್ತ್ರೀತ್ವ, ಪುರುಷತ್ವ, ನಾಮರೂಪಗಳಿರುವುದು ಮಹಾತ್ಮರಿಗೇ ವಿನಾ, ದೇವರಿಗಲ್ಲ. ಯಾವುದಾದರೂ ಒಂದು ದಿನ ಜನಿಸಿ, ಬಾಳಿ, ಮರಣಿಸಿದವರಿಗೆ ದೇಹ, ಆಕಾರಗಳುಂಟು. ನಿರಾಕಾರ, ನಿರ್ಗುಣನಾದ ದೇವನ ಇರುವನ್ನು, ಓತಪ್ರೋತವಾಗಿ ತುಂಬಿತುಳುಕುವ ವ್ಯಾಪಕತ್ವವನ್ನು ಅರಿತು, ನಂಬಿ, ಮನಬುದ್ಧಿಗಳಿಂದ ಚಿಂತಿಸಬೇಕು, ಅನುಸಂಧಾನ ಗೈಯಬೇಕು. ಆದರೆ ದೇವನು ಸರ್ವಶಕ್ತನಾದ್ದರಿಂದ ಅವನು ಭಕ್ತನು ಭಜಿಸುವ ಯಾವುದೇ ಆಕಾರದಲ್ಲಿ ಗೋಚರಿಸಬಲ್ಲ. ನಿರಾಕಾರ ವಿದ್ಯುತ್ ವಿವಿಧಾಕಾರದ ಬಲ್ಬ್‌ಗಳಲ್ಲಿ ಹರಿದು ಬೆಳಕುಕೊಟ್ಟರೂ, ಬಲ್ಬಿನ ಆಕಾರವೇ ವಿದ್ಯುತ್ತಿನ ಆಕಾರವಲ್ಲವಾದಂತೆ ಆಕಾರದಲ್ಲಿ ದರ್ಶನ ನೀಡಿದ ಮಾತ್ರಕ್ಕೆ ಅದೇ ದೇವರ ಆಕಾರವಲ್ಲ. ನಿರಾಕಾರ ದೇವನನ್ನು ಸಾಕಾರ ಅರ್ಚನೆಗೆ ತರಲಿಕ್ಕಾಗಿಯೇ ಬಸವಣ್ಣನವರು ಹೆಣ್ಣು-ಗಂಡು ಮುಂತಾದ ಯಾವುದೇ ಆಕಾರ ಕೊಡದೆ ವಿಶ್ವದ ಆಕಾರದಲ್ಲಿ 'ದೇವ'ನನ್ನು ಕಲ್ಪಿಸಿ, ಪೂಜೆಗೆ ಇಷ್ಟಲಿಂಗವನ್ನು ಕೊಟ್ಟರು. ಅದು ಅತ್ಯಂತ ವೈಚಾರಿಕ, ವೈಜ್ಞಾನಿಕ, ಯೌಗಿಕ ಅರ್ಥವನ್ನುಳ್ಳ ಕುರುಹು.

ಅವರೇ ಕೇಳಿದ ಪ್ರಶ್ನೆ

★ ಪರಮಾತ್ಮನು ತನ್ನನ್ನು ಸ್ತುತಿಸುವಂತೆ, ಪೂಜಿಸುವಂತೆ ಬಯಸುವುದೇಕೆ? ನಾವು ಪೂಜಿಸುವುದರಿಂದಲೇ ಅವನಿಗೆ ತೃಪ್ತಿಯೇ? ತನ್ನನ್ನು ಸ್ತುತಿಸಲು ಆ ಸತ್ಯ ಬಯಸುವುದಾದರೆ ಸಾಮಾನ್ಯ ಮಾನವರಿಗೂ ಆ ಮಹಾನ್ ಪರಬ್ರಹ್ಮನಿಗೂ ವ್ಯತ್ಯಾಸವೇನು?

* ಪರಮಾತ್ಮನ ಸಂತೃಪ್ತಿಗಾಗಿ ನಾವು ಅವನನ್ನು ಆರಾಧಿಸಬೇಕೆಂಬುದು ಮೂರ್ಖವಿಚಾರ. ಬ್ರಹ್ಮಾಂಡದೊಡೆಯನಾದ ಅವನಿಗೆ ನಾವು ಎರೆಯುವ ಒಂದು ಪಂಚಪಾತ್ರೆ ನೀರಿನಿಂದ ಆಗಬೇಕಾದುದೇನು? ಬೆಳಗುವ ಒಂದು ಕರ್ಪುರದ ಬಿಲ್ಲೆಯ ಬೆಳಕಿನಲ್ಲಿ ಅವನು ನೋಡುವನೇನು? ನಮ್ಮ ಸಂತೃಪ್ತಿಗಾಗಿ, ಕೃತಜ್ಞತಾ ಸಮರ್ಪಣೆಗಾಗಿ ನಾವು ಪೂಜಿಸಬೇಕು. ಇಳೆ ಮಳೆ ಬೆಳೆ ಎಲ್ಲ ಕೊಡುವ ಅವನಿಗೆ ಅವನು ಕೊಟ್ಟ ದಾನಕ್ಕಾಗಿ ನಾವು ಕೃತಜ್ಞತೆ ಸಲ್ಲಿಸುತ್ತೇವೆ, ವಿವಿಧ ವಸ್ತುಗಳನ್ನು ಅರ್ಪಿಸಿ. ತಮ್ಮ ಮನೆಯಲ್ಲಿ ಕಾರ್ಯೋನ್ಮುಖರಾಗಿರುವ ನಿಮ್ಮ ಮಿತ್ರರ ಗಮನ ಸೆಳೆಯಲು ಕರೆಗಂಟೆ ಬಾರಿಸುವಂತೆ ಜಗನ್ನಿಯಾಮಕನಾದ ದೇವನ ಗಮನ ನಮ್ಮ ಮೇಲೆ ಬೀಳುವಂತೆ ಮಾಡಲು ನಾವು ಮಂತ್ರಜಪ, ಪ್ರಾರ್ಥನೆ, ಸ್ತುತಿಗಳ ಕರೆಗಂಟೆ ಒತ್ತುತ್ತೇವೆ.

ಶಾರದಾ, ಊರುಬೇಡ

★ ನಾನು ನನ್ನ ಜೀವನದಲ್ಲಿ ಬಸವಣ್ಣನವರ ಅನುಗ್ರಹ ಪಡೆಯುವ ಉದಾತ್ತ ಧ್ಯೇಯ ಇಟ್ಟುಕೊಂಡಿದ್ದೇನೆ. ಆದರೆ ಸಂಸಾರ ಜೀವನದಲ್ಲಿ ಸಿಕ್ಕಿಬಿದ್ದಿದ್ದೇನೆ. ಹೀಗಾಗಿ ಕರ್ತವ್ಯ, ಕೆಲಸಗಳ ಒತ್ತಡ ಬಹಳ. ಭಕ್ತಿಯೇನೋ ಬೆಟ್ಟದಷ್ಟಿದೆ; ಆದರೆ ಭಕ್ತಿಗೆ ತಕ್ಕಂತೆ ಪೂಜೆ-ಧ್ಯಾನಾದಿಗಳನ್ನು ಮಾಡಲು ಸಮಯ ಸಾಕಾಗದು. ಹೀಗಾದರೆ ನಾನು ಆ ಬಸವ ತಂದೆಯ ಅನುಗ್ರಹ ಈ ಜನ್ಮದಲ್ಲಿ ಪಡೆಯಲು ಸಾಧ್ಯವೆ?

* ಖಂಡಿತಾ ಸಾಧ್ಯ. ಭಕ್ತಿಯಿಂದಲೆ ಶಕ್ತಿ, ಭಕ್ತಿಯಿಂದಲೆ ಮುಕ್ತಿ. ಧ್ಯಾನ-ಪೂಜೆ ಮಾಡಲು ಸಮಯ ಸಾಕಾಗದು ಎಂದು ಚಿಂತಿಸಬೇಡಿ. ಪ್ರತಿನಿತ್ಯ ಔಪಚಾರಿಕವಾಗಿ ಕೆಲವು ನಿಮಿಷಗಳ ತನಕ ಪೂಜೆ-ಧ್ಯಾನಾದಿಗಳನ್ನು ಬೆಳಿಗ್ಗೆ-ಸಂಜೆ ಮಾಡಿರಿ. ಬಾಕಿ ವೇಳೆಯಲ್ಲಿ ಕೆಲಸ-ಕರ್ತವ್ಯ ಮಾಡುವಾಗ ಮನಸ್ಸು ಸತತವಾಗಿ ಆ ಬಸವ ತಂದೆಯ ನಾಮಸ್ಮರಣೆ ಮಾಡುತ್ತಿರಲಿ. ನೀವು ಆ ತಂದೆಯ ಒಂದು ಅಂಗವಾಗಿ ಈ ಕೆಲಸಗಳನ್ನು ನಿರ್ವಹಿಸುತ್ತಿರುವಿರಿ ಎಂಬ ನಂಬಿಕೆ ಅಳವಡಲಿ. ಬಹಿರಂಗದಲ್ಲಿ ದೇಹ ಯಾವುದೇ ಕೆಲಸ ಮಾಡುತ್ತಿದ್ದರೂ ಅಂತರ್ಮನ ಧ್ಯಾನದಲ್ಲಿ ಲೀನವಾದರೆ ಈ ಜನ್ಮದಲ್ಲೇ ನಿಮಗೆ ದಿವ್ಯಾನುಭೂತಿ ದೊರೆಯುವುದು. ಆಗ ಸಂಸಾರ ಜೀವನದ ಕೋಟಲೆ ನಿಮಗೆ ಬಾಧಕವಾಗದು.

ಹುಚ್ಚಪ್ಪ ಮಾಸ್ಟರ್, ದಾವಣಗೆರೆ

★ ನೀವು ನಿಮ್ಮ ಶಿಷ್ಯರು ಬೆಳೆಯಲು ಅವಕಾಶ ಕೊಡುವುದಿಲ್ಲ ಎಂದು ಓರ್ವರು ನುಡಿಯುತ್ತಿದ್ದರು. ಇದು ನಿಜವೆ?

Digitalized by e-Sahithya Documentation Forum
Sponsored by Sarayu Foundation Trust

* ಇದು ತುಂಬಾ ಹಾಸ್ಯಾಸ್ಪದ ಆರೋಪ. ಏಕೆಂದರೆ ಭಸ್ಮಾಸುರನಿಗೆ ವರಕೊಟ್ಟು, ಶಿವನು ತೊಂದರೆಗೆ ಒಳಗಾದಂತೆ ಸಾಮಾನ್ಯವಾಗಿ ಹೆಚ್ಚಿನ ಪ್ರೋತ್ಸಾಹ ನೀಡಿ ಮುಂದೆ ಬರಲಿ, ಕೀರ್ತಿಶಾಲಿಗಳಾಗಲಿ ಎಂದು ಅವಕಾಶಕೊಟ್ಟು ಶಿಷ್ಯರಿಂದಲೇ ಸಾಕಷ್ಟು ತೊಂದರೆಗೆ ಈಡಾಗಿದ್ದೇವೆ. ಆಲದ ಗಿಡ ತನ್ನ ಆಶ್ರಯದಲ್ಲಿ ಯಾವ ಗಿಡವೂ ಬೆಳೆಯಲು ಅವಕಾಶ ಕೊಡದು. ಹಾಗೆಯೇ ಗುರುವೂ ತಾನಷ್ಟೇ ಬೆಳೆಯುವುದು, ಕೀರ್ತಿಶಾಲಿಯಾಗುವುದು ದೊಡ್ಡದಲ್ಲ, ಇನ್ನಷ್ಟು ಜನ ದೈವೀ ಕಾರ್ಯಕರ್ತರನ್ನು ತಯಾರು ಮಾಡಿ, ಧರ್ಮ ಪ್ರಚಾರ ಮಾಡಿಸಬೇಕು ಎಂದು, ಪ್ರತಿಭೆ ವಿಕಾಸವಾಗಲು ನಾವು ಕೊಟ್ಟಷ್ಟು ಅವಕಾಶ ಬೇರಾರೂ ಕೊಡಲಿಕ್ಕಿಲ್ಲ. ಹೀಗಾಗಿ ಬೆಕ್ಕು ಹುಲಿಗೆ ವಿದ್ಯೆ ಕಲಿಸಿ ತಾನೇ ವಿಪತ್ತು ತಂದುಕೊಂಡಂತಹ ಅನೇಕ ಪ್ರಸಂಗಗಳಿವೆ ನಮ್ಮಲ್ಲಿ. ಆದರೇನು, ನಾವು ನಿರಾಶರಾಗಿಲ್ಲ. ನೂರು ಮಾವಿನ ಹೀಚಿನಲ್ಲಿ ಕೆಲವು ಉದುರಬಹುದು, ಇನ್ನು ಕೆಲವು ಕೊಳೆಯಬಹುದು; ಐವತ್ತಾದರೂ ಹಣ್ಣಾಗಿ ಲೋಕಕ್ಕೆ ತೃಪ್ತಿ ನೀಡಲಿ ಎಂದು ಆಶಾವಾದಿಗಳಾಗಿ ಪ್ರಯತ್ನ ಮಾಡಿಯೇ ಮಾಡುತ್ತೇವೆ. ಶಿಲ್ಪಿ ಕಟೆಯುವ ಎಲ್ಲ ಪ್ರತಿಮೆಗಳು ಶಿಲ್ಪಿಗೆ ಕೀರ್ತಿ ತರಲಿಕ್ಕಿಲ್ಲ. ಯಾವುದಾದರೊಂದು ಶಿಲ್ಪಕೃತಿ ಅವನನ್ನು ಅಮರನನ್ನಾಗಿ ಮಾಡಬಹುದು—ಇಂಥ ಆಶಾವಾದ ನಮ್ಮದು.

ಜಿ. ಮುದ್ದಪ್ಪ, ಗೊಂಡೇದಹಳ್ಳಿ, ಅಜ್ಜಂಪುರ

★ ಲಿಂಗೈಕ್ಯರಾದವರ ಹೆಸರಿನಲ್ಲಿ ವಾರ್ಷಿಕ, ಮಾಸಿಕ, ಪಾಕ್ಷಿಕ ಪುಣ್ಯತಿಥಿ ಆಚರಿಸುವುದು ಸರಿಯೆ? ಇದು ಅವರಿಗಾಗಿ ಮಾಡುವುದೇ ಅಥವಾ ನಮ್ಮ ತೃಪ್ತಿಗಾಗಿ ಮಾಡುವುದೆ?

* ಬಸವ ತತ್ತ್ವದ ಪ್ರಕಾರ (ಮತ್ತು ವಿವೇಕಜ್ಞಾನದ ಪ್ರಕಾರವೂ ಸಹ) ಪುಣ್ಯತಿಥಿ ಆಚರಿಸುವುದು ಶುದ್ಧ ತಪ್ಪು. ಏಕೆಂದರೆ ತಿಥಿ-ಗಳಿಗೆಗಳನ್ನೇ ಶರಣರು ನಂಬರು. ಪುಣ್ಯತಿಥಿ, ಹಿರೇರಹಬ್ಬ ಅಂತ ಜನರು ಆಚರಿಸುವುದು ಅರ್ಥಹೀನ; ಪುನರ್ಜನ್ಮ ಸಿದ್ಧಾಂತದ ಪ್ರಕಾರ ದೇಹವನ್ನು ತ್ಯಜಿಸುತ್ತಿದ್ದಂತೆಯೇ ಆತ್ಮವು ಇನ್ನೊಂದು ದೇಹವನ್ನು ತನ್ನ ಸಂಸ್ಕಾರಕ್ಕೆ ಅನುಗುಣವಾಗಿ ಹೊಂದಿ, ನೆಲೆಸುವುದು. ಇನ್ನು ಜೀವನ್ಮುಕ್ತರಾದರೆ ಅವರ ಆತ್ಮ ಸಚ್ಚಿದಾನಂದ ಬ್ರಹ್ಮನಲ್ಲಿ ಲೀನವಾಗುವುದು, ತನ್ನ ಸ್ವತಂತ್ರ ಇರುವಿಕೆ ಕಳೆದುಕೊಂಡಿರುವುದು; ಹೀಗಾಗಿ ಯಾವ ಆತ್ಮಕ್ಕೆ, ಹೇಗೆ ಕರೆದು ಉಣ್ಣಿಸುವರು? ಸಾವಿಲ್ಲದ ಶರಣರ ಪುಣ್ಯತಿಥಿ ಇನ್ನೂ ಹಾಸ್ಯಾಸ್ಪದ. ಶರಣ ಧರ್ಮದ ಪ್ರಕಾರ ಗಣಾರಾಧನೆ ಅಥವಾ ಗಣಪರ್ವ ಮಾತ್ರ ಮಾಡಬಹುದು. 'ಗಣ' ಎಂದರೆ ಸಮಾಜ, ಸಮೂಹ. ಅವರ ಸೇವೆಯನ್ನು, ದಾಸೋಹವನ್ನು ಲಿಂಗೈಕ್ಯರ ಹೆಸರಿನಲ್ಲಿ ಮಾಡಿ, ಉಪಕಾರದ ಕಾರ್ಯಗಳನ್ನು ಮಾಡಬಹುದು.

ವಿದ್ಯಾಸಾಗರ ಸೀಳಿನ, ಚಿಂಚೋಳಿ

★ ಒಬ್ಬನು ತುಂಬಾ ಹೀನ ಸ್ಥಿತಿಯಲ್ಲಿದ್ದು, ಆರ್ಥಿಕ ಸಂಕಷ್ಟಕ್ಕೆ ಸಿಲ್ಕಿರುವಾಗ ಇನ್ನೊಬ್ಬ ಭಿಕ್ಷುಕ ಬಂದು ಅಂಗಲಾಚಿ ಭಿಕ್ಷೆ ಕೇಳಿದಾಗ ಆವನು ಭಿಕ್ಷುಕನಿಗೆ ಏನು ಕೊಡಬೇಕು? ಏನು ಹೇಳಬೇಕು?

* "ಇದ್ದುದ ವಂಚನೆ ಮಾಡದಿಪ್ಪುದೇ ಶೀಲ" ಎಂದು ಬಸವಣ್ಣನವರು ಹೇಳಿಲ್ಲವೆ? ಇರುವಾಗ ವಂಚನೆ ಮಾಡಿದರೆ ಅದು ತಪ್ಪು; ಅದನ್ನೇ ನಿಸ್ಸಂಕೋಚವಾಗಿ ಹೇಳಬೇಕು. ಆಗ ಪಾಪ ಪ್ರಜ್ಞೆ ಬೆಳೆಸಿಕೊಳ್ಳಬಾರದು. ಕೆಲವೊಮ್ಮೆ ಇದ್ದರೂ ಅಪಾತ್ರ ದಾನ ಮಾಡಬಾರದು. ಮೈಗಳ್ಳತನದಿಂದ ಭಿಕ್ಷೆ ಬೇಡುವವನಿಗೆ ಜೇಬಿನಲ್ಲಿ ಹಣವಿದ್ದರೂ ಕೊಡಬಾರದು.

—ವಿಶಾಲಸ್ವಾಮಿ, ಹರಿಹರ

★ ನಾನೋರ್ವ ಭಾವನಾಜೀವಿ ಮತ್ತು ಸ್ವಾಭಿಮಾನಿ. ತುಂಬಾ ಪೂಜೆ ಮಾಡುತ್ತಿದ್ದೆ ಮತ್ತು ಗ್ರಂಥಗಳನ್ನು ಓದುತ್ತಿದ್ದೆ. ಆದರೆ ಮದುವೆಯಾದ ಮೇಲೆ ಇದಾವುದಕ್ಕೂ ವೇಳೆ ಸಿಗದೆ ನಿರುತ್ಸಾಹ, ನಿರಾಶೆ ಮತ್ತು ಚಿಂತೆ ಆವರಿಸಿವೆ. ಪಾರಾಗುವ ಬಗೆ ಹೇಗೆ?

* ಸಂತೋಷ – ಸಂತೃಪ್ತಿ ಅಂತರಂಗದಲ್ಲೇ ಕಂಡುಕೊಳ್ಳುವ ತತ್ತ್ವಗಳು. ಕಿಸಗೌತಮಿ ತನ್ನ ಮಗ ಸತ್ತಾಗ, ತಾನಷ್ಟೇ ಸಾವಿನ ಅಗಲಿಕೆಯ ನೋವನ್ನು ಅನುಭವಿಸುವವಳೆಂದು ಬುದ್ಧನ ಬಳಿಗೆ ಜೀವದಾನ ಬೇಡಲು ಹೋದಳಷ್ಟೆ. ಹಾಗೆಯೇ ಪ್ರತಿಯೊಬ್ಬರೂ ತಾವಷ್ಟೇ ಚಿಂತಿತರು, ಅತೃಪ್ತರು ಎಂದು ಭಾವಿಸುತ್ತಾರೆ. ಈ ಜಗತ್ತಿನಲ್ಲಿ ಪ್ರತಿಯೋರ್ವನೂ ನಿರುತ್ಸಾಹ, ನಿರಾಶೆ, ಚಿಂತೆಗಳಿಂದ ಬಳಲುತ್ತಾನೆ. ಬಿರುಗಾಳಿ ಬೀಸಿದಾಗ ಸಣ್ಣ ಸಣ್ಣ ಗಿಡಗಳು ಬುಡಸಹಿತ ಕೀಳುತ್ತವೆ, ಹೆಮ್ಮರಗಳ ರೆಂಬೆಕೊಂಬೆ ಅಲ್ಲಾಡುತ್ತವೆ. ಹಾಗೆಯೇ ಸಾಮಾನ್ಯರು ಸಂಪೂರ್ಣ ಹತಾಶರಾಗುತ್ತಾರೆ ವಿರುದ್ಧ ಪರಿಸ್ಥಿತಿ ಎದುರಿಸಲಾರದೆ. ಆತ್ಮಜ್ಞಾನಿಗಳು ಕ್ಷಣಕಾಲ ವಿಚಲಿತರಾದರೂ ಮತ್ತೆ ಆತ್ಮಬಲ ರೂಢಿಸಿಕೊಂಡು ಬಾಳುತ್ತಾರೆ. ಅದನ್ನೇ ಬಾಳಿನಲ್ಲಿ ರೂಢಿಸಿಕೊಳ್ಳಬೇಕು. ಕಾಯಕ ಮಾಡುತ್ತಲೇ ಧ್ಯಾನ, ಚಿಂತನ ಅಳವಡಿಸಿಕೊಳ್ಳಿ; ಚಿಂತಿಸಬೇಡಿ. ಚಿಂತೆ ಮಾಡುವ ಸಮಯವನ್ನೇ, ನಿರಾಶೆಯಿಂದ ಮುದುಡಿಕೊಳ್ಳುವ ಕಾಲವನ್ನೇ ಶಿವಧ್ಯಾನಕ್ಕೆ ವಿನಿಯೋಗಿಸಿ. ಎಲ್ಲವೂ ಸರಿಯಾಗುತ್ತದೆ.

Digitalized by e-Sahithya Documentation Forum
Sponsored by Sarayu Foundation Trust

—ಗುರು ಪುತ್ರಪ್ಪ ನೇಳಗೆ, ಕುನ್ಮಾರಪಳ್ಳಿ, ಔರಾದ

★ ಯಾರೆಷ್ಟೇ ಕೆಡುಕು ಮಾಡಿದರೂ, ವಿಶ್ವಾಸದ್ರೋಹ ಬಗೆದರೂ ಸನ್ಯಾಸಿಗಳು ಅವರ ಮೇಲೆ ಪ್ರತಿಕ್ರಿಯೆ ತೆಗೆದುಕೊಳ್ಳಬಾರದು ಎಂದು ಕೆಲವರು ಉಪದೇಶಿಸುವರಲ್ಲ? ಇದು ಸರಿಯೆ?

* ಹಸು ಅತ್ಯಂತ ಸಾಧು ಪ್ರಾಣಿ. ತನ್ನ ಕರು ಹಾಲನ್ನು ಕುಡಿಯುವ ತನಕ ಸುಮ್ಮನಿರುತ್ತೆ, ಕರುವನ್ನು ವಾತ್ಸಲ್ಯದಿಂದ ನೆಕ್ಕುತ್ತಿರುತ್ತದೆ. ಆದರೆ ತನ್ನೊಡಲಿನ ಕುಡಿಯೇ ಆದ ಕರು ಮೊಲೆಯನ್ನು ಕಡಿದು ನೋವನ್ನು ಉಂಟುಮಾಡುತ್ತಿದ್ದಂತೆಯೇ ದಯಾದಾಕ್ಷಿಣ್ಯವಿಲ್ಲದೆ ಪಟಾರನೆ ಹೊಡೆಯುತ್ತದೆ. ಅದೇ ರೀತಿ ಸಂನ್ಯಾಸಿಯು ತನ್ನ ದ್ರೋಹಿಗಳ ವಿರುದ್ಧ ಪ್ರತೀಕಾರ ಮಾಡದಿದ್ದರೂ ಪ್ರತಿಭಟನೆ ಮಾಡಬೇಕು, ಆಕ್ರಮಣ ಮಾಡಲೆಳಸದಿದ್ದರೂ ಆತ್ಮ ರಕ್ಷಣೆ ಮಾಡಿಕೊಳ್ಳುವುದು ಆದ್ಯ ಕರ್ತವ್ಯ.

—ಬಸವರಾಜ ಮಾಗಾವಿ, ಊರುಬೇಡ

★ ಓರ್ವರು ನಿಮ್ಮ ಭಕ್ತರಂತೆಯೇ ನಟನೆ ಮಾಡುತ್ತಿದ್ದವರು ಇದ್ದಕ್ಕಿದ್ದಂತೆಯೇ ಬೈಯಲಾರಂಭಿಸಿ, 'ವ್ಯಾಪಾರದಲ್ಲಿ ಸ್ವಲ್ಪ ನಷ್ಟವಾಯಿತು ಎಂದು ಮಾತಾಜಿಯವರನ್ನು ಕೇಳಹೋದರೆ ಅವರು ಹಣವನ್ನು ಸಾಲವಾಗಿ ಕೊಡಲಿಲ್ಲ. ನಾವೇನು ತಿಂದು ಹಾಕುತ್ತಿದ್ದೆವೆ? ಬಡ್ಡಿ ಸಹ ಕೊಡುತ್ತಿದ್ದೆವಲ್ಲ. ಅವರು ಕೊಡಲೇ ಇಲ್ಲ' ಎಂದು ದೂರಲಾರಂಭಿಸಿದ್ದಾರೆ. ಇದೇಕೆ ಹೀಗೆ?

* ಸಮಾಜವು ನಮಗೆ ಕಾಣಿಕೆಗಳನ್ನು ಕೊಡುವುದು ನಾವು ಸಾಲ-ಬಡ್ಡಿ ವ್ಯವಹಾರ ಮಾಡಲೆಂದು ಅಲ್ಲ. ನೀವೇ ಕಾಣಿಕೆ ಕೊಟ್ಟದ್ದೀರೆಂದು ಭಾವಿಸಿರಿ. ಆಗ ನಿಮ್ಮಿಂದ ಕಾಣಿಕೆ ಪಡೆದವರು ಇಂಥ ಬಡ್ಡಿ ವ್ಯವಹಾರದಲ್ಲಿ ತೊಡಗಿದ್ದರೆ ಎಷ್ಟು ನೋವಾದೀತು! ನಿಜವಾದ ಭಕ್ತನಾದವನು ಸತ್ಕಾರ್ಯಕ್ಕೆ ಸಲ್ಲಿಸಬೇಕೆಂದು ಕಾಣಿಕೆ ಕೊಡಬೇಕೇ ವಿನಾ ಮತ್ತೇನಾದರೂ ಲಾಭವನ್ನು ಮರಳಿ ಹೊಂದಬೇಕೆಂದಲ್ಲ. ಆ ರೀತಿಯಲ್ಲಿ ನಮ್ಮ ಮಾಜಿ ಭಕ್ತರು ಸಾಲ ಕೇಳಿದ್ದೇ ತಪ್ಪಲ್ಲವೆ?

—ಜಿ. ವಿ. ಸತೀಶ್, ಸಿದ್ಧಾರ್ಥ ನಗರ, ಮೈಸೂರು

★ ಅಸಭ್ಯ ಮಟ್ಟದ ಟೀಕೆ ಮಾಡುವ ಒಂದು ಪತ್ರಿಕೆಯಲ್ಲಿ ನಿಮ್ಮ ಅವಹೇಳನದ ಲೇಖನ ಬಂದಾಗ ಖಂಡಿಸಿ ಒಂದು ಪತ್ರ ಬರೆದಿದ್ದೆ. ಪತ್ರಿಕಾ ಸಂಪಾದಕರು ಬೈದ ಲೇಖನ ಪ್ರಕಟಿಸಿ, ನನ್ನ ಉತ್ತರ ಮಾತ್ರ ಪ್ರಕಟಿಸಲಿಲ್ಲ. ಹೀಗೇಕೆ?

* ನಿದ್ದೆ ಬಂದವರನ್ನು ಎಬ್ಬಿಸಬಹುದು, ನಿದ್ರೆಯ ಸೋಗು ಹಾಕಿದವರನ್ನಲ್ಲ. ಉದ್ದೇಶಪೂರ್ವಕವಾಗಿ ಮಾಡುವವರು ನಿಮ್ಮ ಉತ್ತರ ಏಕೆ ಪ್ರಕಟಿಸುವರು?

ಹಣ್ಣಾದ ಆತ್ಮಾನುಭಾವಿ

ಪೂಜ್ಯ ಶ್ರೀ ನಾದಬ್ರಹ್ಮಾನಂದ ಸ್ವಾಮೀಜಿ.

ಲಾಸ್‌ಏಂಜಲೀಸ್‌ನಲ್ಲಿ ಡಾ॥ ಎಂ. ಬಿ. ಶಿವಶಂಕರ್‌ರವರ ಮನೆಯಲ್ಲಿ ಭಕ್ತಿಯಿಂದ ಬರಮಾಡಿಕೊಂಡಿದ್ದರು. ದಿ. 17-2-1981 ರಂದು ಅಧ್ಯಾತ್ಮಿಕ ವಿಷಯಗಳನ್ನು ಚರ್ಚಿಸುತ್ತ ಕುಳಿತಿರುವಾಗಲೇ ಅವರು ಲಾಸ್ ಏಂಜಲೀಸ್‌ನಲ್ಲಿ ಇರುವ ಅಧ್ಯಾತ್ಮ ಕೇಂದ್ರಗಳ ಬಗ್ಗೆ ಹೇಳುತ್ತಿದ್ದರು. ಶಂಕರ್‌ರವರ ಸ್ನೇಹಿತರೊಬ್ಬರು ಆಗಾಗ ಆಶ್ರಮಗಳಿಗೆ ಹೋಗುವ ಪರಿಪಾಠವಿದ್ದ ಕಾರಣ, 'ಇಲ್ಲೊಂದು ಶಿವಾನಂದ ಯೋಗ ಕೇಂದ್ರವೂ ಇದೆ' ಎಂದರು. ನನ್ನ ಕಿವಿ ನಿಮಿರಿತು. ಅಜಾಗ್ರತ ಮನದ ಅಂತರಾಳದಲ್ಲಿ ಹುದುಗಿದ್ದ ಯಾವುದೋ ನೆನಪು ಮೆಲ್ಲನೆ ಮೇಲೇರ ತೊಡಗಿತು. "ಕ್ಯಾಲಿಫೋರ್ನಿಯಾ ಸ್ಟೇಟ್, ಲಾಸ್ ಏಂಜಲೀಸ್ ಸಮೀಪದಲ್ಲಿ ನಾನು ಆಶ್ರಮ ಮಾಡಲಿದ್ದೇನೆ. ಅತ್ತ ಬಂದಾಗ ತಪ್ಪದೆ ಬನ್ನಿ, ದಯವಿಟ್ಟು ಬನ್ನಿ." ಈ ಎರಡು ಸಾಲುಗಳು ಅಜಾಗ್ರತ ಮನದ ಮೂಲೆಯಿಂದ ಹೊರಬಂದು ಇಣುಕಿ, ಗರಿಗೆದರ ತೊಡಗಿದವು. ಈ ಮಾತು ಕೇಳಿ ಆಗಲೇ ಮೂರು ನಾಲ್ಕು ವರ್ಷಗಳಾಗಿರಬಹುದು.

"ಇಲ್ಲಿ ಯಾರಾದರೂ ಶಿವಾನಂದ ಯೋಗ ಕೇಂದ್ರದಲ್ಲಿ ಶ್ರೀನಾದಬ್ರಹ್ಮಾನಂದ ಸ್ವಾಮೀಜಿ ಎನ್ನುವವರಿದ್ದಾರೆಯೇ?" ಎಂದು ಕೇಳಿದೆ. "ನನಗಷ್ಟು ಪರಿಚಯವಿಲ್ಲ. ನಾನು ರಾಮಕೃಷ್ಣಾಶ್ರಮಕ್ಕೆ ಹೆಚ್ಚೆಚ್ಚು ಹೋಗುತ್ತೇನೆ. ನನ್ನ ಮಿತ್ರರೊಬ್ಬರು ಶಿವಾನಂದರ ಪರಮಭಕ್ತರಿದ್ದಾರೆ. ಕೇಳುತ್ತೇನೆ ಇರಿ" ಎಂದು ತಮ್ಮ ಮಿತ್ರರನ್ನು ಕೇಳಿ ಫೋನ್ ನಂಬರ್ ಪಡೆದರು. (ಆ ದೇಶದಲ್ಲಿ ದೂರವಾಣಿ ತೀರಾ ಅವಶ್ಯಕತೆಯಾಗಿದ್ದು ಮನೆಮನೆಗೂ, ಮನೆಗೆರಡು ಮೂರು ಫೋನ್ ಇರುವ ಕಾರಣ ನಂಬರ್ ಹುಡುಕುವುದು ತುಂಬಾ ಪ್ರಯಾಸಕರ. ಹೆಸರು ಹೇಳಿದರೆ ಎಕ್ಸ್‌ಛೇಂಜ್‌ನವರು ಹುಡುಕಿಕೊಡುತ್ತಾರೆ. ಆ ಹೆಸರಿಗೂ ನಮಗೆ ನಂಬರ್ ಸಿಕ್ಕಿರಲಿಲ್ಲ).

ಅಲ್ಲಿಯವರು ಹುಡುಕಿತಂದ ನಂಬರಿಗೆ ಫೋನ್ ಮಾಡಿದಾಗ ಯೋಗಾ ಸೊಸೈಟಿ ಎಂದು ಅದರ ಹೆಸರೆಂದು, ಸ್ವಾಮಿ ಶಿವಾನಂದರ ಹೆಸರಿನಲ್ಲೇ ನಡೆಸುವರೆಂದು ತಿಳಿಯಿತು. ಶ್ರೀ ನಾದಬ್ರಹ್ಮಾನಂದ ಸ್ವಾಮಿಗಳ ಹೆಸರನ್ನು ಕೇಳುತ್ತಿ

Digitalized by e-Sahithya Documentation Forum
Sponsored by Sarayu Foundation Trust

ದ್ದಂತೆಯೇ ಆ ಕಡೆಯಿಂದ ಉತ್ತರಿಸುತ್ತಿದ್ದ ಕಾರ್ಯದರ್ಶಿನಿ ಆ ಹೆಸರಿನ ಸ್ವಾಮಿಗಳು ಸಾನ್ ಫ್ರಾನ್ಸಿಸ್ಕೋನಲ್ಲಿ ಇರುವುದಾಗಿಯೂ, ಅವರ ವಿಳಾಸ–ಫೋನ್ ನಂಬರ್ ಬೇಕಾದರೆ ಕೊಡುವುದಾಗಿಯೂ ನುಡಿದಳು. ಸಂಭ್ರಮ ಆಶ್ಚರ್ಯಗಳಿಂದ ನಾನು ಪಡೆದುಕೊಂಡೆ. ತೀರಾ ಆಕಸ್ಮಿಕವಾಗಿ ನೆನಪಾಗಿ, ಅಷ್ಟೇ ಆಕಸ್ಮಿಕ ವಾಗಿ ವಿಳಾಸವೂ ದೊರೆಯುತ್ತಲಿತ್ತು. ನಂಬರ್ ಪಡೆದುಕೊಂಡು ಮರು ಕ್ಷಣವೇ ಫೋನ್ ಮಾಡಿದೆ. 'ಕರ್ನಾಟಕದಿಂದ ಮಾತೆ ಮಹಾದೇವಿ ಬಂದಿದ್ದಾರೆ' ಎಂದು ತಿಳಿಸಿರಿ ಎಂದು ಕಾರ್ಯದರ್ಶಿ, ಸ್ವಾಮಿ ಕ್ರಿಯಾನಂದರಿಗೆ (ಅಮೆರಿಕನ್ ಸಾಧಕರಿಗೆ) ಹೇಳಿದೆ. ಅವರು ಹೋಗಿ ತಿಳಿಸುತ್ತಿದ್ದಂತೆಯೇ ವಿಶ್ರಾಂತಿ ಪಡೆಯುತ್ತಿದ್ದ ಸ್ವಾಮೀಜಿ ಮಿತಿ ಮೀರಿದ ಸಂಭ್ರಮದಿಂದ ದೂರವಾಣಿಯತ್ತ ಧಾವಿಸಿದರು. "ಯಾರು ಅಕ್ಕಮಹಾದೇವಿಯವರೆ?" ಎಂದರು "ಇಲ್ಲ, ನಾನು ಮಾತೆ ಮಹಾದೇವಿ" ಎಂದೆ. "ನಾನು ಅಕ್ಕಮಹಾದೇವಿ ಎಂದೇ ಕರೆಯೋದು; ಈಗ ಹದಿನೈದು ವರ್ಷಗಳ ಹಿಂದೆಯೇ ಹೇಳಿಲ್ಲವೆ ನೀವು ಅಕ್ಕಮಹಾದೇವಿ" ಎಂದು ? ನಿಮ್ಮ ಪಾದಕ್ಕೆ ನಮೋ ನಮಃ" ಸ್ವಾಮೀಜಿಯವರ ಹೃದಯ ತುಂಬಿದ್ದು, ಆನಂದೋದ್ವೇಗದ ಧ್ವನಿಯ ಮೂಲಕ ಗೊತ್ತಾಗುತ್ತಿತ್ತು. ಮರಳಿ ನಮಸ್ಕರಿಸಿದೆ.

"ಕ್ಷೇಮವೇ ತಾಯಿ; ಎಲ್ಲಿಂದ ಮಾತನಾಡುತ್ತಿದ್ದೀರಾ ? ಈ ದೇಶಕ್ಕೆ ಎಂದು ಬಂದಿರಿ ?" ಪರಸ್ಪರ ವಿಚಾರವಿನಿಮಯ ನಡೆಯಿತು. ಲಾಸ್ ಏಂಜಲೀಸ್ ನಗರದಲ್ಲಿ ಇರುವ ವಿಷಯ ತಿಳಿಸಿದೆ. ಅಲ್ಲಿಂದ ವಿಮಾನದಲ್ಲಿ ಮುಕ್ಕಾಲು ಗಂಟೆ ಪ್ರಯಾಣವೆಂದು, ಬಂದೇ ತೀರಬೇಕೆಂದು, ಹೋಗಿಬರುವ ಖರ್ಚು ಸಹ ಅವರೇ ಬೇಕಾದರೂ ಕೊಡುವುದಾಗಿಯೂ ಹೇಳಿದರು. "ಸ್ವಾಮೀಜಿ, ನನಗೂ ತುಂಬಾ ಆಕಾಂಕ್ಷೆಯುಂಟು. ಆದರೆ ನನ್ನ ಪ್ರೋಗ್ರಾಮ್ ಎಲ್ಲ ನಿರ್ಧಾರಿತವಾಗಿದೆ. ಅದನ್ನು ತಪ್ಪಿಸಲು ಬರದು. ತಪ್ಪಿಸಿದರೆ ವ್ಯವಸ್ಥಾಪಕರು ಬೇಸರಪಟ್ಟುಕೊಳ್ಳುತ್ತಾರೆ. ನನ್ನನ್ನು ನಿರೀಕ್ಷಿಸುತ್ತಿರುವ ಭಕ್ತರೂ ನೊಂದುಕೊಳ್ಳುತ್ತಾರೆ."

"ಅದೆಲ್ಲ ನಾನರಿಯೆ; ಈ ಮುದುಕನ ಆಕಾಂಕ್ಷೆ ಪೂರೈಸಬೇಕು. ನನ್ನ ಮನಸ್ಸಿಗೆ ನೋವುಂಟು ಮಾಡಿ ನೀವು ಹೋಗ ತಕ್ಕದಲ್ಲ..." ಸ್ವಾಮೀಜಿಯ ಕಟ್ಟಪ್ಪಣೆ. "ನಾನು ವ್ಯವಸ್ಥಾಪಕರೊಡನೆ ಸಮಾಲೋಚಿಸಿ ನಾಳೆ ತಿಳಿಸುವೆ." ಎಂದೆ. ವ್ಯವಸ್ಥಾಪಕ ಡಾ|| ಕೋರಿಯವರೊಡನೆ ಫೋನಿನಲ್ಲಿ ವಿಚಾರಿಸಿದರೆ 'ಇಲ್ಲ, ನೀವು ಎಲ್ ಪಾಸೋ, ಡಲ್ಲಾಸ್ ಮುಖಾಂತರ ನ್ಯಾಷ್‌ವೀಲ್ ಟೆನೆಸ್ಸೀಗೆ ಬರಬೇಕಾಗು ತ್ತದೆ. ಅಲ್ಲಿ ಭಕ್ತರು ಕಾಯುತ್ತಲಿರುತ್ತಾರೆ' ಎಂದು ಹೇಳಿದರು. ನಾನು ಪ್ರವಾಸವನ್ನು

(೬೯ನೇ ಪುಟವನ್ನು ನೋಡಿ)

ಜನಪದ ಸಾಹಿತ್ಯದಲ್ಲಿ ಶಿವ–ಭಕ್ತಿ

ಹನುಮಂತಗೌಡ ಮುದಿಗೌಡರ, ಎಂ.ಎ.
ಮಹಾಲಿಂಗಪುರ

"ಕವಿರಾಜಮಾರ್ಗ"ದ ರಾಜಕವಿ ನೃಪತುಂಗ ಕಾವೇರಿಯಿಂದಮಾ ಗೋದಾವರಿ ವರಮಿರ್ಪ ಕನ್ನಾಡಿನ ಜನ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂದು ನುಡಿದಿದ್ದಾನೆ. ಶಾಲೆಯ ಹಿಂದು–ಮುಂದು, ಆಸು–ಪಾಸು ಹಾಯದ, ಹಲಗೆ–ಬಳಪಗಳನೆಂದೂ ಹಿಡಿಯದ ಕುಟ್ಟುವ–ಬೀಸುವ ಕಾಯಕ ಮಾಡುವ ಹೆಂಗಳೆಯರು, ನೇಗಿಲ ಹಿಡಿದು ಹೊಲವನುಳುವ ರೈತರು, ಕುರಿಕಾಯ್ವ ಕುರುಬರೂ, ಮೀನು ಹಿಡಿಯುವ ಅಂಬಿಗರೂ ಸಾಹಿತ್ಯ ಸೃಷ್ಟಿಸಬಲ್ಲವ ರಾಗಿದ್ದರು. ಆದರವರು ರಾಜ–ರಾಣಿಯರ ತೊತ್ತಾಗಿ, ಮಂತ್ರಿ ಮಾನ್ಯರ ಸೊತ್ತಾಗಿ ಅವರ ತೃಪ್ತಿಗಾಗಿ ಸಾಹಿತ್ಯ ರಚನೆಗೆ ಕೈ ಹಾಕಲಿಲ್ಲ; ಕುಟ್ಟ–ಬೀಸು ವಾಗ, ಕಸ ಹೊಡೆಯುವಾಗ, ಮುಸುರೆ ತೊಳೆಯುವಾಗ, ಉತ್ತಿ–ಬಿತ್ತುವಾಗ ಹುರುಪು ತುಂಬಿ, ಹೃದಯ ತುಂಬಿ, ಆಡಿದರು; ಹಾಡಿದರು. ಸಾಹಿತ್ಯ ರಚನೆಗಾಗಿ ಅವರು ಪ್ರಸವ ವೇದನೆ ಪಡಲಿಲ್ಲ; ಕಾಗದ ಲೆಕ್ಕಣಿಕೆ ಹಿಡಿದು ಶಬ್ದ–ಪ್ರಾಸಗಳಿಗಾಗಿ ತ್ರಾಸು ತೆಗೆದುಕೊಳ್ಳಲಿಲ್ಲ; ಸ್ವಯಂ ಸ್ಫೂರ್ತಿಯಿಂದ ಬುದ್ಧಿಗೆ ತೋಚಿದ್ದನ್ನು, ಬಾಯಿಗೆ ಬಂದದ್ದನ್ನು ಬಿತ್ತರಿಸಿದರು. ಆದರೂ ಅದು ಸತ್ವಶಾಲಿಯಾಗಿರುತ್ತಿತ್ತು; ಅನುಭವಪೂರ್ಣವಾಗಿರುತ್ತಿತ್ತು.

ಜನಪದ ಸಾಹಿತ್ಯದಲ್ಲಿ ದೈವಭಕ್ತಿಗೆ ಸಿಂಹ ಪಾಲು (Lion's share) ಮೀಸ ಲಾಗಿದೆ. ಹಳ್ಳಿಯ ಜನತೆಯ ಹೃದಯಗಳು ಭಕ್ತಿ–ಭಾವುಕತೆಯ ಖಜಾನೆಗಳು. ಅಲ್ಲಿ ಮೋಸ–ವಂಚನೆ, ಹಮ್ಮು–ಬಿಮ್ಮು, ಕಪಟ–ಕಂಟಕಗಳಿಗೆ ಹೆಚ್ಚಿನ ಸ್ಥಾನವಿಲ್ಲ. ದೇವರಲ್ಲಿನ ಭಕ್ತಿ, ಹಿರಿಯರಲ್ಲಿನ ಗೌರವ, ಸಹಜೀವಿಗಳ ಬಗೆಗೆ ಆದರ, ಕಿರಿಯರಲ್ಲಿ ವಾತ್ಸಲ್ಯಗಳೇ ಎದ್ದು ಕಾಣುತ್ತವೆ. ಜನಪದ ಸಾಹಿತ್ಯದಲ್ಲಿ ಶಿವಭಕ್ತಿಗಂತೂ ವಿಶೇಷ ಮಹತ್ವ ಕೊಡಲಾಗಿದೆ. ಇಲ್ಲಿ ಶಿವನನ್ನು ಶಿವಶರಣರನ್ನು ಕುರಿತು ಅತಿಶಯವಾಗಿ ಸ್ತುತಿಸಲಾಗಿದೆ. ರೈತನು ತನ್ನ ಕಾಯಕಕ್ಕೆ ಆರಂಭ ಮಾಡುವ ಮೊದಲು ಮಹಾದೇವ ನನ್ನು ಸ್ಮರಿಸಲು ಮರೆಯುವುದಿಲ್ಲ. ಯಾಕೆಂದರೆ ಎಲ್ಲವೂ ಪಶುಪತಿ ಮಹಾದೇವನ

Digitalized by e-Sahithya Documentation Forum
Sponsored by Sarayu Foundation Trust

ಆದೇಶದಂತೆಯೇ ನಡೆಯುತ್ತದೆ. ನಾನು ಮಾಡುವೆನೆಂದರೆ ನನ್ನ ಅಳವಲ್ಲ. ವಿಧಿಯ ಆಟಕ್ಕೆ ಸಿಕ್ಕು ಅಯೋಧ್ಯೆಯ ಅರಸನೂ ಸುಡುಗಾಡು ಕಾಯಬೇಕಾಯಿತು ; ಅಡವಿಯಲ್ಲಿ ಅಲೆದಾಡಬೇಕಾಯಿತು.

ಹಣೆಯಬರಹದ ಗೆರೆಯ ಹರಿದರೂ ತಪ್ಪದು
ಹರಿ ಚಂದರಾಯ ಸುಡುಗಾಡ ಸೇರಿದರ
ವಿಧಿಯವನ ಬೆನ್ನ ಬಿಡಲಿಲ್ಲ ||

ಅಂತೆಯೇ ತನ್ನೆಲ್ಲ ಭಾರವನ್ನು ನೇಗಿಲಯೋಗಿ ಆ ಭಗವಂತನ ಮೇಲೆಯೇ ಹಾಕಿದ್ದಾನೆ.

ಮಾದೇವ ನಿನ ಹೊರ್ತು ನಾನ್ಯಾರ ನಂಬಿಲ್ಲ
ನಾ ಮಾಡೆನೆಂಬ ಅಳವಿಲ್ಲ ಮಲ್ಲಯ್ಯಾ
ನೀ ನಡಸೋ ನನ್ನ ಸರುವೆಲ್ಲ ||

ಇಲ್ಲಿ ಮಾನವನು ದೇವನಾಡಿಸುವ ಸೂತ್ರದಗೊಂಬೆ, ಆತ ಕುಣಿಸಿದಂತೆ ಕುಣಿಯಬೇಕೆಂಬ ಭಾವವಿದೆ. ಆದರೆ ಶಿವನಾಮ ಸ್ತುತಿ ತನ್ನ ಸಂಕಟಗಳನ್ನು ನಿವಾರಿಸಬಲ್ಲ ಪ್ರಬಲ ಅಸ್ತ್ರವಾಗಿದೆಯೆಂಬ ದೃಢನಂಬಿಗೆಯೂ ವ್ಯಕ್ತವಾಗಿದೆ. ಇನ್ನೊಂದು ಕಡೆಗೆ

ಶಿವ ಶಿವ ಎಂದರೆ ಸಿಡಿಲೆಲ್ಲ ಬಯಲಾಗಿ
ಕಲ್ಲು ಬಂದೆರಗಿ ಕಡೆಗಾಗಿ | ಎಲೆ ಮನವೆ
ಶಿವನೆಂಬ ಸಬುದ ಬಿಡಬ್ಯಾಡ ||

ಎಂದು ರೈತ ತನ್ನ ಮನಸ್ಸಿಗೇ ಹೇಳಿಕೊಂಡಿದ್ದಾನೆ. ಕಾಡುವವನೂ ಶಿವನೇ, ಕಾಪಾಡುವವನೂ ಅವನೇ ಎಂದು ತಿಳಿದಿರುವನು ಈ ವೇದಾಂತಿ! "ನೀ ಎಷ್ಟ ಕಾಡತಿ ಕಾಡಪ್ಪ | ನೀ ಕಾಡಿದಷ್ಟು ನನಗ ಪಾಡಪ್ಪಾ" ಎಂದು ತನ್ನ ದೃಢತೆಯನ್ನು ತೋರಿಸಿದ್ದಾನೆ.

ಮಲ್ಲಯ್ಯನ ಭಕ್ತೆಯೊಬ್ಬಳಿಗೆ ಏಳುತ್ತಲೇ ಮಲ್ಲಯ್ಯನ ಚಿಂತೆ ; ಆಕೆ :—

ಏಳುತಲೆ ನೆನದೇನ ಏಳೆಂಟು ದೇವರನ
ಏಳು ಬಾಗಿಲದ ಒಡಿಯನ | ಪರೂತ ಮಲ್ಲ
ಏಳುತಲೆ ಮೊದಲ ನೆನದೇನ ||

ಏಳುತಲೆ ನೆನದೇನ ಬಾಳಲೋಚನ ಶಿವನ
ಜೋಳಾಗೆ ಹೊನ್ನ ಮಳೆಗರೆದ ಪರುವುತದ
ದೇವ ಮಲ್ಲಯ್ಯನ ನೆನದೇನ ||

ಎಂದು ಮಲ್ಲಯ್ಯನಲ್ಲಿನ ತನ್ನ ಅಚಲಶ್ರದ್ಧೆಯನ್ನು ಸಾರಿಹೇಳಿದ್ದಾಳೆ. ಯಾಕೆಂದರೆ ತನ್ನ ದುಃಖ-ದುಮ್ಮಾನಗಳನ್ನು, ತಾಪ-ತೊಂದರೆಗಳನ್ನು ಅವನೊಬ್ಬನೇ ನಿವಾರಿಸಬಲ್ಲ; ಮಂದಿ-ಮಕ್ಕಳು, ಬಂಧು-ಬಳಗದವರು ಬರಿಯ ಬಾಯಿ ಮಾತು, ತುಟಿಪ್ರಸಾದ ನೀಡುವವರೇ ಹೊರತು ತನ್ನ ಕಷ್ಟಗಳನ್ನು ಕಳೆಯುವಷ್ಟು, ಬಯಸಿದ್ದನ್ನು ನೀಡುವಷ್ಟು ಸಾಮರ್ಥ್ಯವುಳ್ಳವರಲ್ಲ.

ಮಂದಿ ಮಂದಿ ಎಂದು ಮಂದಿ ನಂಬಲು ಹೋದೆ
ಮಂದಿ ಬಿಟ್ಟಾರ ನಡುನೀರಾಗ | ಮಲ್ಲಯ್ಯ
ತಂದೀನನ ಕೈಯ್ಯ ಬಿಡಬ್ಯಾಡ ||
ಮಂದೇನ ಕೊಟ್ಟೇತ. ಮನವೇನು ಕೊಟ್ಟೇತ
ಮಂಜಾನದನ್ನ ಶಿವದೇವ, ಕೊಟ್ಟರ
ಮನ ತುಂಬಿ ನನ್ನ ಮನಿ ತುಂಬಿ ||

ಈ ಮಾತು ಚೆನ್ನಾಗಿಬಲ್ಲರೆಂದೇ ಆ ಅನಾದಿ-ಅನಂತನಾದ ಭಗವಂತನನ್ನೇ ಮೊರೆ ಹೊಕ್ಕಿದ್ದಾರೆ ಹಳ್ಳಿಯ ರೈತರು; ಗರತಿಯರು. ಮನೆಯಲ್ಲಿ ಬೀಸಲು ಕುಳಿತ ಮುತ್ತೈದೆಯೋರ್ವಳು ಮುಕ್ಕಾಕೋಕೂ ಮೊದಲೇ

ಕಲ್ಲೀಗೆ ಮುಕ್ಕಾಕಿ ಎಲ್ಲ ದೇವರ ನೆನೆದೆ
ಅಕ್ಕ ಮಹಾದೇವಿ ಅರಸನ | ಮಲ್ಲಯ್ಯನ
ಮುಕ್ಕಾಕು ಮೊದಲೇ ನೆನದೇನ ||

ಎನ್ನುತ್ತಾಳೆ. ಮತ್ತೊಬ್ಬಳಿಗೆ ನಿಂತರೂ, ಕುಳಿತರೂ ಶಿವನದೇ ಧ್ಯಾನ. ಆಕೆ

ಎದ್ದರೆ ನಿಮ ಧ್ಯಾನ, ಏಳುತಲೇ ನಿಮ ಧ್ಯಾನ
ಸಿದ್ಧರ ಧ್ಯಾನ ಶಿವಧ್ಯಾನ | ಮಾಶಿವನೆ
ನಿದ್ದಿಗಣ್ಣಾಗ ನಿನ ಧ್ಯಾನ ||

ಎಂದು ಸ್ಮರಿಸುತ್ತಾಳೆ. ಪತಿ ಪುತ್ರರೊಂದಿಗೆ ಸುಖದಿಂದ ಇರುವ ಸುಮಂಗಲೆಯೋರ್ವಳು,

Digitalized by e-Sahithya Documentation Forum
Sponsored by Sarayu Foundation Trust

ಮುತ್ತಿನ ಮೂಗುತಿ ಮುತ್ಯಾ ಮಾಡಿಸಿಕೊಟ್ಟ
ಮುತ್ತೈದೆತನವ ಶಿವಕೊಟ್ಟ। ಮೇಲಿರುವ
ಮುಕ್ಕಣ್ಣ ಕೊಟ್ಟ ಮಕ್ಕಳನ॥

—ಎಂದು ಶಿವನ ಉಪಕಾರವನ್ನು ಸ್ಮರಿಸಿಕೊಳ್ಳುತ್ತಾಳೆ. ಇದೇ ರೀತಿ "ಹೊನ್ನ ಕೊಟ್ಟವನ ಎಷ್ಟೊಂದ ನೆನದೇನ; ಜನ್ಮ ಕೊಟ್ಟವನನ್ನ ಇನ್ನ ಮರೆಯಲೆ ಹೆಂಗ?" ಎಂದು ಕೇಳುತ್ತಾಳೆ. ಆದರೆ ತಿನ್ನುಣ್ಣಲು, ಉಡು ತೊಡಲು ಸಾಕಷ್ಟಿದ್ದರೂ ಮಕ್ಕಳಿಲ್ಲದ ವ್ಯಥೆಯಿಂದ ಕೊರಗುತ್ತಿರುವ ನಾರಿಯೊಬ್ಬಳು,

ಮಕ್ಕಳ ಕೊಡು ಶಿವನ ಮತ್ತೊಂದ ವಲ್ಲೆನು
ಹತ್ತು ಮಂದ್ಯಾಗೆ ಹರುನೀರ। ತರುವಂಥ
ಮುತ್ತೈದೆ ತನವ ಕೊಡು ನನಗೆ॥ —ಎಂದೂ
ಕಂದನ ಕೊಡು ಶಿವನೆ ಬಂಧನ ಬಡಲಾರೆ
ಹಂಗೀನ ಬಾನ ಉಣಲಾರೆ। ಮರ್ತ್ಯದಾಗ
ಬಂಜೆಂಬ ಶಬುದ ಹೊರಲಾರೆ॥

ಎಂದೂ ಬೇಡಿಕೊಳ್ಳುತ್ತಾಳೆ. ತಾಯಿಯೊಬ್ಬಳು ಬೆಳೆದ ತನ್ನ ಮಗನಿಗೆ

ದೇವನಿಗೆ ಶರಣನ್ನು ದೇವರಂತಾ ಮಗನ
ದೇವರಿಗೆ ನಮಗ ಒಳಮಾತ। ನಮ್ಮೂರ
ಡೇವ ಶಂಕರಗ ಶರಣನ್ನು॥ ಎಂದು ಉಪದೇಶಿಸುತ್ತಾಳೆ. ಮುಗ್ಗಲಗೇಡಿ,

ಮತಿಹೀನೆಯಾದ ಒಂದು ಹೆಣ್ಣಿಗೆ ಹಿರಿಯರಾದ ಮಹಿಳೆಯರು—

ಬೆಳಗಿನೋಳೆದ್ದು ನೀ ತೊಳದಿಲ್ಲ ಮಾರಿಯ
ಕಳೆಗೇಡಿ ನೀನೆಂಥ ಶಿವ ಭಕ್ತಳಾ।
ತಿಳಿದಿಲ್ಲ ಶಿವಭಕ್ತಿ, ಹಲವು ವಿಭೂತಿಯ
ತಿಲಕವಿಲ್ಲದ ಹಣಿ ಸುಡುಗಾಡೇಳ॥— ಎಂದು ಬೈಯ್ಯುತ್ತಾರೆ.
ಎದ್ದು ಮಾರಿಯ ತೊಳೆದು, ಮುದ್ದು ಲಿಂಗವ ನೋಡಿ
ತಿದ್ದಿ ವಿಭೂತಿಯ ಹಣೆಯಲಿಟ್ಟು।
ಗದ್ದಿಗಿ ಮ್ಯಾಲಿದ್ದ ಗುರುಲಿಂಗ-ಜಂಗಮಕ
ಬಿದ್ದು ಶರಣೆಂದು ನೀನಿತ್ತ ಬಾರ॥—ಎಂದು ಮತ್ತೆ ಹಿತ ವಚನಗಳನ್ನು

ಹೇಳುತ್ತಾರೆ. ಹಳ್ಳಿಯ ಗರತಿ ನಾಲ್ಕು ವೇದ, ಆರು ಶಾಸ್ತ್ರ, ಹದಿನೆಂಟು ಪುರಾಣ

ಗಳನ್ನು ಓದಿರದಿದ್ದರೂ, ಅರಿಯದಿದ್ದರೂ, ಹತ್ತೆಂಟು ಧರ್ಮಗಳನ್ನಭ್ಯಸಿಸದಿದ್ದರೂ ಅವಳು ದೇವರು ಸರ್ವಶಕ್ತ [Omni-potent], ಸರ್ವವ್ಯಾಪಿ [Omni-present] ಎಂಬುದನ್ನೂ ಬಲ್ಲವಳಾಗಿದ್ದಾಳೆ. ನಿಸರ್ಗದ ಗಿಡ-ಮರ, ಗುಡ್ಡ, ನದಿಗಳಲ್ಲೂ, ಹೂವು, ಎಲೆ, ಕಾಯಿಗಳಲ್ಲೂ ಅವನ ಇರವನ್ನು, ಅಂಶವನ್ನು ಕಂಡುಕೊಳ್ಳಲು ಸಮರ್ಥಳಾಗಿದ್ದಾಳೆ. ಆದುದರಿಂದಲೇ—

ಹೂವಿನ್ಯಾಗ ಹುದುಗ್ಯಾನ, ಮಾಲ್ಯಾಗ ಮಲಗ್ಯಾನ
ಮೊಗ್ಗ್ಯಾಗ ಕಣ್ಣ ತೆಗೆದಾನ। ಲಿಂಗಯ್ಯನ
ನೋಡಟಗೆ ನಿದ್ದಿ ಬಯಲಾಗಿ॥— ಎಂದು ಅನುಭಾವದ ತಿರುಳನ್ನೇ

ಅವಳು ಈ ತ್ರಿಪದಿಯಲ್ಲಿ ಅರುಹಿದ್ದಾಳೆ.

ಜನಪದ ಕವಿಗಳಿಗೆ ಶಿವನ ಬಗ್ಗೆ ಎಷ್ಟು ಭಕ್ತಿ, ಆದರವೋ ಶಿವ ಶರಣರ ಬಗೆಗೂ ಅಷ್ಟೇ ಭಕ್ತಿ, ಆದರಗಳಿದ್ದುದು ಕಂಡು ಬರುತ್ತದೆ. ಭಕ್ತಿ ಭಾಂಡಾರಿ ಬಸವಣ್ಣನನ್ನು ದ್ವಿತೀಯ ಶಂಭುವೆಂದೇ ಆರಾಧಿಸುತ್ತಾ ಒಬ್ಬ ನಾರಿ—

ಕರುಣ ಬಂದರೆ ಕಾಯೋ, ಮರಣ ಬಂದರೆ ಒಯ್ಯೋ
ಕರುಣಿ ಕಲ್ಯಾಣ ಬಸವಣ್ಣ। ಶಿವಲಿಂಗ
ಕಡೆತನಕ ಕಾಯೋ ಅಭಿಮಾನ॥—ಎಂದು ಹಾಡಿ ಅವನಲ್ಲಿನ ಭಕ್ತಿ,

ಅವನ ಬಗೆಗಿನ ಅಭಿಮಾನವನ್ನು ವ್ಯಕ್ತಪಡಿಸಿದ್ದಾಳೆ. ರಾಶಿ ಮಾಡುತ್ತಿರುವ ಒಬ್ಬ ರೈತನೂ ಹಂತಿ ಪದ ಹಾಡಿ—

ಹಂತಿ ಹೊಡೆಯುತ ನೆನೆದೆ ಸಂತಸದಿ ಶರಣರನು
ಕಂತುಹರ ನಿನ್ನ ಭಕ್ತರನು। ನೆನೆದರ
ಸಂತಸದಿ ನೀಡೋ ವರ ಶಿವನೆ॥—ಎಂದು ಬೇಡಿಕೊಂಡಿದ್ದಾನೆ.

ಹರಳಯ್ಯ, ಮಾಚಯ್ಯ, ಕೇತಯ್ಯ, ಗುಂಡಯ್ಯ, ಕುರುಬ ಗೊಲ್ಲಾಳ, ಚೌಡಯ್ಯ, ಸಿದ್ಧರಾಮ, ಚನ್ನಬಸವ ಹೀಗೆ ಎಲ್ಲ ಮೃಡ ಭಕ್ತರನ್ನು ರೈತ ಭಯ-ಬಕುತಿಯಿಂದ ಪ್ರಾರ್ಥಿಸಿದ್ದಾನೆ. ಶರಣ ಹರಳಯ್ಯನನ್ನು ಕುರಿತು—

ಶರಣು ಶರಣೆಂಬೇವು ಹರಣ ಹಾರುವ ತನಕ
ಕರುಣಿಸಿರಿ ಶರಣ ಹರಳಯ್ಯ। ನಮಗಿನ್ನು
ಹರಸಿರಿ ಹುಲುಸು ಹುಲು-ಹುಲ್ಲಿಗೋ॥— ಎಂದೂ, ಮಡಿವಾಳ

ಮಾಚಿದೇವನನ್ನು ಕುರಿತು......

Digitalized by e-Sahithya Documentation Forum
Sponsored by Sarayu Foundation Trust

ಹಿಪ್ಪರಿಗಿ ಶರಣನಿಗೆ ತಪ್ಪದಲೆ ಬಾಗುವೆವು
ಮುಪ್ಪಾಗದಿರಲಿ ನಮ್ಹಾಡ । ಮಾಚಯ್ಯ
ಅಪ್ಪಿ ಹಾದಿಯನು ತೋರಿಸಲಿ ॥—ಎಂದೂ, ಮೇದಾರ ಕೇತಯ್ಯನನ್ನು ಕುರಿತು......

ಹಂತಿಯನು ಹಾಡೆಂದು ಪಂತ ಕಟ್ಟಲು ಬ್ಯಾಡ
ಹಂತಿ ತಿರುಗುವದು ನಿಂತಲ್ಲೆ ॥ ಕೇತಯ್ಯ
ಕುಂತು ಎದಿಯೊಳಗ ಹಾಡಿಸಿದ ॥—ಎಂದೂ, ಶರಣರನ್ನು ಮನದಲ್ಲಿ ನೆನೆದುಕೊಂಡಿದ್ದಾನೆ. ಅವರ ಸ್ಮರಣೆಯಿಂದ ಸ್ಫೂರ್ತಿಯನ್ನು ಪಡೆದುಕೊಂಡಿದ್ದಾನೆ. ಅವನ ಉತ್ಸಾಹ ಪೂರಿತ ಹಂತಿ ಪದವನ್ನು ಕೇಳಿ ಹಂತಿ ದನಗಳೂ ಸಂತಸದಿಂದ ತಿರುಗುತ್ತಿವೆ. ನಿಜಕ್ಕೂ ಅದೊಂದು ಮನೋಹರವಾದ ದೃಶ್ಯವು.

ಮನೆಯ ಮಡದಿಯೊಬ್ಬಳಿಗೂ ಶರಣರೆಂದರೆ ಅಷ್ಟೇ ಅಭಿಮಾನ.

ಶರಣರ ನೆನೆದರ ಸರಗೀಯ ಇಟ್ಟಾಂಗ
ಅರಳ ಮಲ್ಲೀಗಿ ಮುಡಿದಂಗ । ಕಲ್ಯಾಣ
ಶರಣರ ನೆನೆಯೋ ಎಲೆ ಮನವೇ ॥—ಎಂದು ಹೇಳುತ್ತಲೇ ಶರಣರ ನೆನೆವ, ಶರಣರನ್ನು ನೆನೆವಾಗ ಸರಗಿಯನ್ನು ಇಟ್ಟಾಗಿನ ಸೊಗಸನ್ನು ಅನುಭವಿಸುವ ಅವಳ ಮನಸ್ಸಾದರೂ ಎಂಥದು ! ಶಿವಭಕ್ತಿಯನ್ನು ಸಾರುವ ಇಂಥ ಜನಪದ ನುಡಿಗಳು ಇನ್ನೂ ಸಾವಿರಾರು ಸಿಗುತ್ತವೆ. ಆದುದರಿಂದ ಜನಪದ ಸಾಹಿತ್ಯದಲ್ಲಿ ಶೈವ ಭಕ್ತಿಯು ಹೊಳೆಯಾಗಿ ಹರಿದಿದೆ; ಮಹಾಪೂರವಾಗಿ ಬಂದಿದೆ, ಮಹಾಸಾಗರವಾಗಿ ನಿಂದಿದೆ ಎಂದು ಹೇಳಬಹುದು.

★

ಗುರು-ಪ್ರೇಮ :

ಭಾವಿಯ ನೀರನ್ನು ತುಂಬಿಕೊಂಡು ಮೇಲೇರುತ್ತಿರುವ ಕೊಡವನ್ನು ಹಿಡಿದ ಹಗ್ಗವು ಭದ್ರವಾಗಿದ್ದರೆ ಏನೂ ಅಪಾಯವಿಲ್ಲ. ಕೊಡ ಸುರಕ್ಷಿತವಾಗಿ ದಂಡೆಯನ್ನು ಸೇರುವುದು. ಹಾಗೆಯೇ ಪಾಪ-ಪುಣ್ಯದ ನೀರನ್ನು ತುಂಬಿಕೊಂಡ ಶಿಷ್ಯನ ಬಾಳ ಕೊಡ ಮೇಲೇರುವಾಗ ಗುರು ಕಾರುಣ್ಯದ ಹಗ್ಗ ಗಟ್ಟಿಯಾಗಿದ್ದರೆ ಸರಿ, ಹಾಗಲ್ಲದೆ ಗುರುಕಾರುಣ್ಯದ ಹಗ್ಗ ಬಲಹೀನವಾದರೆ ಆ ಶಿಷ್ಯನ ಬಾಳು ಕೂಡ ಅವನತಿಯ ಅಂತರಾಳದಲ್ಲಿ ಮುಳುಗಿಬಿಡುವುದು.

ಪೂಜ್ಯ ಶಿವಯ್ಯ ಸ್ವಾಮಿಗಳು, ಗದಗ

ಭಾಷೆ ಮತ್ತು ಸಮಾಜ ಜೀವನ

ಪ್ರೊ. ಕೆ. ಡಿ. ತಂಗೋಡ

ಭಾಷೆಯು ಮಾನವನ ಸಮಾಜ ಜೀವನದಲ್ಲಿ ಅತಿ ಮಹತ್ವದ ಕಾರ್ಯ ಮಾಡುತ್ತದೆ. ಅದು ಸಮಾಜ ಜೀವನಕ್ಕಾಗಿಯೇ ಹುಟ್ಟಿದೆಯಾದ್ದರಿಂದ ಸಮಾಜದ ಸೊತ್ತು. ಅತಿ ಪ್ರಾಚೀನ ಕಾಲದಿಂದ ಇಂದಿನವರೆಗಿನ ಮಾನವ ಸಮಾಜದ ಇತಿಹಾಸವನ್ನು ಅವಲೋಕಿಸಿದರೆ ಮಾನವನ ವಿಕಾಸದೊಂದಿಗೆ ಭಾಷೆಯ ವಿಕಾಸವೂ ಆಗುತ್ತ ಬಂದಿದೆಯೆಂದು ವಿದಿತವಾಗುವುದು. ಮಾನವನ ವಿಕಾಸದ ಎಲ್ಲ ಘಟ್ಟಗಳಲ್ಲಿ ಒಂದಿಲ್ಲ ಒಂದು ರೀತಿಯ ಭಾಷೆಯು ಬಳಕೆಯಲ್ಲಿದ್ದದ್ದು ಕಂಡುಬರುತ್ತದೆ. ನಾವೀಗ ಬಳಸುವ ಸಾಂಕೇತಿಕ ಭಾಷೆಯು ಹುಟ್ಟುವುದಕ್ಕಿಂತ ಮೊದಲು ಅದು ಚಿತ್ರ ಭಾಷೆ ಮತ್ತು ಹಾವಭಾವಗಳಿಂದ ಕೂಡಿದ ಭಾಷೆಗಳ ರೂಪವನ್ನು ಧರಿಸಿತ್ತು. ಈ ಎರಡು ವಿಧದ ಭಾಷೆಯು ಮಾಡಬಹುದಾದ ಕಾರ್ಯವನ್ನು ಈಗ ಸಾಂಕೇತಿಕ ಭಾಷೆ ಮಾಡುತ್ತದೆ. ಆದರೂ ಆಗೀಗ ಚಿತ್ರಗಳ ಮೂಲಕ ಇಲ್ಲವೆ ಹಾವಭಾವಗಳ ಮೂಲಕ ನಮ್ಮ ಭಾವನೆಗಳನ್ನು ವಿಚಾರಗಳನ್ನು ವ್ಯಕ್ತಪಡಿಸುವ ಪ್ರಯತ್ನವನ್ನು ನಾವು ಮಾಡುತ್ತೇವೆ. ಭಾಷೆ ಯಾವ ರೂಪವನ್ನೇ ಧರಿಸಲಿ ಅದು ಸಮಾಜ ಜೀವನಕ್ಕಾಗಿಯೇ ಅವತರಿಸಿ ಬಂದಿದೆಯೆಂಬುದನ್ನು ಗಮನದಲ್ಲಿರಿಸಿಕೊಳ್ಳಬೇಕು.

ಭಾಷೆಯನ್ನು ಮಾತಿನ ಭಾಷೆ ಹಾಗೂ ಬರಹದ ಭಾಷೆಯೆಂದು ವಿಂಗಡಿಸಬಹುದು. ಜಗತ್ತಿನಲ್ಲಿ ಹಲವಾರು ಭಾಷೆಗಳು ಬಳಕೆಯಲ್ಲಿದ್ದು ಅವುಗಳಿಗೆಲ್ಲ ಈ ವಿಂಗಡಣೆ ಅನ್ವಯಿಸುತ್ತದೆ. ಹಲವು ಭಾಷೆಗಳಲ್ಲಿ ಆಡುವ ಭಾಷೆಯು ಬರೆಯುವ ಭಾಷೆಗಿಂತ ಭಿನ್ನವಾಗಿರದಿದ್ದರೂ ಅವುಗಳ ಪ್ರಯೋಜನ ತುಸು ಭಿನ್ನವಾಗಿರುತ್ತದೆ. ಕೆಲವು ಭಾಷೆಗಳಲ್ಲಿ ಆಡುವ ಭಾಷೆ ಬರಹದ ಭಾಷೆಗಿಂತ ತುಸು ಮಟ್ಟಿಗೆ ಭಿನ್ನವಾಗಿರುತ್ತದೆ. ಇನ್ನು ಕೆಲವು ಭಾಷೆಗಳು ಕೇವಲ ಆಡುವ ಭಾಷೆಯ ರೂಪದಲ್ಲಿದ್ದು ಅವನ್ನು ಬರೆಯುವಾಗ ನಾವುಗಳು ಅನ್ಯಭಾಷೆಯ ಲಿಪಿಗಳಿಗೆ ಶರಣು ಹೋಗಬೇಕಾಗುತ್ತದೆ. ಈ ಸಂಗತಿಗಳನ್ನು ಉದಾಹರಣೆಗಳೊಂದಿಗೆ ವಿವರಿಸುವ ಪ್ರಯತ್ನವನ್ನು ಭಾಷೆಯ ಅಭ್ಯಾಸಿಗಳಿಗೆ, ತಜ್ಞರಿಗೆ ಬಿಟ್ಟು ಅದು ನಮ್ಮ ಸಮಾಜ ಜೀವನದಲ್ಲಿ

Digitalized by e-Sahithya Documentation Forum
Sponsored by Sarayu Foundation Trust

ಆಡುವ ಪಾತ್ರವನ್ನಷ್ಟೇ ಇಲ್ಲಿ ನೋಡೋಣ. ಇಲ್ಲಿ ವಿವರಿಸಲಾಗುವ ಸಂಗತಿಗಳು ಪ್ರಪಂಚದ ಎಲ್ಲ ಭಾಷೆಗಳಿಗೂ ಅನ್ವಯಿಸುತ್ತವೆ.

ಭಾಷೆಯಿಲ್ಲದೆ ಸಮಾಜ ಜೀವನವು ಅಸಾಧ್ಯವಾಗುತ್ತದೆ, ಅಯಶಸ್ವಿಯಾಗುತ್ತದೆ. ಅಂತೆಯೇ ಬಾಲ್ಯಾವಸ್ಥೆಯಲ್ಲಿಯೇ ಮಗುವಿಗೆ ಭಾಷೆಯನ್ನು ಕಲಿಸುತ್ತೇವೆ. ತನ್ನ ಸಮಾಜದಲ್ಲಿ ಪ್ರಚಲಿತವಿರುವ ಭಾಷೆಯನ್ನು ಕಲಿಯದೆ ವ್ಯಕ್ತಿಯು ಜೀವನವನ್ನು, ದೈನಂದಿನ ವ್ಯವಹಾರವನ್ನು ಸಾಗಿಸುವುದು ಶಕ್ಯವಿಲ್ಲ. ಸಮಾಜ ಜೀವನವನ್ನು ಯಶಸ್ವಿಯಾಗಿ ಸಾಗಿಸಲು ವ್ಯಕ್ತಿಯು ತನ್ನ ವಿಚಾರಗಳನ್ನು, ಭಾವನೆಗಳನ್ನು, ಅಭಿಪ್ರಾಯಗಳನ್ನು ಸಹಜೀವಿಗಳಿಗೆ ತಿಳಿಯಪಡಿಸಬೇಕಾಗುತ್ತದೆ. ಈ ಕಾರ್ಯದಲ್ಲಿ ಭಾಷೆಯು ಅವನಿಗೆ ಸಹಾಯಕವಾಗುತ್ತದೆ. ಆದ್ದರಿಂದ ಭಾಷೆಯು ನಮ್ಮ ಭಾವನೆಗಳನ್ನು, ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ನಾವು ಉಪಯೋಗಿಸುವ ಸಾಧನವೆಂಬುದನ್ನು ಲಕ್ಷ್ಯದಲ್ಲಿರಿಸಬೇಕು. ಅದು ಸಾಧನ ಮಾತ್ರವಾದ್ದರಿಂದ ಅದಕ್ಕೆ ಪ್ರಾಯೋಗಿಕ ಮಹತ್ವವಿದೆ. ನಮ್ಮ ವಿಚಾರಗಳನ್ನು ಹೆಚ್ಚೆಚ್ಚು ಜನರಿಗೆ ತಿಳಿಯಪಡಿಸಲು ಹೆಚ್ಚೆಚ್ಚು ಅಥವಾ ವಿವಿಧ ಭಾಷೆಗಳನ್ನು ಕಲಿಯುವ ಮನೋವೃತ್ತಿ ನಮ್ಮದಾಗಬೇಕು. ಈ ಮಾತನ್ನು ಗಮನದಲ್ಲಿಟ್ಟುಕೊಂಡರೆ ಆಗಾಗ ನಮ್ಮಲ್ಲಿ ಕಾಣಿಸಿಕೊಳ್ಳುವ ಭಾಷಾಂಧತೆ, ಭಾಷಾದ್ವೇಷ ಮಾಯವಾಗಿ ಅದರ ನಿಜವಾದ ಪ್ರಯೋಜನವನ್ನು ನಾವು ಪಡೆಯಬಹುದು.

ನಾವು ಬಳಸುವ ಭಾಷೆ ನಮ್ಮ ಸಂಸ್ಕೃತಿಯನ್ನು, ಪ್ರಗತಿಯನ್ನು ಸೂಚಿಸುತ್ತದೆ. ನಮ್ಮ ಪ್ರಾಂತ, ಪ್ರದೇಶಗಳನ್ನು ನಾವು ಆಡುವ ಭಾಷೆಯಿಂದ ಗುರುತಿಸಬಹುದು. ಇಂಗ್ಲಿಷ್ ಭಾಷೆಯನ್ನು ಆಡುವ ಭಾರತೀಯರು ಮಹಾರಾಷ್ಟ್ರ, ಕರ್ನಾಟಕ, ಪಂಜಾಬ, ಮದ್ರಾಸ ರಾಜ್ಯಗಳಿಗೆ ಸೇರಿದವರಾಗಿದ್ದರೆ, ಅವರು ಇಂಗ್ಲಿಷನ್ನು ಆಡುವ ರೀತಿಯ ಮೇಲಿಂದ ಯಾವ ಪ್ರದೇಶದವರು ಎಂಬುದನ್ನು ತಿಳಿಯಬಹುದು. ಅವರಾಡುವ ಭಾಷೆ ಭಿನ್ನವಾಗಿದ್ದರಂತೂ ಅವರನ್ನು ಗುರುತಿಸುವುದು ಬಹು ಸುಲಭ.

ಸಮಾಜ ಜೀವನದಲ್ಲಿ ಅನ್ಯರ ಚಟುವಟಿಕೆಗಳನ್ನು ನಿಯಂತ್ರಿಸಲು ಭಾಷೆಯನ್ನು ಬಳಸುತ್ತೇವೆ. ಒಬ್ಬ ಇನ್ನೊಬ್ಬನಿಗೆ ಆಜ್ಞೆ ಕೊಡಬಹುದು ಇಲ್ಲವೆ ಇನ್ನೊಬ್ಬನನ್ನು ಬಿನ್ನವಿಸಿಕೊಳ್ಳಬಹುದು. ಭಾಷೆಯ ಮೂಲಕವೇ ಆಜ್ಞೆ ಅಥವಾ ಬಿನ್ನಹ ವ್ಯಕ್ತವಾಗಿ ಆಜ್ಞೆ ಪಾಲಿಸುವ ಅಥವಾ ಬಿನ್ನಹವನ್ನು ಮನ್ನಿಸುವ ವ್ಯಕ್ತಿಯ ಚಟುವಟಿಕೆಯನ್ನು ನಿಯಂತ್ರಿಸುತ್ತದೆ. ನಾವು ಬಳಸುವ ಭಾಷೆಗೆ ಅದನ್ನು ಕೇಳಿದ ಜನರು ವಿವಿಧ ಪ್ರತಿಕ್ರಿಯೆಗಳನ್ನು ತೋರಿಸುತ್ತಾರೆ. ಒಂದೇ ವಾಕ್ಯವನ್ನು ಬೇರೆ ಬೇರೆ ರೀತಿಯಲ್ಲಿ

ಉಚ್ಚರಿಸಿದಾಗ ಕೇಳುವವರ ಮೇಲೆ ಅದು ವಿವಿಧ ಬಗೆಯ ಪರಿಣಾಮಗಳನ್ನುಂಟುಮಾಡುತ್ತದೆ. ಆದ್ದರಿಂದ ಅವರ ಪ್ರತಿಕ್ರಿಯೆಗಳೂ ಒಂದೇ ತೆರನಾಗುವುದಿಲ್ಲ. ಒಂದು ಶಬ್ದವನ್ನು ಉಚ್ಚರಿಸುವ ವಿಧಾನ ಬದಲಾದರೆ ಅದರ ಪರಿಣಾಮವೂ ಬದಲಾಗಿ ಕೇಳಿದವರ ಪ್ರತಿಕ್ರಿಯೆಯು ಬದಲಾಗುವದನ್ನು ಪ್ರಯೋಗದಿಂದ ಮನಗಾಣಬಹುದು. ಉದಾಹರಣೆಗಾಗಿ 'ಹೀಗೇನು' ಎಂಬ ಶಬ್ದದ ಉಚ್ಚಾರ ಮಾಡುವಾಗ ದನಿಯಲ್ಲಿ, ಉಚ್ಚರಿಸುವ ವಿಧಾನದಲ್ಲಿ ಬದಲಾವಣೆ ಮಾಡಿದಾಗ ಅದರಿಂದ ನಮ್ಮ ಆಶ್ಚರ್ಯವನ್ನು, ಕುತೂಹಲವನ್ನು ಇಲ್ಲವೆ ಸಿಟ್ಟನ್ನು ವ್ಯಕ್ತಪಡಿಸಬಹುದು. 'ಒಳ್ಳೆಯದು' ಎಂಬ ಶಬ್ದವನ್ನು ವಿವಿಧ ರೀತಿಯಲ್ಲಿ ಉಚ್ಚರಿಸಿದಾಗ ನಮ್ಮ ಸಮ್ಮತಿಯನ್ನು, ಕೃತಜ್ಞತಾ ಭಾವವನ್ನು ಅಥವಾ ಅಲಕ್ಷ್ಯವನ್ನು ವ್ಯಕ್ತಪಡಿಸಬಹುದು ಯಾವ ವ್ಯಕ್ತಿಗಳ ಸಮ್ಮುಖದಲ್ಲಿ ಈ ಶಬ್ದಗಳ ವಿಶಿಷ್ಟ ಬಳಕೆಯಾಗುವುದೋ ಆ ವ್ಯಕ್ತಿಗಳು ಅದನ್ನು ತಿಳಿದುಕೊಂಡು ಅದಕ್ಕನುಗುಣವಾದ ಪ್ರತಿಕ್ರಿಯೆಯನ್ನು ತೋರಿಸಿ ನಾವು ಆಶಿಸಿದಂತೆ ನಡೆದುಕೊಳ್ಳಬಹುದು. ಶಬ್ದಗಳನ್ನು ಸರಿಯಾಗಿ ಆಯ್ದು ಪರಿಣಾಮಕಾರಿಯಾಗಿ ಬಳಸುವುದು ಒಂದು ಕಲೆ. ಈ ಕಲೆಯಿಂದಲೇ ರಾಜಕಾರಣಿಗಳು, ಮತ ಪ್ರಚಾರಕರು, ಶಿಕ್ಷಕರು, ಜಾಹೀರಾತುದಾರರು ಜನರನ್ನು ಆಕರ್ಷಿಸಿ ತಮ್ಮ ಪ್ರಭಾವದಲ್ಲಿ ಹಾಕಿಕೊಳ್ಳುವದನ್ನು ನೋಡುತ್ತೇವೆ. ಮಾತನಾಡುವಾಗ ಸಂದರ್ಭೋಚಿತವಾದ ಶಬ್ದಗಳನ್ನು ಆಯ್ಕೆ ಮಾಡುವಲ್ಲಿ ಅಸಮರ್ಥರಾದರೆ ನಾವು ಉಚ್ಚರಿಸುವ ಶಬ್ದಗಳು ತಮ್ಮ ಅರ್ಥವನ್ನು ಕಳೆದುಕೊಳ್ಳುತ್ತವೆ. ನಮ್ಮ ಮಾತು ಕೇಳುವವರು ಅವುಗಳಿಂದ ಆಕರ್ಷಿಸಲ್ಪಡುವುದಿಲ್ಲ. ಆಕರ್ಷಕ ಶೈಲಿಯಲ್ಲಿ ಬರೆಯಬಲ್ಲ ಲೇಖಕರು ಜನರ ಮನವನ್ನು ಹೃದಯವನ್ನು ಗೆಲ್ಲಬಲ್ಲರು.

ಹಲವು ಸಲ ನಾವು ಬಳಸುವ ಭಾಷೆ, ಆದನ್ನು ಉಪಯೋಗಿಸುವ ವಿಧಾನ ತಪ್ಪು ಕಲ್ಪನೆಗೆ ದಾರಿಮಾಡಿಕೊಟ್ಟು ಜಗಳಕ್ಕೆ ಕಾರಣವಾಗಬಹುದು. ಈ ತೊಂದರೆಯನ್ನು ತಪ್ಪಿಸಲು ನಾವು ಬಳಸುವ ಭಾಷೆಯು ಸ್ಪಷ್ಟವಾಗಿರಬೇಕು, ಮಿತವಾಗಿರಬೇಕು, ಹಿತವಾಗಿರಬೇಕು. ಮಾತನಾಡುವುದು, ನಮ್ಮ ಸವಿ ಮಾತುಗಳಿಂದ ಜನರನ್ನು ಒಲಿಸಿಕೊಳ್ಳುವುದು, ಅವರ ಪ್ರೀತಿ ವಿಶ್ವಾಸಗಳನ್ನು ಗೆಲ್ಲುವುದು ಒಂದು ದೊಡ್ಡ ಕಲೆ. ಈ ಕಲೆಯನ್ನು ಕರಗತ ಮಾಡಿಕೊಂಡಾಗಲೇ ನಮ್ಮ ಸಮಾಜ ಜೀವನ ಸುಗಮವಾಗುವುದು, ಯಶಸ್ವಿಯಾಗುವುದು. ನಮ್ಮ ಭಾಷೆ ಪ್ರಯೋಜನಕಾರಿಯಾಗಬೇಕಾದರೆ, ಕೇಳುಗರ ಮೇಲೆ ಅಪೇಕ್ಷಿಸಿದ ಪರಿಣಾಮವನ್ನುಂಟುಮಾಡಬೇಕಾದರೆ ಅದು ಸುಲಭವಾಗಿರಬೇಕು, ಕ್ಲಿಷ್ಟವಾಗಿರಬಾರದು, ಅಪಾರ್ಥಕ್ಕೆ, ಸಂದೇಹಕ್ಕೆ ಎಡೆ ಮಾಡಿಕೊಡಬಾರದು ಅಂದರೆ ಅದು ಸ್ಪಷ್ಟವಾಗಿರಬೇಕು.

Digitalized by e-Sahithya Documentation Forum
Sponsored by Sarayu Foundation Trust

ಈ ಮಾತನ್ನು ವಚನಕಾರರು ಸುಂದರವಾಗಿ ಹೇಳಿದ್ದಾರೆ. "ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು, ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು, ನುಡಿದರೆ ಲಿಂಗಮೆಚ್ಚಿ ಅಹುದೆನಬೇಕು" ಇದೇ ಮಾತನ್ನು "ಮಾತು ಬಲ್ಲವ ಮಾಣಿಕ್ಯ ತಂದ ಮಾತರಿಯದವ ಜಗಳ ತಂದ" ಎಂಬ ಗಾದೆ ಸಾರಿ ಹೇಳುತ್ತದೆ. ಈ ವಿವೇಚನೆಯಿಂದ ಮಾತನಾಡುವ ಜಾಣತನದ ಮೇಲೆಯೇ ಸಮಾಜ ಜೀವನದಲ್ಲಿ ನಾವು ಬಯಸುವ ಯಶಸ್ಸು ಬಹುಮಟ್ಟಿಗೆ ಅವಲಂಬಿಸಿದೆ ಎಂಬುದು ಸ್ಪಷ್ಟವಾಗುತ್ತದೆ.

ಭಾಷೆಯು ಸಮಾಜ ಜೀವಿಗಳನ್ನು ಒಂದುಗೂಡಿಸುತ್ತದೆ. ಒಂದೇ ಭಾಷೆಯನ್ನಾಡುವ ಜನರು ಸುಲಭವಾಗಿ ಒಂದೆಡೆ ಸೇರುವುದನ್ನು, ಪರಸ್ಪರ ಸಹಕಾರ ನೀಡುವುದನ್ನು ನೋಡುತ್ತೇವೆ. ಭಾಷಾ ಬಾಂಧವ್ಯ, ಸಾಮರಸ್ಯದ ಮಹತ್ವವನ್ನು ಅರಿಯಬೇಕಾದರೆ ಹಲವಾರು ಭಾಷೆಗಳನ್ನಾಡುವ ಜನರು ವಾಸವಾಗಿರುವ ದೊಡ್ಡ ಪಟ್ಟಣಗಳಿಗೆ ಹೋಗಿ ನೋಡಬೇಕು. ಮುಂಬಯಿ, ಮದ್ರಾಸ್, ಕಲ್ಕತ್ತಾ ಮೊದಲಾದ ಪಟ್ಟಣಗಳಲ್ಲಿ ಒಂದೇ ಭಾಷೆಯನ್ನಾಡುವ ಜನರು ಹೇಗೆ ವರ್ತಿಸುವರೆಂಬುದು ಸರ್ವವಿದಿತ. ಇವರಲ್ಲಿ ಮೈತ್ರಿ ತಂತಾನೇ ಬೆಳೆದುಬಿಡುತ್ತದೆ. ತಮ್ಮ ನಾಡಿನಲ್ಲಿ, ತಮ್ಮ ಊರಲ್ಲಿ ಶತ್ರುಗಳಾದವರು ಒಬ್ಬರನ್ನೊಬ್ಬರು ಅಲಕ್ಷಿಸಿದವರು ಇಂಥ ಪಟ್ಟಣಗಳಿಗೆ ಹೋದಾಗ ತಮ್ಮ ದ್ವೇಷವನ್ನು ಮರೆತು ಮಿತ್ರರಾದ ಉದಾಹರಣೆಗಳನ್ನು ನಾನು ಬಲ್ಲೆ. ಭಾಷೆಯು ಕೆಲವು ಸಲ ಇದಕ್ಕೆ ವಿರುದ್ಧವಾದ ಕಾರ್ಯವನ್ನೂ ಮಾಡುತ್ತದೆ. ಅದು ಜನರನ್ನು ಬೇರ್ಪಡಿಸುತ್ತದೆ ಕೂಡ. ಒಂದು ಭಾಷೆಯನ್ನಾಡುವ ಜನರು ಮತ್ತೊಂದು ಭಾಷೆಯನ್ನು, ಆ ಭಾಷಿಕರನ್ನು ದೂರಿಡಲು ಪ್ರಯತ್ನಿಸುತ್ತಾರೆ, ದ್ವೇಷಿಸುತ್ತಾರೆ; ಅವರೊಡನೆ ಸಹಕರಿಸುವುದಿಲ್ಲ. ಇಂಥ ಪರಿಸ್ಥಿತಿ ಇಂದು ನಮ್ಮ ದೇಶದಲ್ಲಿ ಉದ್ಭವಿಸಿ ರಾಷ್ಟ್ರೀಯ ಐಕ್ಯತೆಗೆ ಗಂಡಾಂತರವನ್ನುಂಟುಮಾಡಿದೆ. ಈ ಮನೋವೃತ್ತಿ ಅಸ್ವಾಭಾವಿಕವಲ್ಲವಾದರೂ ಭಾಷಾಂಧತೆಯೇ ಇದರ ಮೂಲ ಭಾಷೆಯ ಬಗ್ಗೆ ಸರಿಯಾದ ಕಲ್ಪನೆಯಿಲ್ಲದ ಸಂಕುಚಿತ ಮನೋವೃತ್ತಿಯ ವ್ಯಕ್ತಿಗಳು ತಮ್ಮೊಳಗೆ ಜಗಳವಾಡುತ್ತಾರೆ. ಈ ಭಾಷಾ ವ್ಯಾಮೋಹವನ್ನು ತೊಡೆದುಹಾಕಲು ಭಾಷೆ ಕೇವಲ ಸಾಧನವೆಂಬುದನ್ನು ಮತ್ತೆ ಮತ್ತೆ ಲಕ್ಷ್ಯಕ್ಕೆ ತಂದುಕೊಳ್ಳಬೇಕು. ಒಂದು ಭಾಷೆಯನ್ನಾಡುವ ಪ್ರದೇಶದಲ್ಲಿ ನಾವು ಹುಟ್ಟಿದ್ದು ನಮ್ಮ ತಪ್ಪಲ್ಲ. ಅಲ್ಲಿ ಹುಟ್ಟಿದ ಮೇಲೆ ತಾಯಿ ಭಾಷೆ, ನಾಡಿನ ಭಾಷೆಯನ್ನು ಕಲಿತದ್ದೂ ಅಷ್ಟೇ ಸ್ವಾಭಾವಿಕ. ಚಿಕ್ಕಂದಿನಿಂದ ಕಲಿತು, ಉಪಯೋಗಿಸಿದ ಭಾಷೆಯ ಬಗ್ಗೆ, ಪ್ರೇಮ, ಗೌರವ ಬೆಳೆದು ಬರುವುದರಲ್ಲಿ ಆಶ್ಚರ್ಯಪಡುವ ಮಾತೇನಿಲ್ಲ. ಆದರೆ ನಮ್ಮ ಭಾಷೆ

ಯನ್ನು ಪ್ರೀತಿಸುವುದೆಂದರೆ, ಅದರ ವಿಕಾಸಕ್ಕೆ, ಪ್ರಗತಿಗೆ ಹೆಣಗುವುದೆಂದರೆ ಬೇರೊಂದು ಭಾಷೆಯನ್ನು, ಅದನ್ನಾಡುವ ಜನರನ್ನು ದ್ವೇಷಿಸುವುದಲ್ಲ. ಈ ಮಾತನ್ನು ನಾವು ಸದಾ ನೆನೆಯಬೇಕು. ಅಂದರೇನೇ ನಮಗಿಂದು ಒದಗಿದ ಗಂಡಾಂತರ ದೂರಾದೀತು. ಭಾರತದಲ್ಲಿ ವಿಶೇಷವಾಗಿ ಇಂಥ ಪ್ರಯತ್ನ ನಡೆಯಬೇಕು. ನಮ್ಮ ದೇಶದ ಎಲ್ಲ ಭಾಷೆಗಳ ಬಗ್ಗೆ ಗೌರವವನ್ನು ಬೆಳೆಸಿಕೊಳ್ಳುವುದರ ಜೊತೆಗೆ ಇತರ ಭಾರತೀಯ ಭಾಷೆಗಳನ್ನು ಹೆಚ್ಚಿಚ್ಚಾಗಿ ಕಲಿಯುವ ಮನೋವೃತ್ತಿಯನ್ನು ಎಲ್ಲ ರಾಜ್ಯಗಳ ಪ್ರಜೆಗಳೂ ತಾಳಬೇಕು. ಈ ಪ್ರಯತ್ನಕ್ಕೆ ನಮ್ಮ ಶಿಕ್ಷಣದಲ್ಲಿ ಸಾಕಷ್ಟು ಅವಕಾಶವಿರಬೇಕು. ❖

ಮೆದುಳಿಗೊಂದು ಸವಾಲು

ಸುಕುಮಾರ ಆನಂದ, ಗುತ್ತಲ

ಸೂಚನೆ:—ಹಲವು ಪ್ರಶ್ನೆಗಳನ್ನು ಕೊಟ್ಟಿದೆ. ಪ್ರತಿ ಪ್ರಶ್ನೆಯ ಕೆಳಗೂ ಮೂರು ಉತ್ತರಗಳಿವೆ. ಅವುಗಳಲ್ಲಿ ಒಂದು ಮಾತ್ರ ವೈಜ್ಞಾನಿಕವಾಗಿ ಸರಿಯಾದುದು. ಅದನ್ನು ಪತ್ತೆ ಮಾಡಿ.

೧. ❖ ಮೊಟ್ಟೆಯ ಕೊನೆಯ ಭಾಗಗಳನ್ನು ಎರಡು ಕೈಗಳ ಮಧ್ಯೆ ಹಿಡಿದು, ಜೋರಾಗಿ ಅಮುಕಿದರೂ, ಅದು ಒಡೆಯುವುದಿಲ್ಲ. ಕಾರಣವೇನು ?

ಎ) ಮೊಟ್ಟೆಯ ಎರಡು ಭಾಗಗಳಲ್ಲಿಯೂ ಗಟ್ಟಿಯಾದ ಪದಾರ್ಥವಿರುವುದರಿಂದ.

ಬಿ) ಮೊಟ್ಟೆಯು ಆ ಭಾಗದಲ್ಲಿ ವಕ್ರವಾಗಿರುವುದರಿಂದ ನಾವು ಅದುಮುವ ಶಕ್ತಿಯು ಎಲ್ಲಾ ಕಡೆಯು ಹರಡಿಕೊಳ್ಳುವುದರಿಂದ.

ಸಿ) ನಾವು ಅದುಮುವ ಶಕ್ತಿಯು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಮೊಟ್ಟೆಯ ಮೇಲೆ ಬೀಳುವುದರಿಂದ, ಅವೆರಡೂ ತೊಡೆದು ಹೋಗುವುದರಿಂದ.

೨. ❖ ಒಂದು ಉರಿಯುತ್ತಿರುವ ನಕ್ಷತ್ರ ಕಡ್ಡಿಯನ್ನು ವೃತ್ತಾಕಾರದಲ್ಲಿ ವೇಗವಾಗಿ ತಿರುಗಿಸುತ್ತಾ ಇದ್ದರೆ, ಒಂದು ಉರಿಯುತ್ತಿರುವ ವೃತ್ತ ಕಾಣಿಸುವುದು ಏಕೆ?

ಎ) ನಕ್ಷತ್ರ ಕಡ್ಡಿಯ ಬೆಳಕು ತೀಕ್ಷ್ಣವಾಗಿರುವುದರಿಂದ ಆ ರೀತಿ ಕಾಣುತ್ತದೆ.

ಬಿ) ನಾವು ಕಣ್ಣಿನ ರೆಪ್ಪೆ ಆಡಿಸುವುದರಿಂದ.

ಸಿ) ಅದು ಕಣ್ಣಿನ ಭ್ರಮೆ ಅಷ್ಟೆ.

Digitalized by e-Sahithya Documentation Forum
Sponsored by Sarayu Foundation Trust

೩. ❖ ಕಾಮನ ಬಿಲ್ಲು ಹೇಗೆ ಮೂಡುವದು ?

ಎ) ಸೂರ್ಯನ ಕಿರಣಗಳು ಮಳೆಯ ಹನಿಗಳ ಮೂಲಕ ವಿವಿಧ ರೀತಿಯಲ್ಲಿ ಹಾದು ಹೋದಾಗ ಆ ರೀತಿ ಕಾಣುತ್ತದೆ.

ಬಿ) ಗಾಳಿಯ ಮೂಲಕ, ಮಳೆಹನಿಗಳನ್ನು ಸೂರ್ಯನ ಬೆಳಕಲ್ಲಿ ನೋಡಿದಾಗ ಹಾಗೆ ಕಾಣುತ್ತದೆ.

ಸಿ) ಮಳೆಯ ಹನಿಗಳ ಮೂಲಕ ಸೂರ್ಯನ ಬೆಳಕು ಅನೇಕ ರೀತಿಯಲ್ಲಿ ಕಿರಣ ವಕ್ರೀಭವನವುಂಟಾಗುವುದರಿಂದ ಕಾಮನ ಬಿಲ್ಲು ಕಾಣಿಸುತ್ತದೆ.

೪. ❖ ಹಸುಗಳು ವಿಶ್ರಾಂತಿ ತೆಗೆದುಕೊಳ್ಳುವಾಗ ಬಾಯಾಡಿಸುವುದೇಕೆ ?

ಎ) ಮೊದಲು ಬಾಯಿಯಲ್ಲಿ ಶೇಖರಿಸಿದ ಆಹಾರವನ್ನು ಆ ರೀತಿ ಮತ್ತೆ ಅಗಿದು ನುಂಗುವುದು.

ಬಿ) ಸೋಮಾರಿಯಾಗಿ ಕಾಲ ಕಳೆಯಲು ಇಷ್ಟ ಪಡದೆ, ಆ ರೀತಿ ಮಾಡುತ್ತದೆ.

ಸಿ) ಮೊದಲಿನಿಂದಲೂ ಹಸುಗಳು ಮಾಡಿಕೊಂಡು ಬಂದಿರುವ ಮಾಮೂಲು ಕ್ರಿಯೆ.

೫. ❖ ಸೂರ್ಯನು ತನ್ನ ಗ್ರಹಗಳೊಡನೆ ಯಾವುದೋ ನಿರ್ದಿಷ್ಟವಾದ ದಿಕ್ಕಿನಲ್ಲಿ ಚಲಿಸುತ್ತಾನೆ. ನಿಜವೆ?

ಎ) ಖಂಡಿತ ಇಲ್ಲ. ಹಾಗಿದ್ದರೆ. ಚಂದ್ರನಂತೆ ಕೆಲವು ಕಾಲ ವಿಕಾಸ ಹೊಂದಿ ಮತ್ತೆ ಕೆಲವು ಕಾಲ ಕ್ಷಯಿಸಬೇಕು.

ಬಿ) ನಿಜ. ಸೂರ್ಯನ ಚಲನೆ ನಮಗೆ ತೋರದಷ್ಟು ಕನಿಷ್ಟ.

ಸಿ) ಸೂರ್ಯ ತನ್ನ ಅಕ್ಷದಲ್ಲಿ ಮಾತ್ರ ಸುತ್ತುತ್ತಾನೆ.

೬. ★ ಕೆಲವರಿಗೆ ಹೃದಯ ಸ್ಥಂಭನವಾಗಲು ಕಾರಣವೇನು ?

ಎ) ಹೃದಯರೋಗ ಇರುವವರಿಗೆ ಆ ರೀತಿ ಆಗಾಗ್ಗೆ ಅಥವಾ ಒಂದೇ ಸಲ ಆಗುತ್ತದೆ.

ಬಿ) ಕೆಲಸದ ಒತ್ತಡ ಹೆಚ್ಚಾಗಿರುವವರಿಗೆ ಆ ರೀತಿ ಆಗಲೇಬೇಕು.

ಸಿ) ದೇಹದ ಕೆಲ ಭಾಗಗಳಿಗೆ ರಕ್ತ ಪರಿಚಲನೆ ಸರಿಯಾಗಿ ನಡೆಯದೆ, ಹೃದಯದಲ್ಲಿ ಒತ್ತಡ ಹೆಚ್ಚಾಗಿ, ಆ ರೀತಿ ಆಗುತ್ತದೆ.

೭. ★ ಚಲಿಸುತ್ತಿರುವ ವಾಹನದಿಂದ ಎಂತಹ ಭಾರ ವಸ್ತುವನ್ನಾದರೂ ಯಾವ ದಿಕ್ಕಿನಲ್ಲಿ ಬಿಸಾಡಿದರೆ, ಅದು ಆದಷ್ಟು ಸುರಕ್ಷಿತವಾಗಿರುತ್ತ ದೆ ?

ಎ) ವಾಹನ ಓಡುತ್ತಿರುವ ದಿಕ್ಕಿನಲ್ಲಿ ಬಹಳ ವೇಗವಾಗಿ ಬಿಸಾಡಬೇಕು.

ಬಿ) ವಾಹನದ ಆಚೆಯಿಂದ ಸುಮ್ಮನೆ ಬಿಡಬೇಕು.

ಸಿ) ವಾಹನ ಚಲನೆಯ ವಿರುದ್ಧ ದಿಕ್ಕಿನಲ್ಲಿ, ವಾಹನದ ವೇಗದಲ್ಲೇ ಬಿಸಾಡಿದರೆ ಉತ್ತಮ.

೮. ★ ಕೆರೆಯ ನೀರಿನಲ್ಲಿ ಒಂದು ಕಲ್ಲೆಸೆದಾಗ, ಮೂಡುವ ಅಲೆಗಳು ಬಹಳ ದೂರ ಮೂಡುತ್ತಲೇ ಇರುತ್ತವೆ. ಇದಕ್ಕೆ ಮುಖ್ಯವಾಗಿ ಬೇಕಾಗುವ ಅಂಶ ಯಾವುದು ?

ಎ) ಅವುಗಳಿಗೆ ಯಾವ ಅಡೆತಡೆಗಳೂ ಇರಕೂಡದು.

ಬಿ) ನೀರಿನ ಆಳ ಬಹಳವಿದ್ದಷ್ಟೂ ಉತ್ತಮ.

ಸಿ) ಆಳಕ್ಕೆ ತಕ್ಕಂತೆ ಕಲ್ಲಿನ ಗಾತ್ರ ಸರಿಯಾಗಿರಬೇಕು.

೯. ★ ಪ್ಯಾಲೆಸ್ಟೈನ್ ಹತ್ತಿರದ ಸಮುದ್ರದಲ್ಲಿ (Dead Sea) ಯಾವ ಮನುಷ್ಯನೇ ಆಗಲಿ, ಮುಳುಗದೆ ತೇಲುತ್ತಾನೆಂದು ಹೇಳುತ್ತಾರೆ. ದು ನಿಜವೇ ಅಥವಾ ಸುಳ್ಳೇ ? ಯಾವುದಕ್ಕೂ ಕಾರಣವೇನು ?

ಎ) ಸುಳ್ಳು. ಎಲ್ಲಾ ಸಮುದ್ರಗಳಲ್ಲಿಯೂ ಮುಳುಗುವಾಗ ಅಲ್ಲಿಯೂ ಮುಳುಗಲೇ ಬೇಕು.

ಬಿ) ನಿಜ ಆ ಸಮುದ್ರದಲ್ಲಿ ಉಪ್ಪಿನ ಅಂಶ ಬಹಳವಾಗಿರುವುದರಿಂದ ಮನುಷ್ಯರು ತೇಲುತ್ತಾರೆ.

ಸಿ) ನಿಜ. ಆದರೆ ಈಜು ಬರುವವರಿಗೆ ಮಾತ್ರ ಸಾಧ್ಯ.

ಉತ್ತರಗಳು :— ೧-ಬಿ ೨-ಸಿ ೩-ಸಿ ೪-ಎ
೫-ಬಿ ೬-ಸಿ ೭ ಸಿ ೮-ಎ ೯-ಬಿ

ನುಡಿ ಮುತ್ತುಗಳು

★ ಅಧಿಕಾರವು ಒಂದು ವಿಶ್ವಸ್ಥ ನಿಧಿ ಇದ್ದ ಹಾಗೆ. ಜನರಿಂದ ದೊರೆತುದನ್ನು ಜನರ ಕಲ್ಯಾಣಕ್ಕಾಗಿಯೇ ಉಪಯೋಗಿಸಬೇಕು —**ಡಿಸ್ರೇಲಿ**

★ ಅಧಿಕಾರವನ್ನು ಪ್ರಯೋಗಿಸುತ್ತಿರುವಾಗ ಮಾನವನ ನಿಜವಾದ ಸ್ವಭಾವವು ಬಯಲಾಗುತ್ತದೆ. —**ಚೀನಾಗಾದೆ**

★ ಅಧಿಕಾರಾಕಾಂಕ್ಷಿಯಾದವನು ಸಾಮರ್ಥ್ಯ, ಸಹನೆ, ನಿಷ್ಪಕ್ಷಪಾತತನ, ನಿಷ್ಪಾಪ ಹಸ್ತ, ಮತ್ತು ಕರ್ತವ್ಯ ದಕ್ಷತೆ ಎಂಬ ಐದು ಗುಣಗಳನ್ನು ಅವಶ್ಯಕವಾಗಿ ಅಳವಡಿಸಿಕೊಳ್ಳಬೇಕು.

Digitalized by e-Sahithya Documentation Forum
Sponsored by Sarayu Foundation Trust

ಬಸವಗೀತೆ-ಪ್ರಸಾದ

ಜಗದ್ಗುರು ಮಾತೆ ಮಹಾದೇವಿ

೧. ಭವರೋಗ ವೈದ್ಯ ಪರಮಾತ್ಮ

ಒಡಲುಗೊಂಡು ಹುಟ್ಟಿದ ಘಟಕ್ಕೆ ಅಷ್ಟೋತ್ತರ ಶತವ್ಯಾಧಿ
ಅದಕ್ಕೆ ನಾನಾ ಔಷಧಿಯ ತಂದು ಹೊರೆವರು
ಆ ಪರಿಯು ನಾನದ ಹೊರೆಯೆನು
ಅದೇನು ಕಾರಣವೆಂದಡೆ:
ಭವರೋಗವೈದ್ಯ, ಭವಹರನೆಂಬ ಬಿರಿದು ನಿಮ್ಮದಾಗಿ
ಇದು ಕಾರಣ ಕೂಡಲಸಂಗಮದೇವಾ,
ನಿಮ್ಮ ಪುರಾತನದ ಪ್ರಸಾದವಲ್ಲದೆ ಕೊಂಡಡೆ ನಿಮ್ಮಾಣೆ.

— ಬ.ಷ.ವ (1129)

ಸರಳಾರ್ಥ: ದೇಹ ಸಮೇತವಾಗಿ ಬಾಳುವ ಮಾನವ ಜೀವಕ್ಕೆ ಹಲವು ಹದಿನೆಂಟು, ನೂರೆಂಟು ರೋಗಗಳು. ಅವುಗಳ ನಿವಾರಣೆಗಾಗಿ ಅನೇಕ ಔಷಧಿಗಳನ್ನು ತಂದು ತಿನ್ನುವರು. ಆದರೆ ಆ ಪರಿಯಲ್ಲಿ ನಾನು ಈ ದೇಹದ ಸಂರಕ್ಷಣೆ ಮಾಡೆನು. ಏಕೆಂದರೆ, ಪರಮಾತ್ಮನೇ ನೀನು ಭವರೋಗ ವೈದ್ಯ, ಭವಹರ ಎಂಬುದಾಗಿ ಬಿರುದು ಹೊತ್ತವನಾದ ಕಾರಣ, ನಿನ್ನ ಅನುಗ್ರಹ ಪಡೆದು, ನಿನ್ನ ಪ್ರತಿರೂಪವಾಗಿ ಪ್ರತಿನಿಧಿಗಳಾಗಿ ಇರುವ ಮಹಾನುಭಾವಿಗಳ ಆಶೀರ್ವಾದ ಪ್ರಸಾದವನ್ನಲ್ಲದೆ ಬೇರೆ ಕೊಳ್ಳೆನು. ಇದು ದೈವೀಸಾಕ್ಷಿಯಾಗಿಯೂ ನಿಜ.

ವ್ಯಾಖ್ಯೆ: ಜನನ-ಮರಣ. ರೋಗ-ರುಜಿನ, ಯೌವ್ವನ-ಮುಪ್ಪುದೇಹಕ್ಕೆ ಸ್ವಾಭಾವಿಕವಾಗಿ ಒದಗುವ ಕೋಟಲೆಗಳು. ಅನೇಕ ಕಾರಣಗಳಿಗಾಗಿ, ಪರಿಸರದ ಬದಲಾವಣೆಯಿಂದಾಗಿ ರೋಗಗಳು ಬಂದು ದೇಹವನ್ನು ಆಶ್ರಯಿಸುವುದು ತೀರಾ ಸಹಜ. ಇಂಥ ಪ್ರಸಂಗದಲ್ಲಿ ರೋಗಿ ವೈದ್ಯರನ್ನಾಶ್ರಯಿಸುವುದು ನಿರೀಕ್ಷಿತ

ಆದರೆ ಬಸವಣ್ಣನವರು ಈ ಪ್ರಕಾರವಾಗಿ ಆಚರಿಸರು. ಕಾರಣವೇನೆಂದರೆ, ಪರಮಾತ್ಮನಿಗೆ ಭವರೋಗಕ್ಕೆ ವೈದ್ಯನು; ಭವಸಂಹಾರಿ ಎಂಬ ಬಿರಿದು ಇಲ್ಲವೆ? ಹುಟ್ಟು-ಸಾವುಗಳೆಂಬ, ಜನ್ಮಾಂತರಗಳೆಂಬ ಭವದ ರೋಗವನ್ನು ಪರಿಹರಿಸುವವನು ಮಾತ್ರವೇ ಅಲ್ಲ, ಭವದಲ್ಲಿ ಅಂದರೆ ಇಹವಲ್ಲಿ ಬರುವ ರೋಗಗಳಿಗೂ ಪರಿಹಾರ ನೀಡುವ ವೈದ್ಯನೆಂಬ ನಂಬುಗೆ ಅವರಿಗೆ. ಪರಮಾತ್ಮನ ಅನುಗ್ರಹವಾದರೆ ಕೊರಡು ಕೊನರುವುದು, ಬರಡು ಹಯನಾಗುವುದು ಎಂದಮೇಲೆ ದೇಹದ ರೋಗಗಳು ವಾಸಿಯಾಗವೆ?

ಎರಡನೆಯದಾಗಿ ಶರಣನ ಸಮಸ್ತ ಜೀವನವೂ ಪರಮಾತ್ಮನ ಆಸ್ತಿಯಾಗಿ ವರ್ಗಾಯಿಸಲ್ಪಟ್ಟಾಗ ಅದರ ಅಳಿವು-ಉಳಿವು, ಯೋಗ-ಕ್ಷೇಮಗಳ ಚಿಂತೆ ಅವನಿಗೆ ಸೇರಿದ್ದಲ್ಲವೆ? "ಈ ಜೀವವು ಇನ್ನಷ್ಟು ಕಾಲ ಇಹವಲ್ಲಿರಲಿ, ಅದರಿಂದ ಲೇಸಾಗುವುದು" ಎಂಬ ಅಪೇಕ್ಷೆ ದೇವನದಾದರೆ ತಾನೇ ಉಳಿಸಿಕೊಳ್ಳುವನು. "ಈ ಬಾಳು ಇನ್ನು ಸಾಕು; ಇಹವನ್ನು ತೊರೆಯಲಿ; ಭೂಭಾರಕನಾಗಿ ಇರುವುದು ಬೇಡ;" ಎಂಬ ಜಿಗುಪ್ಸೆ ಇದ್ದರೆ, ಅಥವಾ ಈ ಪ್ರೀತಿಪಾತ್ರನು ನನ್ನಲ್ಲಿ ಬೆರೆಯಲಿ ಎಂಬ ಅಭೀಪ್ಸೆ ಇದ್ದರೆ, ತಾನಾಗಿ ನಿರ್ಮೂಲನ ಮಾಡುವನು ಅಥವಾ ಎತ್ತಿಕೊಳ್ಳುವನು. ಅದಕ್ಕಾಗಿ ಚಿಂತೆ, ಕಳವಳಗಳು ಏಕೆ? ಈ ನಂಬುಗೆಯಿಂದ ಬಸವಣ್ಣನವರು ಯಾವುದೇ ಮದ್ದನ್ನು ತೆಗೆದುಕೊಳ್ಳಲು ಸಿದ್ಧರಿಲ್ಲ ಕೇವಲ ಲಿಂಗ-ಜಂಗಮದ ಪ್ರಸಾದವನ್ನು ಮಾತ್ರ ತೆಗೆದುಕೊಳ್ಳುವರು.

ಇಲ್ಲಿ ಪಾಠಾಂತರಗಳು ಎರಡಿವೆ.

1) ನಿಮ್ಮ ಪುರಾತನ ಪ್ರಸಾದವಲ್ಲದೆ ಕೊಂಡಡೆ ನಿಮ್ಮಾಣೆ.

2) ನಿಮ್ಮ ಪುರಾತನರ ಪ್ರಸಾದವಲ್ಲದೆ ಕೊಂಡಡೆ ನಿಮ್ಮಾಣೆ. "ಪುರಾತನ ಪ್ರಸಾದ" ಎಂದರೆ ಲಿಂಗಪ್ರಸಾದ; ತಾನೇ ನಿತ್ಯಾರ್ಚನೆಯನ್ನು ಮಾಡಿಕೊಂಡು ಸ್ವೀಕರಿಸುವ ಲಿಂಗತೀರ್ಥ, ಬಿಲ್ವದಳ, ವಿಭೂತಿ. "ಪುರಾತನರ ಪ್ರಸಾದ"ವೆಂದರೆ ದೇವಪ್ರತಿನಿಧಿಗಳಾದ ಮಹಾತ್ಮರು ಕೊಡುವ ತೀರ್ಥವೋ, ಪತ್ರೆಯೋ, ವಿಭೂತಿಯೋ ಮುಂತಾದುದು. ಈ ವಚನದಲ್ಲಿ ರೋಗಗಳಿಗೆ ಆಧ್ಯಾತ್ಮ ಚಿಕಿತ್ಸೆಯೇನೆಂಬ ವಿವರವಷ್ಟೇ ಅಲ್ಲದೆ. ಶರಣನದು ಸಮರ್ಪಿತವಾದ ದೈವೀಜೀವನ ಎಂಬ ಸ್ಥಿತಿಗೋಚರವಾಗುತ್ತದೆ.

೨. ಅರ್ಪಿತದಲ್ಲಿ ಅವಧಾನಿ

ಮರಗಿಡ ಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತರಿತರಿದು
ಪ್ರಾಣವ ಕೊಂಡುಂಡು, ಶರೀರವ ಹೊರೆವ ದೋಷಕ್ಕೆ

Digitalized by e-Sahithya Documentation Forum
Sponsored by Sarayu Foundation Trust

ಇನ್ನಾವುದು ವಿಧಿಯಯ್ಯಾ ?
ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ
ಜೀವಜಾಲದಲ್ಲಿದೆ ಚರಾಚರವೆಲ್ಲ.
ಅದು ಕಾರಣ,
ಕೂಡಲಸಂಗನ ಶರಣರು ಲಿಂಗಕ್ಕರ್ಪಿಸಿ, ಪ್ರಸಾದವ ಕೊಂಡು
ನಿರ್ದೋಷಿಗಳಾಗಿ ಬದುಕಿದರು.

ಬ.ಷ.ವ. (1222)

ಸರಳಾರ್ಥ: ಮರಗಿಡ ಬಳ್ಳಿ ಧಾನ್ಯಂಗಳ ಬೆಳಸುಗಳ ಮೇಲೆಯೇ ಮನುಷ್ಯನು ಜೀವಧಾರಣೆ ಮಾಡಿಕೊಂಡಿರುವುದು. ಇದು ತೀರಾ ಅನಿವಾರ್ಯ. ಇಡೀ ಸಚರಾಚರವಾದ ಜಗತ್ತೆಲ್ಲವು ಒಂದಿಂದ್ರಿಯ ಮೊದಲಾಗಿ ಐದು ಇಂದ್ರಿಯಗಳೇ ಒಟ್ಟಾಗಿರುವ ಜೀವಜಾಲವಾಗಿದೆ. ಆದ್ದರಿಂದ ಜ್ಞಾನಿಗಳಾದ ಶರಣರು ತಾವು ಭುಂಜಿಸುವ ಪದಾರ್ಥಗಳನ್ನು ದೇವನಿಗೆ ಸಮರ್ಪಿಸಿ ಪ್ರಸಾದ ರೂಪದಲ್ಲಿ ಪಡೆದು ಸ್ವೀಕರಿಸುವ ಕಾರಣ, ನಿರ್ದೋಷಿಗಳಾಗಿ ಬದುಕುವರು.

ವ್ಯಾಖ್ಯೆ: ಸಸ್ಯಗಳು ತಳೆಯುವ ಫಲಗಳನ್ನುಂಡು, ದವಸ ಧಾನ್ಯಗಳನ್ನು ತಿಂದು ಶರೀರವನ್ನು ಮನುಷ್ಯ ಸಂರಕ್ಷಣೆ ಮಾಡಿಕೊಳ್ಳುವನು. ದೇಹ ರಕ್ಷಣೆಗೆ ಇದು ತೀರಾ ಅನಿವಾರ್ಯ. ವಿಚಾರ ಮಾಡುತ್ತ ಹೋದರೆ ಚರಾಚರ ಜಗತ್ತೆಲ್ಲವೂ ಒಂದು ಇಂದ್ರಿಯ ಮೊದಲಾಗಿ ಐದು ಇಂದ್ರಿಯಗಳಿಂದ ಕೂಡಿದ ಜೀವಜಾಲವಾಗಿದೆ. ಭೂತವಸ್ತುಗಳಲ್ಲಿ ಕೇವಲ ಭೌತಿಕ ದೇಹವಿದ್ದರೆ, ಸಸ್ಯಗಳಲ್ಲಿ ಉಸಿರಾಟ, ಜೀವದ ಸುಳಿವು ಕಾಣಬರುತ್ತದೆ. ಪ್ರಾಣಿಗಳಲ್ಲಿ ಜೀವವಿದೆ, ಮನಸ್ಸು ಹೊಸ ಸಂಪತ್ತು. ಮನುಷ್ಯನಾದರೋ ದೇಹ-ಜೀವಗಳ ಸಂಯುಕ್ತ ವಸ್ತುವಷ್ಟೇ ಅಲ್ಲ ಅವನಿಗೆ ಬುದ್ಧಿ ಸಂಪತ್ತೂ ಇದೆ. ಪಂಚ ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳು ಹಂತಹಂತವಾಗಿ ವಿಕಾಸಗೊಳ್ಳುತ್ತ ಬಂದು ಮನುಷ್ಯನಲ್ಲಿ ಸಂಪೂರ್ಣವಾಗಿ ಅರಳಿವೆ, ಕಾರ್ಯೋನ್ಮುಖ ವಾಗಿವೆ. ಮಾನವನು ಇಹದಲ್ಲಿ ಬಾಳಬೇಕಾದರೆ ಆಹಾರ ಅವಶ್ಯ. ಪ್ರಾಣಿವಧೆ ಹಿಂಸಾತ್ಮಕ, ಪಾಪಮಯ. ಅಷ್ಟು ಹಿಂಸೆಗೆ ಸಸ್ಯಗಳ ಉಪಯೋಗ ಎಡೆಮಾಡಿ ಕೊಡದಿದ್ದರೂ ಸ್ವಲ್ಪ ಮಟ್ಟಿನ ಹಿಂಸೆಯಾದರೂ ಇದ್ದೇ ಇರುತ್ತದೆ. ಹಾಗೆಂದು ಮನುಷ್ಯ ಆಹಾರವಿಲ್ಲದೆ ಬದುಕುವುದು ಅಸಾಧ್ಯ. ಅವನ ಜೀವಿತಕ್ಕೆ ಸಸ್ಯಾಹಾರ ತೀರ ಅವಶ್ಯಕವಾದ ಕಾರಣ, ಕರ್ತವ್ಯ ಪ್ರಜ್ಞೆಯಿಂದ ಊಟ ಮಾಡುವ ಶರಣನು ತಾನು ತಿನ್ನುವ ಪದಾರ್ಥಗಳನ್ನು ದೇವನಿಗೆ ಅರ್ಪಿಸಿ, ಪ್ರಸಾದ ಮನೋಭಾವದಿಂದ

ಉಣ್ಣುವ ಕಾರಣ ಅವನು ನಿರ್ದೋಷಿಯಾಗುತ್ತಾನೆ. ಜನನ-ಮರಣಕ್ಕೆ ಕಾರಣೀಭೂತವಾಗುವ ಪಾಪ-ಪುಣ್ಯಗಳ ಸಂಕೋಲೆಯಿಂದ ನಿವೃತ್ತನಾಗುತ್ತಾನೆ.

ಕೊಟ್ಟುಕೊಂಡಡೆ ಪ್ರಸಾದ

ಲಿಂಗಕ್ಕೆ ಕೊಟ್ಟುಕೊಂಡಡೆ ಪ್ರಸಾದಿ ;
ಜಂಗಮವಾರೋಗಣೆಯ ಮಾಡಿ ಮಿಕ್ಕುದು ಪ್ರಸಾದ ;
ಇದೇ ಪ್ರಸಾದದಾದಿ ಕಂಡಯ್ಯಾ ;
ಮುನ್ನಾದಿಯ ಪ್ರಸಾದವ ಭೇದಿಸಬಲ್ಲಡೆ ಇದೇ ಕಂಡಯ್ಯಾ ;
ಲಿಂಗಕ್ಕೆ ಕೊಡದೆ ಜಂಗಮಕ್ಕೆ ನೀಡದೆ ಕೊಂಡಡೆ
ಹುಳುಗೊಂಡದಲಿಕ್ಕುವ, ನಮ್ಮ ಕೂಡಲ ಸಂಗಮದೇವ.

ಬ.ಷ.ವ. 1223

ಸರಳಾರ್ಥ: ಲಿಂಗಕ್ಕೆ ಪದಾರ್ಥವ ಸಮರ್ಪಿಸಿ, ಪ್ರಸಾದವ ಕೊಂಡರೆ ಅವನು ಪ್ರಸಾದಿ. ಜಂಗಮವು ಪ್ರಸಾದ ಸ್ವೀಕಾರ ಮಾಡಿದ ನಂತರ ಸ್ವೀಕರಿಸುವುದು ಪ್ರಸಾದ. ಪ್ರಸಾದದ ಮರ್ಮವ ಸರಿಯಾಗಿ ಅರಿತುಕೊಳ್ಳಬೇಕು. ಲಿಂಗಕ್ಕೆ ಕೊಡದೆ, ಜಂಗಮಕ್ಕೆ ನೀಡದೆ ಊಟವನ್ನುಂಡರೆ ದೇವನು ಘೋರ ಶಿಕ್ಷೆಯನ್ನು ಕೊಡದೆ ಇರನು.

ವ್ಯಾಖ್ಯೆ: "ಪ್ರಸಾದ" ತತ್ತ್ವದ ವ್ಯಾಪ್ತಿ ಬಹಳ ವಿಸ್ತಾರವಾಗಿದೆ, ಆಳ ವಾಗಿದೆ. ಅದು ಕೇವಲ ಊಟಕ್ಕೆ ಸಂಬಂಧಿಸಿಲ್ಲ.

ಪದಾರ್ಥ + ಅರ್ಪಣೆ = ನೈವೇದ್ಯ
ನೈವೇದ್ಯ + ಅನುಗ್ರಹ = ಪ್ರಸಾದ

ಪೂರ್ವಾರ್ಧದಲ್ಲಿ ಭಕ್ತನು ಶರಣಾಗತ ಭಾವನೆಯಿಂದ, ನಿರ್ವಂಚನೆಯ ಬುದ್ಧಿ ಯಿಂದ ದೇವನಿಗೆ ಸಮರ್ಪಣೆ ಮಾಡುವನು. ಉತ್ತರಾರ್ಧದಲ್ಲಿ, ದೇವನ ಅನುಗ್ರಹ ದಿಂದ ಪರಿಪ್ಲುತವಾದ ಪ್ರಸಾದವಾಗಿ ಆ ದ್ರವ್ಯವು ಶರಣನಿಗೆ ಸಲ್ಲುತ್ತೆ. ಸಮರ್ಪಣೆ ಶರಣನ ಕರ್ತವ್ಯ. ಅನುಗ್ರಹಗೈವುದು ಪರಮಾತ್ಮನ ಕರ್ತವ್ಯ. ಆದ್ದರಿಂದ ದೇವನಿಗೆ ಸಮರ್ಪಿಸದೆ ಯಾವುದನ್ನಾದರೂ ಸ್ವೀಕರಿಸಿದರೆ ಅವನು ಪ್ರಸಾದಿಯಲ್ಲ. ಜೀವನವನ್ನು, ದೇಹ ಮನ ಬುದ್ಧಿ ಸಮಸ್ತ ಸಂಪದವನ್ನು ಕರುಣಿಸಿದ ಪರಮಾತ್ಮನನ್ನು ಸ್ಮರಿಸದೆ, ಕೃತಘ್ನನಾಗುವವನು ಅವಿವೇಕಿ. ದೇವನು ಸ್ವೀಕರಿಸಲಿ ಬಿಡಲಿ, ತನ್ನ ಸಮರ್ಪಣೆಯನ್ನು ಮಾತ್ರ ತಾನು ಅತ್ಯಂತ ಶ್ರದ್ಧೆಯಿಂದ ಮಾಡಲೇಬೇಕು.

Digitalized by e-Sahithya Documentation Forum
Sponsored by Sarayu Foundation Trust

ಇದು ಕೇವಲ ಊಟ, ಬಟ್ಟೆ, ಭೋಗ-ಭಾಗ್ಯಗಳ ಸಮರ್ಪಣೆ ವಿಷಯದಲ್ಲಿ ಮಾತ್ರವಲ್ಲ ಸಮಗ್ರ ಜೀವನಕ್ಕೇ ಅನ್ವಯಿಸಬೇಕು. ತನ್ನ ಬದುಕನ್ನೇ ಲಿಂಗದೇವನಿಗೆ ಆರೋಗಣೆ ಮಾಡಬೇಕು. ಬರುವ ಸುಖ-ದುಃಖ, ನೋವು ನಲಿವುಗಳನ್ನೆಲ್ಲ ಶಿವನ ಪ್ರಸಾದವೆಂದು ಸ್ವೀಕರಿಸಬೇಕು.

ಜಂಗಮದ ಆರೋಗಣೆಯೂ ಅಷ್ಟೇ ಮುಖ್ಯ. ಜಂಗಮವೆಂದರೆ 1. ಅತಿ ಮಾನವಯೋಗಿ 2. ಧರ್ಮ ಪ್ರಸಾರಕ 3. ಸಮಾಜ ಎಂಬ ಮೂರು ಅರ್ಥದಲ್ಲಿ ಬಳಸಿ ಈ ಉಕ್ತಿಯನ್ನು ಅರ್ಥೈಸೋಣ. ಯಾರು ದೇಹೇಂದ್ರಿಯ ಸುಖಗಳನ್ನು ಕಡೆಗಣಿಸಿ, ಅತಿ ಮಾನಸ ದೈವೀಪ್ರಜ್ಞೆಯನ್ನು ಇಳೆಗಿಳಿಸಲು ಹೋರಾಡುತ್ತಾರೋ, ಮಧ್ಯವರ್ತಿಗಳಾಗಿ ಇರುತ್ತಾರೋ ಅವರು ಅತಿಮಾನವರಾದ ಜಂಗಮರು ; ಜನನ-ಮರಣ-ಗಮನ ಬಾಧೆಗಳನ್ನು ಮೆಟ್ಟಿ ಮೇಲೇರಿದವರು. ಅಂಥವರಿಗೆ ಗೌರವಿಸಿ ಉಪಚರಿಸುವುದೇ ಜಂಗಮದಾಸೋಹ. ನಿಸ್ವಾರ್ಥಿಯಾಗಿ ತಾಯಿ ತಂದೆ ಬಂಧು ಬಳಗದ ಮೋಹದ ಬಂಧನವನ್ನು ಹರಿದೊಗೆದು ಧರ್ಮಜಾಗೃತಿಗಾಗಿ, ಧಾರ್ಮಿಕ ಮೌಲ್ಯಗಳ ಪ್ರಸಾರಕ್ಕಾಗಿ ತ್ಯಾಗ ಮಾಡಿ ನಿಂತವನನ್ನು ಗೌರವಿಸಬೇಕಾದುದು ಸಮಾಜದ ಆದ್ಯಕರ್ತವ್ಯ. ಆದ್ದರಿಂದ ಅಂಥವರಿಗೆ ಆರೋಗಣೆ ಮಾಡಿಸಬೇಕೆಂಬ ಪ್ರಜ್ಞೆಯು ಸಮಾಜಕ್ಕೆ ಇರಬೇಕು. ಸಮಾಜ ಸಂಘಟನೆ, ಧರ್ಮಜಾಗೃತಿಗಾಗಿ ದುಡಿಯುವ 'ಜಂಗಮ'ನಿಗೆ ತನ್ನ ವೈಯಕ್ತಿಕ ಅಂದರೆ ಹೊಟ್ಟೆ-ಬಟ್ಟೆಯ ಚಿಂತೆ ಇರುವಂತಾಗಬಾರದು.

ಮೂರನೆಯದಾಗಿ ಜಂಗಮವೆಂದರೆ ಸಮಾಜ, ಜೀವಂತ ವ್ಯಕ್ತಿಗಳ ಒಕ್ಕೂಟ. ಸಮಾಜ ಜೀವಿಯಾದ ಪ್ರತಿಯೋರ್ವ ಮಾನವನೂ ಒಂದಲ್ಲ ಒಂದು ಋಣವನ್ನು ಉಂಡು ಬೆಳೆದಿರುವ ಕಾರಣ ಅವನು ಸುತ್ತಲಿನ ಸಮಾಜದ ಹಿತರಕ್ಷಣೆಗೆ ದುಡಿಯಬೇಕು. ಅದುವೆ ಜಂಗಮಸೇವೆ.

ಹೀಗೆ ತನ್ನನ್ನು ಅರ್ಪಿಸಿ, ಲಿಂಗಪ್ರಸಾದವನ್ನು ಪಡೆಯಬೇಕು. ತನ್ನ ಸಂಪತ್ತನ್ನು ಅರ್ಪಿಸಿ ಜಂಗಮ ಪ್ರಸಾದವನ್ನು ಪಡೆಯಬೇಕು. ಅಪಾರ ಮಹಿಮ ಲೋಕರಕ್ಷಕ ಪರಮಾತ್ಮನ ಅನುಗ್ರಹದಿಂದ ಜೀವನವನ್ನೆಲ್ಲ ಪ್ರಸಾದೀಕರಿಸಬೇಕು. ಇದು ಬಿಟ್ಟು ದೇವನಿಗೆ ತನ್ನನ್ನು ಸಮರ್ಪಿಸಿಕೊಳ್ಳದೆ, ಜಂಗಮಕ್ಕಾಗಿ ಏನೂ ಸಲ್ಲಿಸದೆ ಸ್ವಾರ್ಥಿಯಾಗಿ ಬಾಳಿದರೆ ಅತ್ಯಂತ ಶಿಕ್ಷಾರ್ಹವಾದ ಪರಿಣಾಮಕ್ಕೆ ತನ್ನನ್ನು ತಾನು ಈಡುಮಾಡಿಕೊಳ್ಳುವನು.

★

ಬಸವಣ್ಣನವರು ಮತ್ತು ವಿಜ್ಞಾನ

— ಜಗದ್ಗುರು ಮಾತೆ ಮಹಾದೇವಿ

ಧರ್ಮ ಮತ್ತು ವಿಜ್ಞಾನಗಳಿಗೆ ಆಗಾಗ ಘರ್ಷಣೆಗಳು ನಡೆಯುತ್ತಲೇ ಇರುತ್ತವೆ. ತನಗೆ ಸಂಬಂಧ ಪಡದ ಕ್ಷೇತ್ರಗಳಲ್ಲಿ ಇವು ಪರಸ್ಪರ ಕಾಲಿಟ್ಟು, ಕಾದಾಡುವುದನ್ನು ನಾವು ಗಮನಿಸುತ್ತೇವೆ. ಉಭಯ ಪ್ರಪಂಚದಲ್ಲಿರುವ ಪರಿಣಿತರು ಪರಸ್ಪರ ದುರುಗುಟ್ಟಿ ಗೂಳಿ ಕಾಳಗಕ್ಕೆ ಇಳಿಯುವುದನ್ನು ಕಾಣುತ್ತೇವೆ. ಅದರಲ್ಲಿಯೂ ಕ್ರೈಸ್ತಧರ್ಮವಂತೂ ವಿಜ್ಞಾನಕ್ಕೆ ತೀವ್ರ ವಿರೋಧಿ. ವಿಚಾರವನ್ನೇ ಮಾಡಲು ಹೋಗರೆಂದೋ, ಅಥವಾ ಜನತೆಯು ಧರ್ಮಶ್ರದ್ಧೆಯನ್ನು ಕಳೆದುಕೊಂಡು ಉದಾಸೀನರಾಗುತ್ತಿರುವರೆಂದೋ, ಅಥವಾ ಭಾರತೀಯ ತತ್ತ್ವಜ್ಞಾನವು ವಿಜ್ಞಾನವಿರೋಧಿಯಲ್ಲವೆಂದೋ ಅಂತೂ ಭಾರತದಲ್ಲಿ ಇಂಥ ತಿಕ್ಕಾಟಗಳು ಅಷ್ಟಾಗಿ ಕಾಣವು. ಅಥವಾ ವಿಜ್ಞಾನದ ಯಾವ ಸಿದ್ಧಾಂತವು ಬಂದರೂ ಅದನ್ನು ಶಾಲೆಯಲ್ಲಿ ಓದಿಯೋ, ಕಲಿಸಿಯೋ ಅಲ್ಲಿಯೇ ಮರೆತುಬಿಟ್ಟು ಮನೆಯಲ್ಲಿ ಮತ್ತೆ ಯಥಾಪ್ರಕಾರ ಗ್ರಹಣ, ಜ್ಯೋತಿಷ್ಯ ಆಚರಣೆ ಮಾಡುವುದರಿಂದಲೋ ವಿಜ್ಞಾನ-ಧರ್ಮಗಳಿಗೆ ಸಾರ್ವಜನಿಕ ತಿಕ್ಕಾಟವಿಲ್ಲ. ಭೌತಶಾಸ್ತ್ರದ ಓರ್ವ ಅಧ್ಯಾಪಕ ಗ್ರಹಣದ ಬಗ್ಗೆ ಪಾಠ ಹೇಳಿ ಬಂದು, ಗ್ರಹಣದ ನಂತರ ಮನೆಯ ತೊಟ್ಟಿನೀರು ಖಾಲಿಮಾಡಿಸಿ ಹೊಸ ನೀರು ತುಂಬಿಸಿ ಸ್ನಾನ ಮಾಡುವನು. ಚಂದ್ರನ ವಿಜ್ಞಾನವನ್ನರಿತೂ ಚೌತಿ ಚಂದ್ರನನ್ನು ನೋಡಿದ ಪಾಪ ಪರಿಹಾರಾರ್ಥ ಯಾವುದಾದರೂ ಪುರಾಣ ಕಥೆ ಓದುವನು, ಕೇಳುವನು. ನವಗ್ರಹಗಳಲ್ಲಿ ಬಹುಸಂಖ್ಯಾತ ಗ್ರಹಗಳ ಗುಟ್ಟನ್ನೆಲ್ಲ ವಿಜ್ಞಾನ ಬಯಲು ಮಾಡಿದ್ದರೂ, ಎಲ್ಲೆಲ್ಲಿಯೂ ಬದುಕಿರದ ಕಾಲ್ಪನಿಕ ಗ್ರಹಗಳ ತೃಪ್ತಿಗಾಗಿ ನವಗ್ರಹ ಪೂಜೆಮಾಡಿ, ಧಾನ್ಯಗಳನ್ನು ಕಾಣ್ಕೆಕೊಡುವುದು ಇನ್ನೂ ನಡೆದೇ ಇದೆ.

ಇಂಥ ವಿಡಂಬನಾತ್ಮಕ, ಪರಸ್ಪರ ವಿರೋಧಾಭಾಸದ ಆಚರಣೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿಲ್ಲ. ವಿಜ್ಞಾನದ ಒಂದು ಸತ್ಯವು ಪ್ರಕಾಶಕ್ಕೆ ಬರುತ್ತಲೇ ಜನರು ಅದನ್ನು ನಂಬುತ್ತಾರೆ, ಆಚರಿಸುತ್ತಾರೆ. ಹಿಂದಿನದನ್ನು ಬಿಡುತ್ತಾರೆ. ಈ ಪ್ರವೃತ್ತಿಯಿಂದಾಗಿ ವಿಜ್ಞಾನವು ಕೇವಲ ಸೌಲಭ್ಯಗಳ ದೃಷ್ಟಿಯಿಂದ ಮಾತ್ರವಲ್ಲದೆ, ಧಾರ್ಮಿಕ ಚಿಂತನೆಯ ದೃಷ್ಟಿಯಿಂದಲೂ ಜೀವನದ ಮೇಲೆ ಅತುಳ ಪ್ರಭಾವವನ್ನು ಬೀರುವ ತತ್ತ್ವ.

Digitalized by e-Sahithya Documentation Forum
Sponsored by Sarayu Foundation Trust

ಬೈಬಲ್ ಜೀಯೋಸೆಂಟ್ರಿಕ್ ಸಿದ್ಧಾಂತವನ್ನು ಹೇಳಿತು. ಪೃಥ್ವಿಯು ಸ್ಥಿರವಾಗಿದೆ; ಸೂರ್ಯ ಮತ್ತು ಸೌರಮಂಡಲಗಳೇ ಸುತ್ತುತ್ತವೆ ಎಂಬ ಬೈಬಲ್ ನಂಬುಗೆಯನ್ನು ಕೋಪರ್‌ನಿಕಸ್, ಗೆಲಿಲಿಯೋ ಅಲ್ಲಗಳೆಯುತ್ತಲೇ ಅಲ್ಲೋಲ ಕಲ್ಲೋಲವಾಯಿತು. ವಿಜ್ಞಾನಿಗಳಿಗೆ ಚಿತ್ರಹಿಂಸೆ ನೀಡಲಾಯಿತು. ಚಾರ್ಲ್ಸ್ ಡಾರ್ವಿನ್ನನ ವಿಕಾಸವಾದವು ಬೆಳಕಿಗೆ ಬರುತ್ತಿದ್ದಂತೆಯೇ 'ಅಮೀಬಾದಿಂದ ಜೀವವಿಕಾಸದಾರಂಭ, ಜಡದಿಂದ ಜೀವ, ಮಂಗನಿಂದ ಮಾನವ' ಎಂಬ ವಿಚಾರಗಳನ್ನು ಕೇಳುತ್ತಲೇ ಚರ್ಚುಗಳು, ಪಾದ್ರಿಗಳು ರೊಚ್ಚಿಗೆದ್ದರು. ಇತ್ತೀಚೆಗೆ ಶಾಲೆ-ಕಾಲೇಜುಗಳ ಪಠ್ಯಪುಸ್ತಕಗಳಲ್ಲಿ ಡಾರ್ವಿನ್ನನ ವಿಕಾಸವಾದವನ್ನು ಕಡಿಮೆಮಾಡುತ್ತ ಬೈಬಲ್ಲಿನ ಸೃಷ್ಟಿವಾದವನ್ನೇ ಎತ್ತಿಹಿಡಿಯುವ ವಿಚಾರಗಳನ್ನು ಕೊಡುತ್ತಿದ್ದಾರೆಂಬ ಬಗ್ಗೆ ಒಂದು ಲೇಖನವನ್ನು ಓದಿದೆ. ಈ ದೃಷ್ಟಿಯಿಂದ ವಿಜ್ಞಾನ-ಧರ್ಮಗಳ ಬಗ್ಗೆ ಬಸವಣ್ಣನವರ ವಿಚಾರಧಾರೆ ಏನೆಂಬುದರ ಬಗ್ಗೆ ಬರೆಯಲಿಚ್ಛಿಸಿರುವೆ.

ವಿಜ್ಞಾನ-ತತ್ತ್ವಜ್ಞಾನ-ಧರ್ಮಗಳಿಗೆ ತಿಕ್ಕಾಟ ಬರದಂತಹ ಅತ್ಯಂತ ಸರಳ ಸೂತ್ರ ಬಸವಣ್ಣನವರದು ಎಂದರೆ ಶಾಸ್ತ್ರಪ್ರಮಾಣವನ್ನು ತೀವ್ರವಾಗಿ ನಂಬದೆ, ಅನುಭವ ಪ್ರಮಾಣವನ್ನು ಅಧಿಕೃತವೆಂದು ಇಟ್ಟುಕೊಳ್ಳುವುದು. ಬೈಬಲ್ ಇರಲಿ, ಖುರಾನ್ ಇರಲಿ, ವೇದಗಳೇ ಇರಲಿ ಏಕೆ ಶಾಸ್ತ್ರಗಳನ್ನು ಅಕ್ಷರಮಟ್ಟಿಗೆ ಆಧಾರವಾಗಿ ಹಿಡಿಯಬೇಕು? "ಮುಚ್ಚಿದ್ದ ದೇವಾಲಯದ ಬಾಗಿಲು ದೇವಾಲಯ ಪ್ರವೇಶದಿಂದ ವಂಚಿಸಲ್ಪಟ್ಟ ಬೇಡನಿಗೆ ತೆರೆಯುವಾಗ ಎಲ್ಲಿದ್ದವು ನಿಮ್ಮ ವೇದಶಾಸ್ತ್ರ ಪುರಾಣಗಳು? ಎಲ್ಲ ಜಾತಿಯವರೂ ದೈವಾನುಗ್ರಹಕ್ಕೆ ಪಾತ್ರರಲ್ಲ ಎಂದು ವೇದಾಗಮಗಳು ಹೇಳುವಾಗ ಮಾದಾರ ಚೆನ್ನಯ್ಯ, ವಾಲ್ಮೀಕಿಯಂತಹವರು ದೈವಾನುಗ್ರಹ ಪಡೆದು ಔನ್ನತ್ಯ ಸಾಧಿಸಿದರಲ್ಲ; ಆಗ ಎಲ್ಲಿ ಹೋಗಿದ್ದವು ನಿಮ್ಮ ಶೃತಿ ಸ್ಮೃತಿಗಳು? ಅಂಗೈಯಲ್ಲಿ ಸ್ಪಷ್ಟವಾಗಿ ತೋರುವ ವಸ್ತುವನ್ನು ಕನ್ನಡಿಯ ಮುಖಾಂತರ ಏಕೆ ನೋಡಬೇಕು? ಅನುಭವ ಜ್ಞಾನದಿಂದ ಸಿದ್ಧಪಡಿಸಬಹುದಾದ ಒಂದು ತತ್ತ್ವಕ್ಕೆ ಧರ್ಮಶಾಸ್ತ್ರದ ನೆರವೇಕೆಬೇಕು?" ಈ ವಿಚಾರಧಾರೆಯಿಂದ ಬಸವಣ್ಣನವರು ಶಾಸ್ತ್ರದ ದಾಸ್ಯಕ್ಕೆ ಒಳಗಾದ ಬುದ್ಧಿಯನ್ನು ಸ್ವತಂತ್ರಗೊಳಿಸಿದರು. ವಿಜ್ಞಾನವು ಸ್ವತಂತ್ರವಾಗಿ ಸಾಗಿ ಸತ್ಯಾನ್ವೇಷಣೆ ಮಾಡಲು ರಾಜಮಾರ್ಗ ಹಾಕಿಕೊಟ್ಟರು.

ಇನ್ನು ಸೃಷ್ಟಿಯ ವಾದಕ್ಕೆ ಬರೋಣ. ಕ್ರೈಸ್ತ ಶಾಸ್ತ್ರದ ಪ್ರಕಾರ ದೇವರು ಜಗತ್ತನ್ನು ಸೃಷ್ಟಿವಮಾಡಿದ, ಕುಂಬಾರನು ಗಡಿಗೆಯನ್ನು ಸೃಷ್ಟಿಸಿದಂತೆ ಮಾಡಿ ಈ ಜಗತ್ತನ್ನಿಟ್ಟ; ಇದರಲ್ಲಿ ಗೊಂಬೆಗಳಂತೆ ಸೃಷ್ಟಿಮಾಡಿದ ಆಡಮ್ ಮತ್ತು ಈವಳನ್ನು

ಇಟ್ಟು ಮುಂದಿನ ಪ್ರಜೋತ್ಪತ್ತಿಗೆ ಕಾರಣನಾದ. ಆಕಾಶಮಂಡಲ, ಪಂಚಭೂತ, ಸಕಲ ಸಚರಾಚರ ಸೃಷ್ಟಿಯೆಲ್ಲ ಆರು ದಿನಗಳಲ್ಲಿ ಆಗಿ ಬಿಟ್ಟಿತು. ಹೀಗೆ ಆರು ದಿನಗಳಲ್ಲಿ ಸೃಷ್ಟಿಯಾದ ಕಾರಣ, ಮತ್ತು ದೇವರೇ ಎಲ್ಲ ಪೂರ್ಣಸಿದ್ಧ (Ready made) ಗೊಂಡ ವಸ್ತುಗಳನ್ನು ಇಟ್ಟಕಾರಣ, 'ವಿಕಾಸವಾದ ವಿಜ್ಞಾನಿಗಳ ಊಹಾಪೋಹ, ಕಟ್ಟುಕಥೆಯಲ್ಲದೆ ಬೇರಲ್ಲ' ಎಂಬುದೇ ಸೃಷ್ಟಿವಾದಿಗಳ ನಿಲುವು. ಹರೇರಾಮ ಹರೇಕೃಷ್ಣ ಪಂಥದ ಪ್ರಭುಪಾದರು ಬರೆದ Life from Life ಎಂಬ ಗ್ರಂಥದ ನಾಲ್ಕಾರು ಪುಟಗಳನ್ನು ಅಮೆರಿಕಾದಲ್ಲಿದ್ದಾಗ ನಾನು ಅವಲೋಕಿಸಿದೆ. ಚೈತನ್ಯದಿಂದ ಚೈತನ್ಯ, ಜೀವದಿಂದ ಜೀವ ಎಂಬ ಸಿದ್ಧಾಂತವನ್ನು ಪ್ರತಿಪಾದಿಸಲು ಅವರು ಏನೊಂದೂ ಮಂಡಿಸದೆ ವಿಜ್ಞಾನಿಗಳನ್ನು ಸ್ಕ್ಯಾಂಡ್ರಿಲ್ಸ್, ಫೂಲ್ಸ್, ರ್‍ಯಾಸ್ಕಲ್ಸ್, ಚೀಟರ್ಸ್ ಎಂದು ಬೈದಿದ್ದರು. ಗ್ರಂಥದ ಬಗ್ಗೆ ನನಗೆ ಜಿಗುಪ್ಸೆ ಬಂದುದೇ ಅಲ್ಲದೆ, ಅಮೆರಿಕಾದಂತಹ ದೇಶದಲ್ಲೂ ಇಂಥ ಪುಸ್ತಕಗಳು ಪ್ರಕಟಗೊಳ್ಳುತ್ತವೆಯೆ? ವಿಜ್ಞಾನಿಗಳು ಇಂಥ ಅವ್ಯಾಚ್ಯ ಶಬ್ದದ ಬೈಗುಳ ಸಹಿಸಿಕೊಂಡು ಸುಮ್ಮನಿದ್ದಾರೆಯೆ? ಎಂದು ಅಚ್ಚರಿಯಾಯಿತು. ಬೈದ ಮಾತ್ರಕ್ಕೆ ಬೌದ್ಧಿಕವಾದ ಮಾಡಿದಂತಲ್ಲ. ಜಟ್ಟಿಗಳು ಕಾಳಗಕ್ಕೆ ಇಳಿದಾಗ ಸೋಲುವವನು ಕೈ ಮೇಲಾದವನನ್ನು ಕಚ್ಚಲು, ಬೈಯಲು ತೊಡಗಿದರೆ ಅದು ಸೋಲಿನ ಸಂಕೇತವಾದಂತೆ ಧಾರ್ಮಿಕರು ವಿಜ್ಞಾನಿಗಳನ್ನು, ಅಜ್ಞೇಯವಾದಿಗಳನ್ನು, ವಿಚಾರವಾದಿಗಳನ್ನು ಬೈಯಲಾರಂಭಿಸಿದರೆ ಅದು ಸೋಲಿನ ಸಂಕೇತವೆಂದು ಭಾವಿಸಬೇಕಾದೀತು. ಅದರ ಬದಲಿಗೆ ಅವರ ಸಮಸ್ಯೆ-ಸಂದೇಹಗಳನ್ನು ವಿಶ್ಲೇಷಿಸಬೇಕು; ಉತ್ತರಿಸಲು ಯತ್ನಿಸಬೇಕು. ಅನುಭವಕ್ಕೆ ಬಂದುದನ್ನೆಲ್ಲ ಭಾಷೆಯ ಮೂಲಕ ಬರೆಯಲು ಹೇಳಲು ಬರದಿರಬಹುದು; ಧರ್ಮವು ಅನುಭವ ಕ್ಷೇತ್ರದ ಸಾರ್ವಭೌಮ. ಅನುಭವಕ್ಕೆ ವಿವರಣೆ ಹೇಳಲು ಬರದಿದ್ದರಷ್ಟೇ. ಹೇಳುವ ಪ್ರಾಮಾಣಿಕ ಪ್ರಯತ್ನ ಮಾಡಿದರೇನು ತಪ್ಪು?

ಬಸವಣ್ಣನವರು ವೈಜ್ಞಾನಿಕ ದೃಷ್ಟಿಕೋನಕ್ಕೆ ಯಾವ ರೀತಿಯ ಪ್ರತಿಕ್ರಿಯೆ ತೋರಿಸುವರು? ಡಾರ್ವಿನ್ನನ ವಿಕಾಸವಾದಕ್ಕೆ ಅವರು ವಿರುದ್ಧವೆ? ಅಧ್ಯಾತ್ಮವಾದಿಗಳೆಲ್ಲ ಚಿತ್‌ಪ್ರಧಾನವಾದಿಗಳು (Idealists). ಅವರ ವಾದದ ಪ್ರಕಾರ ಆದಿತತ್ತ್ವವು First cause ಚೈತನ್ಯಾತ್ಮಕವು, ಜಡವಲ್ಲ. ಚೇತನದಿಂದಲೇ ಜಡಾಜಡದ ಸೃಷ್ಟಿ ಎಂಬುದವರ ನಂಬಿಗೆ. ಭೌತಿಕವಾದಿಗಳು ಜಡದಿಂದ ಚೇತನದ, ಜೀವದ ಸೃಷ್ಟಿ ಎಂದೊಪ್ಪುವರು. ಬಸವ ಧರ್ಮವು ಚಿತ್‌ಪ್ರಧಾನವನ್ನು ಒಪ್ಪುತ್ತದೆ. ಪ್ರಭುದೇವರು ಹೇಳುವಂತೆ :

Digitalized by e-Sahithya Documentation Forum
Sponsored by Sarayu Foundation Trust

ಮರದೊಳಗಣ ಪತ್ರ ಫಲಂಗಳು
ಮರಕಾಲವಶದಲ್ಲಿ ತೋರುವಂತೆ
ಹರನೊಳಗಣ ಲೀಲಾ ಪ್ರಕೃತಿ ಸ್ವಭಾವಂಗಳು
ಹರಲೀಲಾವಶದಲ್ಲಿ ತೋರುವವು.
ಲೀಲೆಯಾದೊಡುಮಾಪತಿ ಲೀಲೆ ತಪ್ಪಿದಡೆ ಸ್ವಯಂಭು
ಗುಹೇಶ್ವರನು.

ಸತ್‌ಚಿತ್ ಆನಂದ ಸ್ವರೂಪನಾದ ಚೈತನ್ಯಾತ್ಮಕ ಪರಮಾತ್ಮನೇ ಈ ಜಗದ ಆದಿ ಕಾರಣ. "ಆದಿ ಅನಾದಿಗಳಿಲ್ಲದಂದು, ಸದಾಶಿವನಿಲ್ಲದಂದು ಶಿವನಿಲ್ಲದಂದು, ಏನೆಂಬುದೇನು ತಾನಿಲ್ಲದಂದು, ಕೂಡಲ ಸಂಗಯ್ಯ ತನ್ನ ತಾನೇನೆಂದು ಅರಿಯನಂದು."

ಜಡಜಗತ್ತು (Inorganic) ಸೃಷ್ಟಿಯಾದುದನ್ನು ಆರಂಭ, ಆದಿ ಎಂದು ಲೆಕ್ಕಮಾಡುವ ಅನುಭಾವಿಗಳು ಅದರ ಹಿಂದಿನ ಕಾಲಮಾನವನ್ನೆಲ್ಲ ಅನಾದಿ ಎಂದು ಕಾಲಾತೀತವಾಗಿ ಕರೆಯುತ್ತಾರೆ. ಈ ಸೃಷ್ಟಿ ರೂಪುಗೊಳ್ಳುವ ಪೂರ್ವದಲ್ಲಿಯೇ ಇದ್ದ ಪರಮಾತ್ಮ ತತ್ತ್ವ ತನ್ನ ಅರಿವೂ (Self-Awareness) ಇಲ್ಲದೆ ಅನಂತ ಕಾಲ ಇದ್ದಿತ್ತು. ಅದರಲ್ಲಿ ಒಂದಾನೊಂದು ದಿನ, ಸ್ಫುರಣ, ಸ್ಪಂದನವಾಗಿ ಜಗತ್ತನ್ನು ಸೃಷ್ಟಿಮಾಡುವ ಆಕಾಂಕ್ಷೆ ವ್ಯೆದಳೆಯಿತು. ಆದರಂತೆ ಪರಮಾತ್ಮನು ಸಂಕಲ್ಪಿಸಿದ. ಅವನಲ್ಲಿಯೇ ಇದ್ದ ಸೃಷ್ಟಿ ಶಕ್ತಿ ವಿಕಾಸಗೊಂಡು ಹಂತ ಹಂತವಾಗಿ ಇಳಿದು ಬಂದು ಸಚರಾಚರ ಜಗತ್ತಾಯಿತು.

ಬಯಲು ಮೊಳಗಿ ಮಳೆ ಸೃಜಿಸಿ
ಆ ಬಯಲು ಆ ಮಳೆಯ ನೊಡಗೂಡಿ
ದೃಷ್ಟವಪ್ಪ ವಾರಿಕಲ್ಲಾಗಿ ತೋರಿದಂತೆ
ನಿನ್ನ ನೆನಹೇ ನಿನಗೆ ಶಕ್ತಿಯಾಯಿತ್ತಲ್ಲಾ ;
ಆ ನಿಮ್ಮಿಬ್ಬರ ಸಮರತಿಯೇ ನಿಮಗೆ
ಅಖಂಡವೆಂಬ ನಾಮ ಸೂಚನೆಯಾಯಿತ್ತಲ್ಲಾ
ಮಹಾಲಿಂಗ ಕಲ್ಲೇಶ್ವರ, ನಿಮ್ಮ ಆದಿಗೆ ಇದೇ ಪ್ರಥಮವಾಯಿತ್ತಯ್ಯಾ

ಪರಮಾತ್ಮನ ನೆನಹು, ಸಂಕಲ್ಪಗಳು ಗಟ್ಟಿಗೊಂಡಾಗ ಸೃಷ್ಟಿಗೆ ಬೀಜ ಬಿದ್ದುದು. ಆಗ ಆತ್ಮರುಗಳ ಉದಯ, ಆತ್ಮದಿಂದ ಆಕಾಶ, ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ಅಪ್ಪು, ಅಪ್ಪುವಿನಿಂದ ಪೃಥ್ವಿ. ಈ ಪಂಚಭೂತಗಳಿಂದ ಜೀವಸೃಷ್ಟಿ. ಪಂಚಭೂತಗಳು ಹಂತ ಹಂತವಾಗಿ ಆದವು. ಎಲ್ಲೆಡೆಯಲ್ಲೂ ತುಂಬಿ

ತುಳುಕುತ್ತಿದ್ದ ಪರಮಾತ್ಮ ತತ್ತ್ವವು ಪಂಚಭೂತಾತ್ಮಕ ಶರೀರಗಳಲ್ಲಿ ತುಂಬಿ ಜೀವವಾಯಿತು ಎಂಬುದು 36 ತತ್ವಗಳ ರಹಸ್ಯ.

ಬದುಕಿಗೆ ಬೇಕಾದ ಪಂಚಭೂತಗಳ ದೇಹದಲ್ಲಿ ಜೀವವು ಹಂತ ಹಂತವಾಗಿ 84 ಲಕ್ಷ ಜೀವರಾಶಿಯ ಮುಖಾಂತರ ವಿಕಾಸಹೊಂದುತ್ತ, ಮನುಜ ದೇಹದಲ್ಲಿ ನೈಸರ್ಗಿಕ ಪರಿಪೂರ್ಣತೆ ಹೊಂದುತ್ತದೆ. ಈ ವಿಕಾಸ ಒಂದೇ ದಿನ, ಒಂದೇ ಗಂಟೆಯಲ್ಲಿ ಆದುದಲ್ಲ. ಅನಂತ ಕಾಲದಲ್ಲಿ ಆದುದು. ರೂಪಾಂತರ ಹೊಂದುತ್ತ ವಿಕಾಸಗೊಂಡ ಜೀವರಾಶಿಯ ಕೇಂದ್ರಚೇತನ ಚೈತನ್ಯಮಯ ದೇವರು. ಅವನ ನೆನಹು (will) ಎಂಬ ದೂರನಿಯಂತ್ರಣ (Remote control) ದಿಂದಲೇ ಈ ಸೃಷ್ಟಿಯಲ್ಲಿ ವಿಕಾಸಕ್ರಿಯೆ ನಡೆಯುತ್ತಿದೆ. ನಮ್ಮ ಕಣ್ಣೆದುರಿಗೆ, ಅಥವಾ ವಿಜ್ಞಾನಿಗಳ ದೃಷ್ಟಿಯಲ್ಲಿ ದೇಹ, ಮನ, ಬುದ್ಧಿ, ಇಂದ್ರಿಯಗಳು ವಿಕಾಸಗೊಂಡಂತೆ ಕಂಡರೂ ಈ ವಿಕಾಸ ಕ್ರಿಯೆಯ ಆಂತರಿಕ ಶಕ್ತಿ ಆತ್ಮವೇ !

ಕೀಟಕ ಸೂತ್ರದ ನೂಲ ಗೂಡಮಾಡಿ ಸುತ್ತಿರ್ಪಲ್ಲಿ
ಸೂತ್ರಕ್ಕೆ ನೂಲನು ಅದೆಲ್ಲಿಂದ ತಂದಿತ್ತಯ್ಯ ?
ರಾಟೆಯಿಲ್ಲ ಅದಕ್ಕೆ; ಹಂಜಿ ಮುನ್ನವೇ ಇಲ್ಲ. ನೂತವರಾರೋ ?
ತನ್ನೊಡಲ ನೂಲ ತೆಗೆದು ಪಸರಿಸಿ, ಅದರೊಳು ಪ್ರೀತಿಯಿಂದೊಲಿದಾಡಿ
ತುದಿಯಲ್ಲಿ ತನ್ನೊಳಗದ ಮಡಗಿಕೊಂಡಿಪ್ಪಂತೆ
ತನ್ನಿಂದಾದ ಜಗವ ತನ್ನೊಳಗೈದಿಸಿಕೊಳ್ಳಬಲ್ಲ
ನಮ್ಮ ಕೂಡಲ ಸಂಗಮ ದೇವರು.

ಜೇಡರ ಹುಳುವೊಂದು ತಾನದಕ್ಕೆ ನಿಮಿತ್ಯ ಕಾರಣವಾಗಿ ತನ್ನೊಳಗಿರುವ ಜೊಲ್ಲು ಸರವನ್ನೇ ಹೊರತೆಗೆದು ಉಪಾದಾನ ಕಾರಣವಾಗಿ ಮಾಡಿ, ಬಲೆಯಾಗಿ ಹೆಣೆದು, ಅಭಿನ್ನ ನಿಮಿತ್ತೋಪಾದಾನ ಕಾರಣವಾಗುವಂತೆ, ಪರಮಾತ್ಮನು ತನ್ನಂತರ್ಗತ ಶಕ್ತಿಯಿಂದಲೇ ಜಡಜಗತ್ತನ್ನು ಸೃಷ್ಟಿಸಿ ಅದರಲ್ಲಿ ತನ್ನ ಚೇತನವನ್ನು ತುಂಬಿ ಜೀವರಾಶಿಗಳನ್ನು ನಿರ್ಮಾಣಮಾಡುವನು. ಈ ಜೀವರಾಶಿಯ ನಿರ್ಮಾಣ ವಿಕಾಸಾತ್ಮಕವಾಗಿ ಆಗಿದೆ, ಧಿಡೀರನೆ ಆದುದಲ್ಲ. ಮೂಲಕಾರಣನಾದ ಪರಮಾತ್ಮನು ಚೈತನ್ಯಾತ್ಮಕನು. ಅವನು ಚೇತನಾತ್ಮಕ ಜೀವರುಗಳಿಗೆ, ಜಡವಾದ ಜಗತ್ತಿಗೆ ಉಭಯಕ್ಕೂ ಕಾರಣನಾಗಿದ್ದಾನೆ. ಹೀಗೆ ಪೃಥ್ವಿಜಲ ಅಗ್ನಿವಾಯು ಆಕಾಶಗಳೆಂಬ ಪಂಚಭೂತಗಳಿಂದ ಜೀವವು (Life) ನಿರ್ಮಾಣವಾಯಿತೆಂದು, ಅಲ್ಲಿಂದ ಜೀವವು ಬಹುವಿಧ ಮಾರ್ಪಾಡು ಹೊಂದಿ ಔನ್ನತ್ಯ ಸಾಧಿಸಿತೆಂದು ವಿಕಾಸವಾದಿಗಳು ಹೇಳಿದರೆ

Digitalized by e-Sahithya Documentation Forum
Sponsored by Sarayu Foundation Trust

ವಿಜ್ಞಾನವು ಈ ಜಗತ್ತಿನ ಇತಿಹಾಸವನ್ನು ಪಂಚಭೂತಗಳಿಂದ ಗುರುತಿಸುತ್ತದೆ. ಆದರೆ ಈ ಪಂಚಭೂತಗಳ ಸೃಷ್ಟಿಗೆ ಹಿನ್ನೆಲೆಯಾಗಿ ಚೇತನಾತ್ಮಕ ದೈವೀಶಕ್ತಿ ಕೆಲಸಮಾಡುತ್ತದೆ ಎಂದು ಅಧ್ಯಾತ್ಮವಾದಿಗಳು ಹೇಳುತ್ತಾರೆ. ಹೀಗೆ 36 ತತ್ತ್ವಗಳನ್ನು ಗುರುತಿಸುವ ಶಕ್ತಿ ವಿಶಿಷ್ಟಾದ್ವೈತ ಮತ್ತು ಬಸವಣ್ಣನವರ ವಿಚಾರಧಾರೆ ವಿಕಾಸವಾದಕ್ಕೆ ಪುಷ್ಟಿ ನೀಡುತ್ತದೆ; ಆದಿಕಾರಣನಾದ ಪರಮಾತ್ಮನು ಚೈತನ್ಯಾತ್ಮಕ ಎಂದು ಪ್ರತಿಪಾದಿಸುತ್ತದೆ.

★

Basava's Heir

I do not know what to speak of you'
My words always seems to be with some due.
The reason is quite clear for this-
Its because you are no ordinary-but you're HIS.
You have been chosen among all men,
To continue writing in Basava's pen
For years this has been accepted as a fact ;
And so, you are respected by men with tact.
To continue Basava's path requires great determination ;
And every bit and speck of it is found in your action !
Of course, this is a fact with no exaggeration !
And this I'm telling after great observation.
The accident which occured on the 30th May,
A narrow escape that you had on that day :
Proove's that Almighty's Grace on you will stay
And keep you hale and hearty and healthy and gay,

FOR EVER N-EVER.

Vani R.
X Std.

ಬಾಳ ದೀವಿಗೆ

ಗಾವಿಲ

ಇಲ್ಲಿ ನೋಡಿ; ನನ್ನ ಹೃದಯ ಕಳೆದ ಕಾಲು ಶತಕದಿಂದ ಅವ್ಯಾಹತವಾಗಿ ಬಡಿದುಕೊಳ್ಳುತ್ತಿದೆ; ಒಂದು ಕ್ಷಣವೂ ಬಿಡದೆ ರಕ್ತವನ್ನು ಎಲ್ಲ ಪೇಶಿಗಳಿಗೆ ಮುಟ್ಟುವಷ್ಟು ವೇಗದಿಂದ ಬಡಿಯುತ್ತಿದೆ. ಅದರ ಶಕ್ತಿ, ಏನೋ ಅದ್ಭುತ. ಆದರೆ ಅದನ್ನು ನಾನು ನಂಬಿಕೊಂಡಿರಲೆ? ನಂಬಿದರೆ ಅದೊಂದು ಹುಚ್ಚು. ಇಂದು ಮಿಟುಕುವ ಹೃದಯ ಒಂದು ದಿನ ನಾನು ಬಯಸಲಿ ಬಯಸದಿರಲಿ ತನ್ನಿಂದ ತಾನೆ ನಿಂತು ಬಿಡುವುದು. ನಿಸರ್ಗವೇ ಬಯಸುವಾಗ ನಾನೇನು ಮಾಡಬಲ್ಲೆ?

ಕಾಲವೆನ್ನುವುದು ನಿಸರ್ಗದುಸಿರು. ಎಲ್ಲ ವಸ್ತುಗಳೂ ಆ ಕಾಲದ ಬಿಗಿಯಾದ ಹಿಡಿತಕ್ಕೆ ಸಿಲುಕಿವೆ. ಈ ಕಾಲ ಹಿಡಿತಕ್ಕೆಯೇ ಕಾಲ ಪರಿಮಿತಿ ಎಂದು ಹೆಸರು. ನಮ್ಮ ಕಣ್ಣು ಏನನ್ನೇ ನೋಡಲಿ, ನಮ್ಮ ಮನ ಏನೇನೇ ನೆನೆಯಲಿ; ಅದೆಲ್ಲ ಕಾಲದಿಂದ ಪರಿಮಿತವಾಗಿದೆ. ನಮಗೆ ಭಾಸವಾಗುವ ಸ್ಥಿರತೆ ಮಾತ್ರ ಕೇವಲ ಭ್ರಮಾತ್ಮಕ ಹಾಗು ಸಾಪೇಕ್ಷಕ. ಈ ಸೃಷ್ಟಿ ನಿಯತಿಯನ್ನು ನಾವು ಭದ್ರವಾಗಿ ಅರಿತಿರಬೇಕು. ನನ್ನ ದೇಹವಿದು ಒಂದು ದಿನ ಉರುಳಿಯೇ ಉರುಳುವುದು. ಈ ಮತಿ ದೃಢವಾಗಿದ್ದರೆ ನಾನು ಹೆಚ್ಚಿಗೇನನೂ ಬಯಸಲಾರೆ; ಬಯಕೆಯೇ ಇಲ್ಲವಾದಾಗ ದುಃಖವಿನ್ನೆಲ್ಲಿ? ಬಯಕೆ; ಅದೂ ಮಿತಿಮೀರಿದ ಬಯಕೆ ದುಃಖಕ್ಕೆ ಕಾರಣ.

ಒಂದು ಸುಂದರವಾದ ನಗರ. ಈಗಿನಂತೆ ವಾಹನಗಳ ಓಡಾಟವಿಲ್ಲ; ಎಲ್ಲೆಡೆಗೂ ಶಾಂತಿ ತುಂಬಿತ್ತು. ಮನೆಗಳೋ ಅಷ್ಟೈತ್ತರವಲ್ಲ. ಜನರು ಸುಖಿಗಳು. ಉಣಲು, ಉಡಲು ಕೊರತೆ ಇರಲಿಲ್ಲ. ಅದರಲ್ಲಿ ಒಬ್ಬ ಮಹಾ ವ್ಯಾಪಾರಿ ವಾಸಿಸಿದ್ದ. ಅವನಿಗೆ ಲಕ್ಷ್ಮಿ ಒಲಿದಿದ್ದಳು. ಅವನಿಗೆ ನಾಲ್ಕು ಜನ ಮಕ್ಕಳು ಸಿರಿಯ ಮಡಿಲಲ್ಲಿಯೇ ಬೆಳೆದು ದೊಡ್ಡವರಾದರು. ಒಂದು ದಿನ ತಂದೆ ತೀರಿಹೋದ.

ಈ ನಾಲ್ಕು ಜನ ಮಕ್ಕಳು ಕೆಲ ವರುಷ ಸಿರಿಯ ದರ್ಪದಿಂದಲೇ ಬಾಳಿದರು. ರೊಕ್ಕ ಇದೆ ಎಂದಾಗ ಕೇಳಬೇಕೆ? ಯಾರಾರೋ, ಎಂತೆಂಥವರೋ ಸಂಬಂಧಿಕರಾಗಿ ಬಂದರು; ನಾಲ್ವರನ್ನೂ ಬಿಡದೆ ಹೊಗಳಿದರು, ಅವರಲ್ಲಿ ಸಿರಿವಂತಿಕೆಯ ಅಹಂ ಬಂತು.

Digitalized by e-Sahithya Documentation Forum
Sponsored by Sarayu Foundation Trust

ದುಡಿತ ಮರೆತು ನೂರಾರು ಮಿತ್ರರೊಂದಿಗೆ ಕುಡಿದು ನಲಿದರು. ರೊಕ್ಕ ನೀರಿನಂತೆ ಹರಿದು ಹೊರ ಹೋಯಿತು. ವ್ಯಾಪಾರ ಆಳುಗಳ ಮೇಲೆ ಎಷ್ಟು ದಿನ ನಡೆದೀತು ? ಅದೂ ಕೊನೆಗೊಂಡಿತು. ಶೇಖರಿತ ಹಣವೂ ಹೋಯಿತು. ದೂರದಿಂದಲೇ ಬಡತನದ ಬರವ ಕಂಡ ಮಿತ್ರರು ನಾಲ್ವರು ಬಂಧುಗಳನ್ನು ತ್ಯಜಿಸಿದರು.

ಆ ಬಂಧುಗಳೀಗ ವಾಸ್ತವ ಲೋಕಕ್ಕೆ ಬಂದರು ; ಎಲ್ಲವೂ ಒಂದು ಕನಸಿನಂತೆ ನಡೆದು ಹೋಯ್ತು. ಬಡತನದ ಭೂತದ ವಿಕಾರ ಮುಷ್ಟಿಯಲ್ಲಿ ತಾವಿದ್ದುದನ್ನು ನೆನೆದ ಅವರು ಗಡಗಡನೆ ನಡುಗಿದರು. ರಾಜರಾಗಿ ಮೆರೆದ ಮನೆ ಭೂತಾವಾಸವೆನಿಸಿತು ; ಬಂಧು ಬಾಂಧವರು ವೈರಿಗಳಾಗಿ ಕಂಡರು ; ಮನೆಯ ಹೊರಗೆ ಕಾಲಿಟ್ಟರೆ ಅಪಮಾನ, ಅಪವಾದ, ನಿಂದೆ ಅವರಿಗಾಗಿ ಕಾದಿದ್ದವು.

ನಾಲ್ವರೂ ಒಂದು ದಿನ ರಾತ್ರಿ ಕತ್ತಲಲ್ಲಿ ಕುಳಿತು ಚಿಂತಿಸಿದರು – "ಅಯ್ಯೋ, ನಮ್ಮ ಜೀವನ ಏನಾಯಿತು ! ನಮ್ಮ ಬಡತನಕ್ಕೆ ಧಿಕ್ಕಾರವಿರಲಿ. ರಾಜರಾಗಿ ಬದುಕಿದ ಈ ಜನರ ಮಧ್ಯೆ ಈಗ ಕಾಸಿಗೂ ಕೈಯೊಡ್ಡಿ ಬದುಕಬೇಕೆ ? ಎಂಥ ನಿಕೃಷ್ಟವಾಯಿತಲ್ಲ ನಮ್ಮ ಬಾಳು ! ಬೇಡ, ಧನ ಹೀನರಾಗಿ ಇಲ್ಲಿರುವುದಕ್ಕಿಂತ ಅರಣ್ಯ ಸೇರುವುದೇ ಮೇಲು. ಭಯಂಕರ ವ್ಯಾಘ್ರಗಳು ನಮ್ಮ ಎದೆಯ ಬಿರಿದು ರಕ್ತವೀಂಟಿದರೂ ಸೈ ; ನಿರ್ಜನವಾದ ಭಯಾನಕ ಅಟವಿಯಾದರೂ ಸೈ ; ಈ ದೀನ ಬಾಳು ಮಾತ್ರ ನಮಗೆ ಬೇಡ.

"ನಮ್ಮ ಗತಿಯನ್ನೇ ನೋಡಿ ; ಏನಾಗಿದೆ? ನಮ್ಮ ಮಿತ್ರನಾಗಿದ್ದ ರಾಜ ಇಂದು ನಮ್ಮನ್ನು ಮನವಾರೆ ದ್ವೇಷಿಸುತ್ತಾನೆ ; ನಾವು ನಂಬಿಕೊಂಡಿದ್ದ ಮಿತ್ರರು ಕೈಕೊಟ್ಟಿದ್ದಾರೆ ; ನಮ್ಮ ಮಕ್ಕಳೇ ನಮ್ಮನ್ನು ತ್ಯಜಿಸಿದ್ದಾರೆ ; ಅಯ್ಯೋ, ನಮ್ಮ ಹೆಂಡಿರನ್ನು ನಾವದೆಷ್ಟು ಮೆಚ್ಚಿದೆವು ! ಅವರು ಮಾತ್ರ ರಕ್ಕಸಿಗಳಂತೆ ನಮ್ಮ ಧನಹೀರಿ ಹಾರಿಹೋದರು ! ನಾವೀಗ ಯಾರನ್ನು ನಂಬಿ ಬದುಕಬೇಕು ? ನಮ್ಮ ಒಳ್ಳೆಯ ಗುಣಗಳನ್ನೇ ? ಓ, ಅವೀಗ ನಿಸ್ತೇಜ. ಹಣವಿದ್ದಾಗ ಮಾತ್ರ ಇಲ್ಲದ ಗುಣಗಳೂ ಎದ್ದು ಕಾಣುವುವು. ಹಣ ಹೋದಾಗ ಇದ್ದ ಗುಣಗಳೂ ಬಾಡಿಕೊಳ್ಳುವುವು.

"ನಾವೆಲ್ಲ ಶೂರರು, ಸುಂದರರು : ಚತುರ ವಾಗ್ಮಿಗಳು, ನಮ್ಮ ತಂದೆ ನಮಗೆ ಶಾಸ್ತ್ರ ಕಲಿಸಿದ. ಶಸ್ತ್ರವಿದ್ಯೆ ಕೊಡಿಸಿದ ; ಅವನಿಗೆ ನಾವು ಚಿರಋಣಿಗಳು. ಜನರು ಧನವಿದ್ದಾಗ ನಮ್ಮ ವಿದ್ಯೆಗಿತ್ತ ಮಹತ್ವ ಎಷ್ಟು ? ಆದರೀಗ ? ಧನವಿಲ್ಲ ; ಆ ವಿದ್ಯೆಗೇನು ಬೆಲೆ ? ಧನವನಾಶ್ರಯಿಸಿದ ಆ ಶಾಸ್ತ್ರ ವಿದ್ಯೆಗೆ ಇಗೋ ತಿಲಾಂಜಲಿ ! ಸರ್ವಾಶ್ರಯ ಧನವೇ, ನಿನಗೆ ನಮ್ಮ ಅನೇಕ ನಮನಗಳು !

"ನಮ್ಮ ಇಂದ್ರಿಯಗಳೊಂದೂ ಬಲಹೀನವಾಗಿಲ್ಲ ; ನಮ್ಮ ದೇಹದಲ್ಲಿ ಯೌವನ ತುಂಬಿ ನಿಂತಿದೆ ; ನಮ್ಮ ಸೌಂದರ್ಯಕ್ಕೇನು ಕಡಿಮೆ ? ನಮ್ಮ ಬುದ್ಧಿ ಹರಿತವಾಗಿದೆ ಇನ್ನೂ ; ಆದರೆ ಅರ್ಥ ಕೈಬಿಟ್ಟ ಕ್ಷಣವೆ ಅವುಗಳಿಗೇನಾಗಿದೆ ? ನಮ್ಮವರೆಂದ ಜನ ಹೀಗೇಕೆ ನಮ್ಮನ್ನು ಕಂಡು ಮುಖ ತಿರುಗಿಸುತ್ತಾರೆ? ಧನದಲ್ಲಿ ಇಷ್ಟು ಬಲವಿದೆಯೇ ? ಹಾಗಾದರೆ ಅದನ್ನೇ ಗಳಿಸುವಾ. ಅದು ಎಲ್ಲಿಯೇ ಸಿಗಲಿ, ಹೇಗೆಯೇ ಸಿಗಲಿ ಅದನ್ನೆ ಹುಡುಕುತ್ತ ಸಾಗುವಾ. ಇದು ನಮ್ಮ ನಿಶ್ಚಯ."

ನಾಲ್ವರೂ ನಿಜವಾಗಿಯೂ ಒಳ್ಳೆಯವರು, ಅವರು ನಂಬಿ ಹೆರರ ಆನಂದಕ್ಕಾಗಿ ಧನವನ್ನೆಲ್ಲ ಕಳೆದರು, ಈಗಿನ ಅವರ ಸ್ಥಿತಿ ಅವರ ಮನಸ್ಸನ್ನೇ ಬದಲಿಸಿತು. ಬುದ್ಧಿ ಬಲಗಳುಳ್ಳ ಅವರಿಗೆ ಅವುಗಳಲ್ಲಿ ವಿಶ್ವಾಸ ಉಳಿಯಲಿಲ್ಲ. ಅವರ ಕಣ್ಣೆದುರು ಕಂಡುದು ಒಂದು ; ಅದೇ ಧನ ! ! ಆ ಧನದ ಆಶೆ ಮನವನ್ನು ಪ್ರವೇಶಿಸಿದುದೇ ತಡ ಶಾಸ್ತ್ರ ಮರೆಯಿತು ; ವಿವೇಕ ಕಮರಿತು.

ಮಾಡಿದ ನಿಶ್ಚಯದಂತೆ ಅಂದು ರಾತ್ರಿಯೇ ಮನೆ, ಊರು, ಜನ ಎಲ್ಲವನ್ನು ತೊರೆದರು. ಮಹಾರಣ್ಯ ಸೇರಿದರು. ಬಯಸಿದ ಆಶೆ ಕೈಗೂಡದಿದ್ದರೆ ಸಾಕು, ಚಿಂತೆ ನಿರಾಶೆ ಮನವನ್ನು ಪ್ರವೇಶಿಸುವವು. ಆಗ ಮನುಷ್ಯ ಸತ್ಯವನ್ನು, ಧರ್ಮವನ್ನು ಧಿಃಕರಿಸುತ್ತಾನೆ. ಬಂಧು ಬಾಂಧವರನ್ನು ಆ ಕ್ಷಣವೇ ತ್ಯಜಿಸುತ್ತಾನೆ. ಜನ್ಮಭೂಮಿ ; ಜನನಿ, ಜನಕ ಯಾವ ವಸ್ತುಗಳ, ಅಭಿಮಾನವೂ ಅವನಲ್ಲುಳಿಯದು. "ಸಾಕು ಈ ಜೀವನ ; ನಾನೇನೋ ಎಲ್ಲವನ್ನೂ ನಂಬಿದೆ ; ಎಲ್ಲವೂ ನನ್ನನ್ನು ವಂಚಿಸಿದವು ; ಧರ್ಮ, ನೀತಿ, ಎಲ್ಲ ಅರ್ಥಹೀನ ಪ್ರೇಮ, ಪ್ರೀತಿಗಳಿಗೇನಿದೆ ಅರ್ಥ ? ಎಲ್ಲ ಸುಳ್ಳು, ಜೊಳ್ಳು." ಈ ನಿರಾಶಾ ಭಾವನೆ ಬಂದಾಗ ದೇಹ ತೊರೆಯಬಲ್ಲ, ದೇಶ ತೊರೆಯಬಲ್ಲ ಮನುಷ್ಯ ! ಇದು ಮನೋಶಾಸ್ತ್ರದ ರೀತಿ.

ನಾಲ್ವರೂ ಎಷ್ಟೋ ದಿನಗಳವರೆಗೆ ವನದಲ್ಲಿ ನಡೆದರು. ಒಂದು ದಿನ ಸಾಯಂಕಾಲ ಒಬ್ಬ ಮಹಾಯೋಗಿಯು ಆಶ್ರಮದ ಬಳಿ ಬಂದರು. "ಹೇಗೂ ಇಲ್ಲಿಗೆ ಬಂದಿದ್ದೇವೆ ; ರಾತ್ರಿಯೊಂದನ್ನು ಇಲ್ಲಿ ಕಳೆದರಾಯ್ತೆಂದು" ಬಗೆದು ಆಶ್ರಮವನ್ನು ಪ್ರವೇಶಿಸಿದರು, ಆಶ್ರಮ ವಿಶಾಲವಾದ ಎಲೆವನೆ ; ಸುತ್ತೆಲ್ಲ ಮುಗಿಲೆತ್ತರದ ಮರಗಳು ; ಮಗ್ಗುಲಲ್ಲಿಯೇ ಒಂದು ಚಿಕ್ಕ ನದಿ ; ಜುಳು ಜುಳಿಸುವ ನೀರು ಅಲ್ಲಿದೆ.

ಅವರು ಧ್ಯಾನಕ್ಕೆ ಕುಳಿತು ಯೋಗಿಯನ್ನು ವಂದಿಸಿದರು ; ಅದಕ್ಕೆ ಭಕ್ತಿಯೇ ಕಾರಣವೆಂದಲ್ಲ ; ಕಾರ್ಯ ಸಾಧನೆಗೆ ಅದೊಂದು ಮಾರ್ಗ ಎಂದು ಅವರಿಗೆ ಗೊತ್ತು. ಆ ಯೋಗಿ ಬಹು ಒಳ್ಳೆಯವ ; ಬಂದವರನ್ನು ಅತಿಥಿಗಳೆಂದು ಕಂಡು ; ಎಲೆವನೆಗೆ

Digitalized by e-Sahithya Documentation Forum
Sponsored by Sarayu Foundation Trust

ಕರೆದೊಯ್ದು ಹಣ್ಣು ಹಂಪಲಗಳನಿತ್ತು ಸತ್ಕರಿಸಿದ; ಮೇಲೆ ಸವಿನೀರನಿತ್ತ, ರಾತ್ರಿಯಾಗಿತ್ತು. ಬೆಳದಿಂಗಳು ಹಬ್ಬಿತ್ತು. ಅವರು ಐವರೂ ಮಾತಿಗೆ ತೊಡಗಿದರು, ಆಶ್ರಮದ ಹೊರ ಅಂಗಳದಲ್ಲಿ ಕುಳಿತು.

"ಮುನಿಗಳೇ ನಾವು ಬಹುಕಾಲ ಮಾತನಾಡುತ್ತ ಕುಳಿತಿದ್ದೇವೆ. ನಿಮ್ಮ ಶಾಂತ ವೃತ್ತಿ, ಪ್ರೇಮಲ ಮಾತು ಹೃದಯ ನಮಗೆ ಸಂತಸ ತಂದಿದೆ. ನಿಮಗೆ ನಾವೆಷ್ಟು ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೇ, ನಮ್ಮ ಹೃದಯದ ದುಃಖ ಕೇಳಲು ನೀವಲ್ಲದೆ ಯಾರು ನಮಗಿದ್ದಾರೆ. ಬಂಧು ಬಾಂಧವರೆಲ್ಲ ನಮ್ಮನ್ನು ತಿರಸ್ಕರಿಸಿದರು; ಮಿತ್ರರು ಹೀಗಳೆದರು. ಸೇವಕರು, ಹೆಂಡಿರು, ಮಕ್ಕಳು ಒಂದು ನೆಮ್ಮದಿಯ ನುಡಿಯನಾಡಲಿಲ್ಲ, ನೀವು ಮಾತ್ರ ಅನುಕಂಪೆ ತೋರಿಸಿದಿರಿ. ನಮ್ಮ ಸ್ಥಿತಿಯ ಚಿತ್ರಣವನ್ನೆಲ್ಲ ನಿಮ್ಮ ಮುಂದೆ ಚಿತ್ರಿಸಿದ್ದೇವೆ. ಮುನಿಗಳೆ, ನಮಗಿರುವದೊಂದೇ ಆಸೆ; ನಾವು ನಮ ತಂದೆಯಂತೆಯೇ ಧನವಂತರಾಗಬೇಕು" ಎಂದು ಅವರೆಲ್ಲ ಯೋಗಿಯನ್ನು ಬಿನ್ನಯಿಸಿದರು.

ಎಂಥ ಚಂಡಾಲನೇ ಇರಲಿ, ಎಂಥ ಕೂರ್ರನೆ ಇರಲಿ; ಸೃಷ್ಟಿ ಸೌಂದರ್ಯದ ಮಧ್ಯೆ ಪ್ರಶಾಂತರಾಗಿ ವಾಸಿಸುವ ಮಹಾತ್ಮರನ್ನು ಕಂಡು, ಕೂಡಿ, ನುಡಿಸಿದಾಗ ಅವನಲ್ಲಿಯ ಕ್ರೌರ್ಯ ವಿನಷ್ಟವಾಗುವುದು; ನಿರಾಶೆ ಅಳಿಯುವುದು; ಒಂದು ನಿಮಿಷವಾದರೂ ಚಿಂತೆಯಿಲ್ಲ ಮಾನಸಿಕ ನೆಮ್ಮದಿ ಪ್ರಾಪ್ತವಾಗುವುದು. ಯೋಗಿಯನ್ನು ಕಂಡಾಗ ಧಾಷ್ಟ್ರ್ಯರಾಗಿದ್ದ ಅವರು ಈಗವನಲ್ಲಿ ಭಕ್ತಿತೋರಿದರು, ಮೊದಲಿನಂತೆ ಎಲ್ಲಿಯಾದರೂ ಚಿಂತೆಯಿಲ್ಲದೆ ಧನವಂತರಾಗಿ, ಧಾನಿಗಳಾಗಿ ಬದುಕಬೇಕೆಂಬ ಆಸೆಯೊಂದನ್ನುಳಿದು ಇನ್ನಾವ ಆಸೆಯೂ ಉಳಿದಿರಲಿಲ್ಲ. ಅದಕ್ಕೆಂದೇ ತಮ್ಮನ್ನು ಜರಿದ ಹೆಂಡತಿ; ಮಕ್ಕಳು, ಮಿತ್ರರಿಗೆ ಕೇಡುಬಗೆಯಲಿಚ್ಛಿಸಲಿಲ್ಲ ಅವರು ಬಯಸಿದ್ದರೆ ಯೋಗಿಯ ಸಹಾಯದಿಂದ ಎಲ್ಲರನ್ನೂ ವಿನಾಶಗೊಳಿಸಬಹುದಿತ್ತು. ಆದರೂ ಒಂದು ಮಾತು ನಿಜ-ಅವರ ಮನದೊಳಗಣ ದ್ರವ್ಯದಾಶೆ ಮಾತ್ರ ಅಳಿಯಲಿಲ್ಲ. ಕಮಲದಹೂವಿನ ಕೆಳಗೇ ಕಪ್ಪೆ ಇದ್ದರೇನಂತೆ ಅಂಬುಜೆಯ ಒಳಗಣ ಮಕರಂದ ಪಾನ ಮಾಡದೆ ರಾಡಿನೀರನ್ನೇ ಈಂಟುವುದು; ಉಣ್ಣೆ ಕೆಚ್ಚಲೊಳಿದ್ದೂ ನೊರೆವಾಲನುಣ್ಣದೆ ರಕ್ತವನ್ನೇ ಬಯಸುವುದು: ಅಂತೆಯೇ ನಾಲ್ವರು ಬಂಧುಗಳು ಯೋಗಿಗಳಿಂದ ಮುಕ್ತಿ ಮಾರ್ಗವನ್ನು ತೋರುವ ಆತ್ಮಶ್ರೀಯನ್ನು ಬೇಡದೆ ಭೌತಿಕ ಶ್ರೀಯನ್ನೇ ಬೇಡಿದರು. ಕಲ್ಲು ಎನಿಸುಕಾಲ ನೀರೊಳಗಿದ್ದರೇನು ನೆನೆದು ಮೃದುವಾಗಬಲ್ಲುದೆ?

ಯೋಗಿಯು ನುಡಿದ, "ಮಕ್ಕಳೆ, ನಾವೇನೇ ಗಳಿಸಲಿ, ಅದಕ್ಕೆ ನಮ್ಮ ಬೆವರು ಸುರಿದಿರಬೇಕು. ನಾನೇನೋ ಒಂದು ಮಂತ್ರದಿಂದ ನಿಮಗೆ ಅಪಾರ ಧನವೀಯ

ಬಹುದು. ತಾನಾಗಿಯೇ ಬಂದ ಇಂಥ ಹಣದಿಂದ ಲಾಭವೇನೂ ಇಲ್ಲ; ನಿಮ್ಮಲ್ಲಿ ಮತ್ತೆ ಅವೆಷ್ಟೋ ದುರ್ಗುಣ ಮನೆಮಾಡಿಬಿಡುವುವು. ಈಗಿನ ನಿಮ್ಮ ಪುರುಷಶಕ್ತಿ ನಶಿಸಿ ಔದಾಸೀನ್ಯ, ಆಲಸ್ಯ ಬೀಡುಬಿಡುವುವು. ನಾವು ನಮ್ಮ ರಕ್ತ ಸುರಿದು ದುಡಿದು ಗಳಿಸಿದ ಧನ ಸ್ಥಿರವಾಗಿ ಉಳಿಯುವುದು. ನೀವೀಗ ದುಡಿದು ಪಡೆಯಬೇಕು.

"ದೈವ ನಂಬಿ ಆಕಾಶದತ್ತ ಮುಖ ಮಾಡಿ ಎಷ್ಟು ಕಾಲ ನಿಂತರೆ ಮಳೆ ಬಂದೀತು? ಅದರ ಬದಲು ನಿಮ್ಮ ಶಕ್ತಿಯನ್ನು ನಂಬಿ ನೆಲವನಗೆಯಲು ಪ್ರಾರಂಭಿಸಿ. ಒಂದಿಲ್ಲ ಒಂದು ದಿನ ನೀರು ಧಾರೆಯಾಗಿ ಹರಿದು ಬರುವುದು, ಬಿತ್ತಿದ ಪೈರು ಹುಲುಸಾಗಿ ಬೆಳೆಯುವುದು. ಅಂಥ ಅನ್ನ ತಿಂದಾಗ ಅದೆಂಥ ಆನಂದ! ಅದಕ್ಕಾಗಿ ನೀವು ಹಾಯಾಗಿ ದುಡಿಯಬಹುದಲ್ಲ! ಇಲ್ಲಿಯೇ ಸಮೀಪದಲ್ಲಿ ಅನೇಕ ಗಣಿಗಳಿವೆ; ಹೋಗಿ ಕಷ್ಟಪಟ್ಟು ಅಗೆದು ಹೊನ್ನ ಪಡೆಯುವುದು ಸೂಕ್ತ."

ನಾಲ್ವರು, "ಮುನಿಗಳೇ, ನಿಮ್ಮ ಸಲಹೆ, ನಿಮ್ಮ ಉಪದೇಶ ನಮ್ಮಲ್ಲಿ ನವ ಚೈತನ್ಯ ತುಂಬಿದೆ. ನೀವೆಂದಂತೆಯೇ ನಾಳೆ ರವಿಯುದಯದೊಡನೆಯೇ ಹೊರಡುತ್ತೇವೆ."

ಯೋಗಿ, "ಮಕ್ಕಳೆ, ಎಲ್ಲದಕ್ಕೂ ಒಂದು ಮಿತಿಯಿರಲಿ; ಮಿತಿ ಮೀರಿದಾಗ ನಿಮ್ಮ ವಿನಾಶ ಕಟ್ಟಿಟ್ಟುದು. ನಿಮಗಿದು ನನ್ನ ಪ್ರೀತಿಯ ಸಲಹೆ, ಸಂದೇಶ."

ಮರುದಿನ ನಸುಕಿನಲ್ಲಿಯೇ ನಾಲ್ವರೂ ಎದ್ದು, ಸ್ನಾನ ತೀರಿಸಿ ಧ್ಯಾನ್ಯದಲ್ಲಿ ಮಗ್ನರಾದ ಯೋಗಿಗಳನ್ನು ನಮಿಸಿ, ಯೋಗಿಗಳು ತೋರಿದ ದಿಕ್ಕಿನಲ್ಲಿ ಸಾಗಿದರು. ಅವರ ಹೆಗಲ ಮೇಲೊಂದು ಗುದ್ದಲಿ, ಕೈಯಲ್ಲಿ ಸನಿಕೆ ಮಂಡಿಸಿದ್ದವು. ಎಂಥ ಪರಿವರ್ತನೆ! ತಲೆಯಲ್ಲೆಲ್ಲ ಯೋಗಿಗಳ ಮಾತು ಪ್ರತಿಧ್ವನಿಸುತ್ತಿದ್ದವು.

ಅವರು ನಡೆದೇ ನಡೆದರು; ದಿನ ರಾತ್ರಿಗಳುರುಳಿದವು; ಅರಣ್ಯ ಮುಗಿದು ಪರ್ವತ ಪ್ರಾರಂಭವಾಯಿತು. ಕೆಲ ಅಂತರ ಹೋಗುವಷ್ಟರಲ್ಲಿಯೇ ತಾಮ್ರದ ಭೂಮಿ ಕಂಡಿತು. ಹರ್ಷಗೊಂಡ ಹಿರಿಯ ಬಂಧುವು ಹಡ್ಡಲು ತೊಡಗಿದ. ಕಣ್ಮಿಂಚುವ ಶುದ್ಧ ತಾಮ್ರ ಕಂಡಾಗ ಅವನ ಮನ ಆನಂದದಿಂದ ತಣಿಯಿತು. "ಬಂಧುಗಳೇ, ಬನ್ನಿ, ಯಥೇಚ್ಛವಾಗಿ ಅಗೆದು ಪೇಟೆಗೆ ಒಯ್ಯುವಾ. ಇದರಿಂದ ಹೇರಳಹಣ ಗಳಿಸಬಲ್ಲೆವು." ಎಂದನಾತ. ಉಳಿದವರಲ್ಲಿ ಸ್ವಲ್ಪ ಆಸೆಯ ಅಂಕುರ ಒಡೆಯಿತು. "ಇಲ್ಲ; ಮುಂದೆ ನಡೆದು ಹೋಗುವಾ; ಬೆಳ್ಳಿಯನ್ನೋ. ಬಂಗಾರವನ್ನೋ ಪಡೆಯುವುದು ಸಾಧ್ಯ." ಎಂದರು ಅವರು. ಹಿರಿಯ ಅಣ್ಣ ಮಾತ್ರ-"ನಾನು ಮುಂದೆ ಬರಲಾರೆ.

Digitalized by e-Sahithya Documentation Forum
Sponsored by Sarayu Foundation Trust

ದೊರೆತುದರಲ್ಲಿಯೇ ಸಂತೋಷಿತನಾಗಿದ್ದೇನೆ. ಯೋಗಿಗಳ ಮಾತು ನನ್ನಲ್ಲಿ ಗುಣುಗುಣಿ ಸುತ್ತಿವೆ. ಬೇಕಾದರೆ ನೀವು ಮುಂದೆ ಹೋಗಿರಿ; ನೀವು ಬರುವವರೆಗೆ ಇಲ್ಲಿಯೇ ಕಾಯ್ದಿರುವೆ.'' ಎಂದು ನುಡಿದು ಕಾರ್ಯಕ್ಕೆ ತೊಡಗಿದ.

ಮೂವರು ಮುಂದೆ ನಡೆದರು; ಒಂದು ಮೈಲಿನ ಮೇಲೆ ಶುಭ್ರವಾದ ಬೆಳ್ಳಿಯ ಭೂಮಿ ಕಂಡಿತು. ಅವರಲ್ಲಿ ಹಿರಿಯನಾದವ ಅಗೆದು ನೋಡಿದ! ಎಂಥ ರಜತವದು! "ಬಂಧು ಗಳೇ, ಇಲ್ಲಿದೆ ನಮ್ಮ ಭಾಗ್ಯ! ಸಾಕು; ಬೇಕಷ್ಟು ಅಗೆದು ಸಿರಿವಂತರಾಗುವಾ; ಬನ್ನಿ.'' ಎಂದ. ಉಳಿದಿಬ್ಬರಲ್ಲಿ ಆಶೆಯ ಅಂಕುರ ಇನ್ನಷ್ಟು ಬೆಳೆಯಿತು. "ಅಣ್ಣ ಹಿಂದೆ ತಾಮ್ರ, ಈಗ ಬೆಳ್ಳಿ; ನಿಜವಾಗಿಯೂ ಮುಂದೆ ನಾವು ಸ್ವರ್ಣ-ಭೂಮಿಯನ್ನು ಕಾಣುವೆವು. ಅದು ಮಾತ್ರ ನಮ್ಮ ಬಡತನವನ್ನು ಹಿಂಗಿಸಬಲ್ಲದು.'' ಎಂದು ಹೇಳಿ ಮುಂದೆ ಸಾಗಿದರು.

ಮತ್ತೊಂದು ಗಾವುದ ಹೋಗಿರಬೇಕು; ಸ್ವರ್ಣಭೂಮಿ ಬಂತು. ಮೂರನೆಯ ಬಂಧುವು ಹರ್ಷದಿಂದ ಮೈಮರೆತ. "ಬಂತು ನಮ್ಮ ಭಾಗ್ಯ. ಇದೋ ತಮ್ಮ, ಬೇಕಷ್ಟು ಅಗೆದುಕೊಳ್ಳುವ. ನಮಗಿನ್ನಾರು ಸರಿ ಸಮ!'' ಇಷ್ಟು ನುಡಿದವನೇ ನಡುಕಟ್ಟಿ ಅಗೆಯಲುದ್ಯೋಗಿಸಿದ. ಚಿಕ್ಕ ತಮ್ಮನಲ್ಲಿ ಆಶೆ ಹೆಮ್ಮರವಾಗಿತ್ತು. "ಅಣ್ಣ ನೀನೊಬ್ಬ ಮೂರ್ಖ. ಎಲ್ಲಿದೆ ನಿನ್ನ ತರ್ಕಮತಿ? ತಾಮ್ರ, ಬೆಳ್ಳಿ, ಬಂಗಾರ! ಇಲ್ಲಿಗೇ ಮುಗಿಯಲಿಲ್ಲ. ಮುಂದೆ ಸನಿಹದಲ್ಲಿಯೇ ರತ್ನ-ವಜ್ರಗಳ ಗಣಿ ಇರದೇನು? ಒಂದು ರತ್ನ ದೊರೆತರೆ ತೀರಿತು; ಅದರ ಮುಂದೆ ಹೇರು ಹೇರು ಬಂಗಾರ ಮಾರಿದರೂ ಸರಿಸಮವಲ್ಲ. ಬಾ, ಮುಂದೆ ನಡೆಯುವಾ,'' ಎಂದ ತಮ್ಮ. ಅದಕ್ಕೆ ಅಣ್ಣ ನುಡಿದ, ತಮ್ಮಾ ನಮ್ಮ ಆಶೆಗೆ ಮಿತಿಯಿರಲಿ; ಇನ್ನು ಮುಂದೆ ಒಂದು ಹೆಜ್ಜೆಯನ್ನೂ ನಾನಿಡೆ. ಬೇಕಾದರೆ ನೀನೇ ಹೋಗು, ನೀನು ಬರುವ ದಾರಿಯಲ್ಲಿ ನಾನು ಕಾಯ್ದಿರುವೆ. ಸ್ವರ್ಣ ದಿಂದ ನನ್ನ ಮನ ತೃಪ್ತವಾಗಿದೆ.''

ತಮ್ಮನು ಮಾತ್ರ ಈ ಮಾತುಗಳನ್ನು ಕಿವಿಯಲ್ಲಿ ಹಾಕಿಕೊಳ್ಳಲಿಲ್ಲ. ಮನ ದಲ್ಲಿಯೇ ರತ್ನಗಳ ರಾಜ್ಯ ಕಟ್ಟಿದ; ಯೋಗಿಯ ನುಡಿಗಳು ಅವನ ತಲೆಯಿಂದ ಜಾರಿ ದವು. ಆಶೆಯ ಭೂತ ಅಂತರಂಗದಲ್ಲಿ ನರ್ತಿಸಿತು. ನಡೆದೇ ನಡೆದ. ಒಂದೆರಡು ಮೈಲಲ್ಲ, ಹತ್ತೆಂಟು ಮೈಲು; ಒಮ್ಮೆಲೇ ನಿಂತ ಅವನ ಕಣ್ಣು ತಿರುಗಿದವು, "ಏನದು? ನಾನು ಕನಸು ಕಾಣುತ್ತಿದ್ದೇನೆಯೇ? ನನ್ನ ಕಣ್ಣಿಗೆ ಭ್ರಮೆಯೇ? ಇಲ್ಲ, ಇಲ್ಲ. ನಾನೆಲ್ಲ ಸರಿಯಾಗಿದ್ದೇನೆ. ಜಾಗ್ರತದಲ್ಲಿಯೇ ಇದ್ದೇನೆ. ಅಬ್ಬಾ ಎಂಥ ಸಿರಿ! ರತ್ನಗಳ ಮಹಾಪ್ರಪಂಚ; ಗುಡ್ಡದಾಕಾರವಾಗಿ ನಿಂತಿದೆ. ಎಂಥ ಕಾಂತಿ ಚಿಮ್ಮುತ್ತಿದೆ! ಎಂಥ ಪ್ರಭೆ ಹೊರಹೊಮ್ಮುತ್ತಿದೆ! ನಾನೆಷ್ಟೇ ದಣಿದಿರಲಿ; ಒಂದು ಕ್ಷಣದಲ್ಲಿ ಅಲ್ಲಿಗೆ

ನುಗ್ಗುವೆ. ಅಯ್ಯೋ, ಈ ಗುದ್ದಲಿ ಸನಿಕೆಗಳನ್ನು ಬರಿದೆ ಹೊತ್ತು ತಂದೆ" ಎಂದವನೆ ಯೋಗಿಯಿತ್ತ ಗುದ್ದಲಿ ಸನಿಕೆಗಳನ್ನು ದೊಪ್ಪನೆ ಒಗೆದು ಓಡಿಯೇ ಓಡಿದ. ಕಡೆ ಗೊಮ್ಮೆ ರತ್ನಪರ್ವತವನ್ನೇರಿದ. ಎಲ್ಲಿ ನೋಡಿದಡಲ್ಲಿ ರನ್ನ ಬೆಳಗು! ಹುಚ್ಚೆದ್ದು ಕುಣಿದ, ಹಾಡಿದ, ಜಿಗಿದ, ಆನಂದದ ಉನ್ಮಾದದಲ್ಲಿ ಮೂಕನಾದ! ತಾನೇನು ಮಾಡುತ್ತಿದ್ದೇನೆ ಎನ್ನುವ ಪರಿವೆ ಅವನಲ್ಲಿರಲಿಲ್ಲ.

ರತ್ನ ಪರ್ವತಶಿಖರ ಸುಮಾರು ಒಂದು ಸಾವಿರ ಅಡಿಗಳಷ್ಟು ಎತ್ತರವಾಗಿತ್ತು; ಅದರ ಸುತ್ತ ಒಂದು ಮೈಲಿನಲ್ಲಿ ಒಂದೂ ಏರಿಲ್ಲ;, ಗುಡ್ಡವಿಲ್ಲ, ಪರ್ವತಶಿಖರವಿಲ್ಲ. ರತ್ನದಾಶೆಗೆ ಬಂದು ನಾಲ್ಕನೆಯವ ಮನಬಂದಷ್ಟು ಆರಿಸಿದ. ಒಂದೊಂದು ರತ್ನ ಲಕ್ಷಾವಧಿ ಕಿಮ್ಮತ್ತಿನವು! ಅಂಥ ಐಶ್ವರ್ಯ ಕಂಡಾಗ ಯಾರ ಮನ ಪುಳಕಿತ ವಾಗಲಿಕ್ಕಿಲ್ಲ!

ಹೊತ್ತು ಹೊರಳಿತು. ಅವನು ಮಾತ್ರ ಅದರ ಅರಿವಿಲ್ಲದೆ ಆರಿಸುತ್ತಿದ್ದ. ಸೂರ್ಯ ಇನ್ನಷ್ಟು ಕೆಳಗಿಳಿದ. ಅವನು ದಣಿದ, ಆರಿಸುವುದನ್ನು ನಿಲ್ಲಿಸಿದ, ಹೊಟ್ಟೆ ಹಾತೊರೆಯುತ್ತಿತ್ತು, ಒಂದು ತುತ್ತು ಅನ್ನಕ್ಕಾಗಿ. ಬಾಯಾರಿತ್ತು; ನೀರಿಗಾಗಿ. ಅತ್ತಿತ್ತ ತಲೆ ಎತ್ತಿ ನೋಡಿದ. ಒಂದು ನೂರಡಿ ಅಂತರದಲ್ಲಿಯೇ ವಿಮಲ ಜಲದ ನಿರ್ಝರಿಣಿ ನಿಧಾನವಾಗಿ ಹರಿಯುತ್ತಿದ್ದುದು ಕಂಡಿತು; ಅದರ ಮಗ್ಗುಲಲ್ಲಿಯೇ ಮಾವಿನ ನೆಳಲು, ಮಾವಿನಕಾಯಿಗಳು; ಅವು ಕಂಡೊಡನೆಯೇ ಅವುಗಳತ್ತ ಸಾಗಿದ; ನೂರಡಿ ಕೆಳಗಿಳಿದ; ಆ ಝರಿ ಮಾತ್ರ ಇನ್ನೂ ನೂರಡಿ ಮುಂದಿತ್ತು. ಮತ್ತೆ ಮುಂದಾದ; ಆ ಹಣ್ಣಿನ ಸುಂದರ ಮರ, ಜುಳು ಜುಳಿಸುವ ಪ್ರವಾಹ, ಸ್ಫಟಿಕದಂಥ ಬೆಳ್ಳಗಿನ ನೀರು ಮತ್ತೆ ಮುಂದಾದವು. ಅವು ದೂರಾದಂತೆ ಇವನ ಹಸಿವು, ಬಾಯಾರಿಕೆ ನೂರ್ಮಡಿ ಹೆಚ್ಚುತ್ತಿದ್ದವು! ಕಂಗಾಲಾದ! ಸೂರ್ಯ ಕ್ಷಿತಿಜದ ಮೇಲೆ ಬಂದ; ಓಡುತ್ತಲೇ ರತ್ನಪರ್ವತವನ್ನಿಳಿದು ಬಂದ ಆ ಬಂಧುವು ಕಂಗೆಟ್ಟ! ಇನ್ನೇನು ಸೂರ್ಯನಿಳಿದು ಹೋಗುವ ಮುಂಚೆಯೇ ಆ ಹಣ್ಣು ತಿನ್ನಬೇಕು, ಆ 'ನೀರ ಕುಡಿಯ ಬೇಕು' ಎಂದಾಶಿಸಿ ಮತ್ತಷ್ಟು ತೀವ್ರ ಓಡಿದ. ಆ ಹಳ್ಳ ಆ ಗಿಡ ತೀರ ಸಮೀಪ ಬಂದವು; ಕಾಲ ಬಳಿಯೇ ನೀರು! ಹರ್ಷದಿಂದ ನೆಗೆದ ಬಂಧುವು ನೀರಿಗಾಗಿ ಕೈಯಿಟ್ಟ! ಅಬ್ಬಾ ಆ ಹಳ್ಳ ಮಹಾಕೊಳ್ಳವಾಯಿತು. ಇಣುಕಿ ನೋಡಿದ ಸಾವಿರಾರು ಫೂಟುಗಳ ಮಹಾಕೊಳ್ಳ; ಅಲ್ಲಿ ಒಳಗೆಲ್ಲ ಗಾಢ ಕತ್ತಲೆ. "ಎಲ್ಲಿದೆ ಆ ನೀರು? ಓ ಆ ಗಿಡವೆಲ್ಲಿ?" ಎಂದು ಕೂಗಿದ.

ಆ ಕೊಳ್ಳದಿಂದ ಪ್ರತಿಧ್ವನಿಸಿ ಬಂದಿತೊಂದು ಉಲಿ? "ಬಾ ಮಗುವೆ, ದಣಿದು ಬಂದಿರುವೆ, ಇಲ್ಲಿದೆ ರತ್ನರಾಶಿ; ನಿನ್ನಷ್ಟು ಸಿರಿವಂತರಿಲ್ಲ. ಬಾ ನನ್ನೊಡಲಿಗೆ; ನಿನ್ನಂಥ

Digitalized by e-Sahithya Documentation Forum
Sponsored by Sarayu Foundation Trust

ನೂರು ಸಿರಿವಂತರು ಹಾಯಾಗಿ ಒರಗಿದ್ದಾರೆ. ನನ್ನೊಡಲು ಸಿರಿವಂತರ ಗುಹೆ! ಬಾ! ಬಾ!" ಪ್ರತಿಧ್ವನಿ ಬಂದಂತೆಯೇ ಅವನು ಮುಗ್ಗುರಿಸಿದ; ಪ್ರಜ್ಞೆ ಅಳಿಯಿತು; ಕಣ್ಣು ಮುಚ್ಚಿದವು. ಆಳತೆಯಿಲ್ಲದ ಕೊಳ್ಳದಲಿ ತಲೆ ಕೆಳಗಾಗಿ ಬೀಳುತ್ತಿದ್ದ!

ಅದಕೆಂದೇ ನಾನು ಹೇಳುವುದು; ಬಯಕೆಗೂ ಮಿತಿಯಿದೆ, ಬಾಳಿಗೂ ಮಿತಿಯಿದೆ. ಮಿತಿಯಿಲ್ಲದಾಗ ಗತಿ ಈ ಮಹಾಕೊಳ್ಳ! ಮಿತಿಯರಿತು ಬಾಳಿ ಈ ಜಗದಿ; ಮಿತಿ ಮರೆತು ಬೀಳದಿರಿ ಈ ಕೊಳ್ಳಕೆ!

★

ಮಂತ್ರಪುರುಷ ಬಸವಣ್ಣನಿಗೆ ಕೃತಜ್ಞತೆ

ಎಂತು ಭಜಿಸಲಿ ತಂದೆ ಬಸವ ನಿನ್ನ,
ಎನಿತು ಪಾಡಲಿ ಗುರುವೆ ಬಸವ ನಿನ್ನ.
ಮನವು ಮಿಡಿಯಿತು ತಂದೆ!
ಭಾವ ಬೆಂದಿತು ಗುರುವೆ!

ದುರ್ಮತಿಯ ವೈಶಾಖ ಕೃಷ್ಣ ಪಕ್ಷದ ದಶಮಿ
ಶುಕ್ರವಾರದಿ ಧರೆಗೆ ಮಳೆಗಾಳಿ ಭೋರ್ಗರೆಯೆ,
ತಲ್ಲಣಿಸಿತೀ ಇಳೆಯು ಹೇಳಲಸದಳವು.
ಹೊತ್ತಂದ ಹೊರೆಗಾಗಿ ಬರುವಾಗ ಧಾತ್ರಿಯಲಿ,
ಗುರುದ್ವಯರು ಕುಳಿತಿರಲು ಬಸವ ಗಂಗೋತ್ರಿಯಲಿ,
ನುಡಿಯಲೇಕೈ ತಂದೆ ಶಿವನ ಡಂಗುರವು!
ಹೇಳ ಬಯಸಿದೆ ಏನು ನಿನ್ನ ಅಭಯವನು?
ಸಿಡಿಲೊಂದು ಧರೆಗಿಳಿಯೆ,
ಕೃಪೆಯೊಳು ನೀ ಕಾಯ್ದೆ,
ದಾರಿ ದೀಪಗಳನ್ನು ನಮಗಾಗಿ ನೀ ಪೊರೆದೆ
ಎಂತು ಭಜಿಸಲಿ ತಂದೆ ಬಸವ ನಿನ್ನ,
ಎನಿತು ಪಾಡಲಿ ಗುರುವೆ ಬಸವ ನಿನ್ನ

ಸುಮಂಗಲ ಜಿ. ಹುಲ್ಲೂರ್, ಬೆಂಗಳೂರು

ಇದು ಜಗತ್ತು

—ಮಾತಾಜಿ

ದಿನಾಂಕ 16-6-1981 ಬೆಳಿಗ್ಗೆ ಹತ್ತುಗಂಟೆಯಾಗಿರಬೇಕು. ಸುಪ್ರಭಾತದ ಸ್ನಾನ ಪೂಜೆ ಎಲ್ಲ ಮುಗಿದು ಕರ್ತವ್ಯ ನಿರತಳಾಗಿದ್ದಾಗ, ಕಾರ್ಯಕರ್ತರು ಹೇಳಿದರು, ಯಾರೋ ಮಕ್ಕಳ ಶಾಲಾ ಪ್ರವೇಶಕ್ಕಾಗಿ ಬಂದಿದ್ದಾರೆ ಎಂದು. ಹೋಗಿ ಅವರೊಡನೆ ಮಾತನಾಡುತ್ತ ಕುಳಿತಿರುವಾಗಲೇ ಒಂದು ಸುಂದರವಾದ ಬಿಳಿಯ ಕಾರು ಬಂದು ಆಶ್ರಮದ ಮುಂದೆ ನಿಂತಿತು. ಇಳಿದ ಹಲವರಲ್ಲಿ ಶುಭ್ರ ಶ್ವೇತ ವಸನ ಧರಿಸಿದ ಖಾದಿ ಧಾರಿಗಳೊಬ್ಬರೂ ಇದ್ದರು. ಬಂದವರನ್ನು ಒಳಬರಲು ಆಶ್ರಮವಾಸಿಗಳು ಹೇಳಿದರು. ಬಂದು ಪ್ರಾರ್ಥನಾ ಮಂದಿರದಲ್ಲಿಟ್ಟ ಕುರ್ಚಿಗಳ ಮೇಲೆ ಠೀವಿಯಿಂದ ಕುಳಿತರು. "ಯಾರು? ಏಕೆ ಬಂದಿದ್ದಾರೆ? ಕೇಳಿರಿ." ಎಂದು ಕಾರ್ಯಕರ್ತರಿಗೆ ಹೇಳಿದೆ. ಹೋಗಿ ಕೇಳುತ್ತಿದ್ದಂತೆಯೇ ಬಹಳ ಠೀವಿಯಿಂದ ವಿಸಿಟಿಂಗ್ ಕಾರ್ಡ್ ಕೊಟ್ಟರು. 'ಇದನ್ನು ತೋರಿಸಿ ಹೋಗಿ' ಎಂದು ಆಜ್ಞಾಧಾಟಿಯಲ್ಲೇ ನುಡಿದರು. ಬಹುಶಃ ಭಾರತೀಯ ವಾಯು ಪಡೆಯ ಅಥವಾ ನೌಕಾ ಪಡೆಯ ಅಥವಾ ಸೇನಾ ಪಡೆಯ ದಂಡನಾಯಕರಿಗೂ ಈ ಠೀವಿ ಇರಲಿಕ್ಕಿಲ್ಲ.

ಸಹನೆ, ಶಾಂತಿಗಳಿಂದಲೇ ಆ ವಿಸಿಟಿಂಗ್ ಕಾರ್ಡ್ ನೋಡಿದೆ. ಸಿಡಿಸಿಡಿಗುಟ್ಟುವ, ಕಿಡಿಕಿಡಿಕಾರುವ ಯಾವುದೋ ಒಂದು ಪತ್ರಿಕೆಯ ಸಂಪಾದಕರ ಹೆಸರಿತ್ತು. ಸರಿ ಮುಂದಿನ ವಿಷಯ ಅರ್ಥವಾಯಿತು. ಬೆದರಿಸುವಿಕೆ, ಹಣ ಕೇಳುವಿಕೆ. ಇವರ ಬಳಿ ಇನ್ನೇನು ಮಾತು? ಎಂದುಕೊಂಡು ಆ ಜಾಗದಿಂದೆದ್ದು, ಸಂಸ್ಥೆಯ ಕಾರ್ಯನಿರ್ವಾಹಕರಿಗೆ ಫೋನ್ ಮಾಡಿ ಹೇಳಿದೆ "ಬಂದವರ ಬಳಿ ಮಾತಾಡಿ, ಕಳಿಸಿಕೊಡಿ. ನಮ್ಮ ಸ್ವಭಾವ ಬೆದರಿಕೆಗೆ ಮಣಿದು ಹಣ ಕೊಡುವಂಥದಲ್ಲ. ಎಷ್ಟೋ ಜನ ಶ್ರೀಮಂತರು ಒಳ್ಳೆಯ ಕಾರ್ಯಕ್ಕೆ ಸಲ್ಲಲೆಂದು, ಬೆವರು ಹರಿಸಿ ಸಂಪಾದಿಸಿದ ಶ್ರಮಜೀವಿಗಳು ತಮ್ಮ ದುಡಿಮೆ ಸತ್ಕಾರ್ಯಕ್ಕೆ ಸಲ್ಲಲೆಂದು ಆಕಾಂಕ್ಷೆ, ಭರವಸೆ ಹೊತ್ತು ಸಂಸ್ಥೆಗೆ ದಾನ ಕೊಡುವರು. ಇಂಥ ಪವಿತ್ರ ಹಣದಲ್ಲಿ ಮಾಡಬೇಕಾದ ಮಹತ್ವಪೂರ್ಣ ಕಾರ್ಯಗಳು ಹಲವಾರು. ಅಂಥ ಹಣವನ್ನು ಸ್ವಪ್ರಶಂಸೆಗಾಗಲೀ ಅಥವಾ ಅಪಪ್ರಚಾರ ಮಾಡುವ ಕೈ-ಬಾಯಿಗಳನ್ನು ಮುಚ್ಚಿಸುವುದಕ್ಕಾಗಲೀ ವಿನಿಯೋಗ

Digitalized by e-Sahithya Documentation Forum
Sponsored by Sarayu Foundation Trust

ಮಾಡುವ ಸ್ವಭಾವ ನಮ್ಮದಲ್ಲ. ನೂರು ಜನ ನೂರು ಮಾತು ನುಡಿದರೆ ನಮ್ಮ ಆತ್ಮ ಬಲ ಕುಂದದು; ತತ್ತ್ವ ಬಿಟ್ಟು ನಡೆದರೆ ಆತ್ಮ ಬಲ ಕುಗ್ಗುವುದು". ಎಂದು.

ಕಾರ್ಯನಿರ್ವಾಹಕರು ಹೋಗಿ ಕಂಡಾಗ ಆಗಂತುಕರು, "ಇಲ್ಲ. ಅವರನ್ನು ಕಾಣಲೇ ಬೇಕು. ನಮಗೇನೋ ವಿಶೇಷ ಸುದ್ದಿ ದೊರೆತಿದೆ. ಆದರೆ ಅದನ್ನು ಬಹಿರಂಗಪಡಿಸಬಾರದೆಂದು ಕಾಯ್ದಿದ್ದೇವೆ. ಇಲ್ಲವಾದರೆ ನಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ."

"ಸಿಕ್ಕಿದ್ದರೆ ಪ್ರಕಟಿಸಿರಿ; ಆದರಿಂದ ನಿಮ್ಮ ಪತ್ರಿಕೆಯಾದರೂ ಹೆಚ್ಚು ಖರ್ಚಾಗಲಿ. ಇವರಂತೂ ಬೆದರಿಕೆಗೆ ಮಣಿದು ಹಣ ಕೊಡುವವರಲ್ಲ ..." ಎಂದು ಖಂಡ ತುಂಡವಾಗಿ ಹೇಳುತ್ತಲೇ, ಅವರು ಏನೂ ಮಾಡಲು ತೋಚದೆದ್ದು ಹೋದರು ಶೋಷಣೆಯ ವಿರುದ್ಧ ಹೋರಾಟ ಮಾಡುವವರೆಂದು ಸ್ವಪ್ರಶಂಸೆ ಮಾಡಿಕೊಳ್ಳುವ ಇವರುಗಳು ಮಾಡುವುದು ಶೋಷಣೆಯಲ್ಲದೆ ಮತ್ತೇನು?

ಮತ್ತೊಮ್ಮೆ ನಡೆದ ಒಂದು ವಿಶೇಷ. ನಾಲ್ಕಾರುಜನ ಬಂದರು. "ನೋಡ್ರಿ ತಾಯಿ, ನಿಮ್ಮ ಬಗ್ಗೆ ನಮಗೆ ತೀರಾ ಅಭಿಮಾನ-ಭಕ್ತಿ. ಆ ಕಳ್ಳ ನಿಮ್ಮ ವಿರುದ್ಧ ಏನೇನೋ ಬರೀ ತಾನೆ. ಅವನ ಬಾಯಿ ಮುಚ್ಚಿಸಬೇಕು. ಸೊಂಟ ಮುರೀಬೇಕು. ಇನ್ನೊಮ್ಮೆ ಹೆಸರು ಎತ್ತದಂತೆ ಮಾಡಬೇಕು. ನಮ್ಮ ಪತ್ರಿಕೆ ನಲವತ್ತು ಸಾವಿರ ಹೊರಡುತ್ತೆ. ಒಂದು ಮುದ್ರಣಕ್ಕೆ ವೆಚ್ಚಕೊಡಿ; ನೋಡಿ ಹೇಗೆ ಆ ಮನುಷ್ಯನ ಬಲ ಅಡಗಿಸುತ್ತೇವೆ."

"ನಿಮ್ಮ ಅಭಿಮಾನ-ಭಕ್ತಿ ಚೆನ್ನಾಗಿವೆ. ಆದರೆ ಉತ್ತರಕ್ಕೆ ಮಾರುತ್ತರ. ಕೊಡುವುದಕ್ಕಿಂತ ಉತ್ತಮವಾದ ವಿಧಾಯಕ ಕಾರ್ಯ ಮಾಡುವುದು ಲೇಸು ಇಂದು ಜನಾಂಗ ನಿರ್ಮಾಣ, ರಾಷ್ಟ್ರ ನಿರ್ಮಾಣದಂತಹ ಕಾರ್ಯದಲ್ಲಿ ಭಾಗಿಗಳಾಗಲು, ವಿಧಾಯಕ ಮಾರ್ಗದರ್ಶನ ಮಾಡಲು ಎಷ್ಟು ಪತ್ರಿಕೆಗಳು, ಪುಟಗಳಾದರೂ ಸಾಲದು. ಪ್ರತಿಯೊಂದು ಪತ್ರಿಕೆಯವರು ತಮ್ಮ ಪುಟಗಳನ್ನು ಇಂಥ ಕಾರ್ಯಕ್ಕೆ ವಿನಿಯೋಗಿಸುವುದು ಒಳ್ಳೆಯದು. ಆದ್ದರಿಂದ ಅವಹೇಳನ-ಪ್ರಶಂಸೆಗಳಿಗಿಂತಲೂ ವಿಧಾಯಕ ಲೇಖನಗಳನ್ನು ಪ್ರಕಟಿಸಲು ಯತ್ನಿಸಿರಿ...."

ಬಂದವರ ಬಾಯಿ ಕಟ್ಟಿತು. ಕಡೆಗೆ ನುಡಿದರು. "ನೋಡಿ ಅವಹೇಳನದ ಲೇಖನ ಓದುವುದರಿಂದ ಅಭಿಮಾನಿಗಳಿಗೆ ನೋವಾಗುತ್ತದೆ; ಇನ್ನು ಕೆಲವರು ಮನಸ್ಸು ಕೆಡಿಸಿಕೊಂಡು ಭಕ್ತಿ ಕಳೆದುಕೊಳ್ಳುತ್ತಾರೆ." "ವ್ಯಕ್ತಿಗತ ಅಭಿಮಾನ, ವ್ಯಕ್ತಿಪೂಜೆ ಬೆಳೆಸುವುದಕ್ಕಿಂತ ತತ್ತ್ವದ ಅಭಿಮಾನ ಬೆಳೆಯಬೇಕು. ಓರ್ವ

ಮನುಷ್ಯ ಒಂದು ತೆಂಗಿನ ಗಿಡದ ಎಳೆನೀರು ಕುಡಿದಿದ್ದಾನೆ, ಐದಾರು ವರ್ಷ; ಅದರ ಕಾಯಿ ತಿಂದಿದ್ದಾನೆ, ಗುಡಿಗೂ ಒಯ್ದಿದ್ದಾನೆ ಆಗ ಯಾರೋ ಅದು ತೆಂಗಿನ ಗಿಡವಲ್ಲ ಈಚಲಗಿಡ ಎಂದು ನುಡಿಯುತ್ತಾರೆ. ತಾನೇ ಸ್ವತಃ ಅದು ತೆಂಗಿನಗಿಡ ಎಂದು ಕಂಡುಕೊಂಡ ಬಳಿಕ, ಬೇರೆಯವರು ಈಚಲ ಗಿಡ ಎಂದರೆ ನಂಬುವುದು; ನಂಬಿ ನೋಯುವುದು ಮೂರ್ಖತನವಲ್ಲವೆ?

ಇನ್ನು ಮನಸ್ಸು ಕೆಡಿಸಿಕೊಳ್ಳುವವರ ವಿಚಾರ. ಅನ್ಯರು ಗೌರವಿಸಲಿ ಆರಾಧಿಸಲಿ, ಹಾರ-ತುರಾಯಿ ಕೊಡಲಿ ಎಂದೇನೂ ಸಜ್ಜನರು ಕಾರ್ಯೋನ್ಮುಖವಾಗುವುದಿಲ್ಲ. ತಮ್ಮಾತ್ಮ ತೃಪ್ತಿಗಾಗಿ ಕಾರ್ಯಮಾಡುತ್ತಾರೆ. ಮಹೋನ್ನತ ಉದ್ದೇಶದ ತೇರನ್ನು ಸಜ್ಜನರು ಎಳೆಯುವಾಗ ಕೈ ಸೇರಿಸಿ ಎಳೆಯುವವರು ಕೆಲವರು, ನಿಂತು ನೋಡುವವರು ಬಹು ಜನರು. ಅಂಥವರು ಹತ್ತಿರ ಬರದಿದ್ದರೇನು? ನಿಂತು ನೋಡಲಿ. ದೇವರು ಬುದ್ಧಿ ಕೊಟ್ಟದಿನ ಅವರ ಕೆಟ್ಟ ಮನ ನೆಟ್ಟಗಾದೀತು." ಆಗಂತುಕರು ಅಲ್ಲಿಂದ ಎದ್ದು ಹೊರಟರು.

ಮೇಲಿನವೆರಡೂ ಒಂದು ಬಗೆಯ ಸೋಗಾದರೆ ಇನ್ನೊಂದೆರಡು ಬಗೆಯ ಸೋಗುಗಳನ್ನು ಹೇಳುವೆ. ಒಂದು ಊರಲ್ಲಿ ಪ್ರವಚನ ತುಂಬಾ ಚೆನ್ನಾಗಿ ನಡೆದಿತ್ತು. ಸಣ್ಣ ಗಾತ್ರದ ಪತ್ರಿಕೆಯೊಂದನ್ನು ಅಂದರೆ 'ಅಂದಂದೇ ಹುಟ್ಟಿತ್ತು, ಆಂದಂದೇ ಅಳಿಯಿತ್ತು' ಎಂಬಂತಹ ಪತ್ರಿಕೆ ನಡೆಸುವ ಓರ್ವ ಮಹನೀಯ ಬಂದು ಸಾಹಿತಿಯ ಸಂಕಷ್ಟ, ಸಮಾಜದ ನಿರಭಿಮಾನ ಎಲ್ಲ ವಿವರಿಸಿ ಅನ್ನಕ್ಕೂ ಗತಿಯಿಲ್ಲದ ಪರಿಸ್ಥಿತಿಯನ್ನು ಕರುಣಾಜನಕವಾಗಿ ಹೇಳಿದಾಗ ನನ್ನ ಮನಸ್ಸು ಕರಗಿ ಸ್ವಲ್ಪ ದಾನ ಮಾಡಿ ಕಳಿಸಿದೆ. ಮುಂದಿನ ತಮಾಷೆ ಚೆನ್ನಾಗಿದೆ. ಒಂದೆರಡು ದಿನದಲ್ಲಿ ನಾನು ದಾನ ಮಾಡಿದ್ದ ಹಣದಿಂದಲೇ ನಮ್ಮನ್ನು ಬೈದು ಒಂದು ಸಂಚಿಕೆಯನ್ನು ಪ್ರಕಟಿಸಿ ಹಂಚಿದ ಆ ಪುಣ್ಯಾತ್ಮ. ಶಿವನು ಭಸ್ಮಾಸುರನಿಗೆ ವರನೀಡಿದ ಕಥೆ ನನಗೆ ನೆನಪಾಯಿತಾಗ. ನಾನು ಕೊಟ್ಟ (ಅಪಾತ್ರ) ದಾನವನ್ನೇ ಇನ್‌ವೆಸ್ಟ್ ಮಾಡಿ ವ್ಯಾಪಾರ ಮಾಡುವ ಅವನ ಆಲೋಚನೆಗೆ ಆಶ್ಚರ್ಯಪಟ್ಟೆ.

ಮತ್ತೊಂದು ದಿನ, ಒಂದು ಅಂಬಾಸೆಡರ್ ಟ್ಯಾಕ್ಸಿ ಬಂದು ನಿಂತಿತು. ನಾಲ್ಕಾರು ಜನ ಬಂದರು. ಕರವಸ್ತ್ರದಿಂದ ಕಣ್ಣೀರನ್ನೂ ಒರೆಸುವ ಪ್ರಯತ್ನದಲ್ಲಿದ್ದರು. "ನೋಡಿ ತಾಯಿ, ನಮ್ಮದು ದುರ್ದೈವೀ ಸಮಾಜ; ಸಾಹಿತಿಗಳಿಗೆ ಎಳ್ಳಷ್ಟೂ ಬೆಲೆಯಿಲ್ಲ. ಜೀವನ ಪರ್ಯಂತರ ಪತ್ರಿಕೋದ್ಯಮಕ್ಕಾಗಿ ಬಾಳನ್ನು ಮೀಸಲಿಟ್ಟ ಓರ್ವನು ಇಂದು ಹೃದಯಾಘಾತದಿಂದ ಸತ್ತ. ಅವನ ಶವ ಎತ್ತಲೂ ಹಣವಿಲ್ಲ. ಹೆಂಡತಿ ಮಕ್ಕಳು ನಿರ್ಗತಿಕರಾಗಿದ್ದಾರೆ. ಅನೇಕ ಸ್ವಾಮಿಗಳ ಬಳಿಗೆ ಹೋದೆವು. ಅವರೆಲ್ಲ ಉದಾರವಾಗಿ ಕೊಟ್ಟು, ನಿಮ್ಮ ಬಳಿಗೆ ಕಳಿಸಿದ್ದಾರೆ. ನಾವು

Digitalized by e-Sahithya Documentation Forum
Sponsored by Sarayu Foundation Trust

ಎಂದರೆ ಯಾರ ಮನ ಕರಗದು ? ಬುದ್ಧನಿಗೆ ಶವನೋಡಿ ಕರುಳು ಕತ್ತರಿಸಿದಂತೆ ನನ್ನ ಮನಸ್ಸೂ ಕರಗಿ ನೀರಾಯಿತು. ದಾನ ಮಾಡಿದೆ. ತೃಪ್ತಿಯಿಂದ ಎದ್ದು ಹೋದರು. ಆದರೆ ನಂತರ ಇವರ ಬಂಡವಾಳ ತಿಳಿದ ಇನ್ನೊಬ್ಬ ಪತ್ರಿಕೆಯವ ಪ್ರಕಟಿಸಿದ ಎಲ್ಲಾ ಸುಳ್ಳೆಂದು ; ಅಂದು ಇಡೀ ಈ ವೇಷಧಾರಿಗಳು ಟ್ಯಾಕ್ಸಿ ಬಾಡಿಗೆ ಕಳೆದು ಒಂಭತ್ತು ನೂರು ರೂಪಾಯಿಗಳನ್ನು ಸಂಪಾದಿಸಿದ್ದರಂತೆ ! ಕೇಳಿ ದಿಗ್ಭ್ರಾಂತಿಯಾಯಿತು.

ಇಂಥ ಎಲ್ಲ ಅನುಭವ ಮನುಷ್ಯನಲ್ಲಿರುವ ಅನುಕಂಪೆಯ ಜಲವನ್ನೇ ಬತ್ತಿಸಿ ಬಿಡುತ್ತವೆ. ಮನಸ್ಸನ್ನು ಕಲ್ಲುಮಾಡಿ ಬಿಡುತ್ತವೆ ಮನುಷ್ಯ ಬದುಕಲಿಕ್ಕೆ ಸಂಪಾದಿಸ ಬೇಕು ನಿಜ, ಆದರೆ ತನ್ನ ಸಂಪಾದನೆಗಾಗಿ ಅನ್ಯರ ತೇಜೋವಧೆ ಮಾಡುವುದು, ಶೋಷಣೆ ಮಾಡುವುದು ಯಾವ ನ್ಯಾಯ ? ದೇವರು ಮೆಚ್ಚುವ ಮಾತಂತಿರಲಿ ; ಇಂಥ ವರು ದೇವರನ್ನೇ ಒಪ್ಪದವರು. ಆದರೆ ತನ್ನಂತರಾತ್ಮವಾದರೂ ಮೆಚ್ಚೀತೆ ? ★

ಒಂದು ಪ್ರಕಟಣೆ: ಮಾನವೀಯ ಕರ್ತವ್ಯಕ್ಕೆ ಕರೆ

ಕೆಲವಾರು ವರ್ಷಗಳ ಹಿಂದೆ ತುಮಕೂರಿನ ಬಳಿ ನಡೆದ ಭೀಕರ ಬಸ್ ಅಪಘಾತ ದಲ್ಲಿ ತೀರಿಹೋದ ತಾಯಿ ತಂದೆಗಳನ್ನು ಕಳೆದುಕೊಂಡು ಅನಾಥವಾಗಿರುವ ಎರಡು ಮಕ್ಕಳು 1. ನವೀನ ಕುಮಾರ (5 ವರ್ಷ), 2. ಅಜಿತ ಕುಮಾರಿ ($3\frac{1}{2}$ ವರ್ಷ)

ಈ ಮಕ್ಕಳನ್ನು ಈ ವರೆಗೆ ಸಾಕುತ್ತಿರುವ ಶ್ರೀಮತಿ ತಾರಾ ಬಸಪ್ಪ ಬೆಂಗಳೂರು ಯಾರಿಗಾದರೂ ಅವರನ್ನು ದತ್ತು ಕೊಡಬಯಸಿದ್ದಾರೆ.

ಮಕ್ಕಳೆರಡೂ ತುಂಬಾ ಮುದ್ದಾಗಿದ್ದು, ತೇಜಸ್ವಿಗಳಾಗಿ, ಸಾತ್ವಿಕರಾಗಿ ಇದ್ದಾರೆ. ಇದರಲ್ಲಿ ಹೆಣ್ಣು ಮಗುವನ್ನು ಉತ್ತಮ ಶಿಕ್ಷಣ ಕೊಡಲಿಕ್ಕೆ ವಿಶ್ವಕಲ್ಯಾಣ ಮಿಶನ್ ದತ್ತು ತೆಗೆದುಕೊಳ್ಳ ಬಯಸಿದೆ. ಆದ್ದರಿಂದ ಈ ಮಕ್ಕಳಿಗೆ ಯಾವುದೇ ರೀತಿ ಸಂಬಂಧಿಸಿದ ವ್ಯಕ್ತಿಗಳಿದ್ದು ಅವರದ್ದು ಏನಾದರೂ ಆತಂಕವಿದ್ದರೆ ಪತ್ರಮುಖೇನ ತಿಳಿಸಬೇಕು.

ಬಾಲಕ ನವೀನನು ಲಕ್ಷಣವಂತನೂ ಸಾತ್ವಿಕನೂ ಇರುವ ಕಾರಣ ಯಾರಾ ದರೂ ಮಕ್ಕಳಿಲ್ಲದ ಶ್ರೀಮಂತರು ದತ್ತು ತೆಗೆದುಕೊಳ್ಳುವದಿದ್ದರೆ ತಿಳಿಸಬೇಕು. ತಮಗೆ ಸ್ವತಃ, ಮಕ್ಕಳಿಲ್ಲದ ತಂದೆತಾಯಿಯರಿಗೆ, ಆಸ್ತಿಪಾಸ್ತಿ ಅನುಕೂಲವಿರುವ ಮತ್ತು ಮಕ್ಕಳನ್ನು ಮಮತೆಯಿಂದ ಸಾಕ ಬಯಸುವವರಿಗೆ ಮಾತ್ರ ಈ ಮಕ್ಕಳನ್ನು ಕೊಡಲು ಇಚ್ಛಿಸಿದ್ದಾರೆ. ಆಸಕ್ತರಾದವರು ಕಲ್ಯಾಣ ಕಿರಣ ಕಾರ್ಯಾಲಯ ದೊಡನೆ ವ್ಯವಹರಿಸಬೇಕು. ದತ್ತು ತೆಗೆದುಕೊಳ್ಳಬೇಕಾದಲ್ಲಿ ಮಕ್ಕಳ ಸಾಕು ತಾಯಿ ಅಧಿಕೃತವಾಗಿಯೇ ಬಿಟ್ಟುಕೊಡುತ್ತಾರೆ.

ಕಲ್ಯಾಣ ಕಿರಣದ ಓದುಗರಲ್ಲಿ ಒಂದು ಮನವಿ

ಆತ್ಮೀಯ ಓದುಗರೇ,

1981ರ ಜೂನ್ "ಕಲ್ಯಾಣ ಕಿರಣ" ಸಮಯಕ್ಕೆ ಸರಿಯಾಗಿ ನಿಮ್ಮೆಲ್ಲರ ಕೈಸೇರಲಿಲ್ಲ. 'ಕಲ್ಯಾಣ ಕಿರಣ' ಮಾಸಪತ್ರಿಕೆ ಆರಂಭವಾದಂದಿನಿಂದ ಈ ಬಗೆಯ ಲೋಪವಾಗಿದ್ದು ಇದೇ ಮೊದಲಬಾರಿಗೆ. ಇದಕ್ಕೆ ಮುಖ್ಯ ಕಾರಣ ನಾನೇ. ಸಂಜೆಯ ವೇಳೆಯಲ್ಲಿ ಮಲ್ಲೇಶ್ವರಂನಲ್ಲಿ ಪ್ರವಚನ ನಡೆಯುತ್ತಿತ್ತು. ಹಗಲು ಇಡೀ ಜನತೆಯು ಸಂದರ್ಶನಕ್ಕೆ ಬರುವುದು. ಜೊತೆಗೆ ಶಾಲೆಗೆ ಪ್ರವೇಶ ದೊರಕಿಸಿಕೊಳ್ಳುವ ವರ ಒತ್ತಡ ಬೇರೆ. ಶಾಲೆ, ವಸತಿಗೃಹ ಮತ್ತು ಪ್ರಸಾದ ನಿಲಯಗಳ ಕಟ್ಟಡದ ಕೆಲಸ ಬೇರೆ ತೀವ್ರಗತಿಯಿಂದ ಸಾಗುತ್ತಿತ್ತು. ಹೀಗಾಗಿ 'ಕಲ್ಯಾಣ ಕಿರಣ'ಕ್ಕೆ ವೇಳೆ ಒದಗಿಸುವುದೇ ಸಾಧ್ಯವಾಗಲಿಲ್ಲ : ಪರಿಣಾಮವಾಗಿ ಅನೇಕ ಓದುಗರಿಗೆ ಕೋಪ ಬಂದಿರಲಿಕ್ಕೂ ಸಾಕು. ಅಭಿಮಾನಿ ಸದ್ಭಕ್ತರು ನಿರಾಶೆಯಿಂದ ನೊಂದಿರಲಿಕ್ಕೂ ಸಾಕು ಈ ಎಲ್ಲಕ್ಕೂ ಪೂರ್ಣವಿರಾಮ ನೀಡುವಂತೆ, ನಿಮ್ಮನ್ನು ದೀರ್ಘಕಾಲ ಕಾಯಿಸಿದ ಬಳಿಕ 'ಕಲ್ಯಾಣ ಕಿರಣ' ಕೈಸೇರುತ್ತಿದೆ. ಬರಮಾಡಿಕೊಂಡು ಓದಿರಿ. ನಿಮ್ಮ ಸಹಕಾರಕ್ಕಾಗಿ ಒಳಿತನ್ನು ಹಾರೈಸುತ್ತೇವೆ.

ಸಂಪಾದಕರು : "ಕಲ್ಯಾಣ ಕಿರಣ"

ದೊಡ್ಡವರ ಮಾತು

ಬಡತನಕ್ಕೆ ಕಾರಣ ಅನೇಕ, ಗಿಡಗಳಿಗೆ ಹಲವು ಬೇರುಗಳಿದ್ದಂತೆ. ಆದರೆ ಅಜ್ಞಾನ ಮತ್ತು ಮೈಗಳ್ಳತನ ತಾಯಿ ಬೇರುಗಳಂತೆ ಮುಖ್ಯ ಕಾರಣಗಳು.

— ಲಿಂಡನ್ ಜಾನ್ಸನ್

ಸಾರ್ವಜನಿಕ ಅಭಿಪ್ರಾಯದಷ್ಟು ಬೇರಾವ ಶಸ್ತ್ರವೂ ಮನುಷ್ಯನನ್ನು ದುರ್ಬಲ ವಾಗಿ ಮಾಡಲಾರದು. — ಹೆನ್ರಿ ವಾರ್ಡ್ ಬೀಚರ್

ಉತ್ಸಾಹ ಕಳೆದುಕೊಂಡವನಷ್ಟು ದಿವಾಳಿ ಎದ್ದ ಮನುಷ್ಯ ಬೇರೊಬ್ಬನಿಲ್ಲ. ಉತ್ಸಾಹವನ್ನುಳಿದು ಬೇರೆಲ್ಲ ಕಳೆದುಹೋದರೂ ಮನುಷ್ಯ ಮತ್ತೆ ಏಳಿಗೆ ಹೊಂದಬಲ್ಲ.

—ಎಡ್ವಿನ್ ಆರ್ನಾಲ್ಡ್

Digitalized by e-Sahithya Documentation Forum
Sponsored by Sarayu Foundation Trust

ವಿದ್ಯಾಕಾಂಕ್ಷಿಗಳಾದ ಪಾಲಕರಲ್ಲಿ ಒಂದು ನಿವೇದನೆ

ಮಾನ್ಯರೇ,

1981ನೇ ಸಾಲಿಗೆ ಶ್ರೀ ಬಸವ ಭಾರತಿ ಉನ್ನತ ಪ್ರೈಮರಿ ಮತ್ತು ಪ್ರೌಢ ಶಾಲೆಯ ತರಗತಿಗಳೂ ಸೇರಿ 5, 6, 7, 8 ಮತ್ತು 9ಕ್ಕೆ ಅನೇಕ ಬಾಲಕರಿಗೆ ಪ್ರವೇಶ ನೀಡಿದ್ದೇವೆ. ವಿಶ್ವಗುರು ಬಸವಣ್ಣನವರ ದಯದಿಂದ, ಅನೇಕ ಸದ್ಭಕ್ತರ ಸಹಾಯದಿಂದ, ಈ ವರ್ಷ ಶಾಲೆಗೆ ಸೇರಿದ ಅನೇಕ ಮಾತಾಪಿತೃಗಳ ಸಹಾಯದಿಂದ ಶಾಲೆಯ ಕಟ್ಟಡ, ವಸತಿಗೃಹ ಮತ್ತು ಅಡಿಗೆ-ಊಟದ ಮನೆ—ಇವು ಸಿದ್ಧವಾಗಿವೆ. ನಮಗೆ ಲಭ್ಯವಿರುವ ಸ್ಥಳಾವಕಾಶಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿದ್ದೇವೆ. ಹೀಗಾಗಿ ಬಹಳಷ್ಟು ಜನ ಪಾಲಕರನ್ನು ನಿರಾಶೆಗೊಳಿಸಬೇಕಾಗಿ ಬಂದಿದೆ. ವಿದ್ಯಾರ್ಜನೆ ಬಯಸಿ ಬಂದ ವಿದ್ಯಾರ್ಥಿಗಳನ್ನು ವಾಪಸ್ಸು ಕಳಿಸಬೇಕಾಯಿತು. ಮುಂದಿನ ವರ್ಷಕ್ಕೆ ಹೆಚ್ಚಿನ ಜನಕ್ಕೆ ಅವಕಾಶವಾಗುವಂತೆ ಕಟ್ಟಡಗಳನ್ನು ನಿರ್ಮಾಣ ಮಾಡಲೆಳಸಿದ್ದು, ಶ್ರದ್ಧಾವಂತ ಪ್ರಯತ್ನ ಗೈಯುತ್ತಿದ್ದೇವೆ.

ಈಗಾಗಲೇ ಪ್ರವೇಶ ನೀಡಿರುವ ಬಾಲಕರಿಗೆ ಸರ್ವಾಂಗೀಣ ಬೆಳವಣಿಗೆಗೆ ಸಹಕಾರಿಯಾಗುವ ಯೋಜನೆ ಹಾಕಿದ್ದು, ಇದರಲ್ಲಿ ವ್ಯವಸ್ಥಾಪಕರ, ಶಿಕ್ಷಕರ ಕರ್ತವ್ಯದೊಡನೆ ಪಾಲಕರ ಸಹಕಾರವೂ ಅತ್ಯಾವಶ್ಯಕವಾಗಿದೆ. ನಿಮ್ಮ ಮಕ್ಕಳನ್ನು ವ್ಯಕ್ತಿತ್ವವುಳ್ಳ, ಧರ್ಮ-ಸಂಸ್ಕೃತಿಯ ಸಂಸ್ಕಾರ ಪಡೆದ, ಉತ್ಕೃಷ್ಟಮಟ್ಟದ ವಿದ್ಯಾವಂತರನ್ನು ಮಾಡಬಯಸುವ ನಮ್ಮ ಪ್ರಯತ್ನಕ್ಕೆ ಪಾಲಕರ ಸಂಪೂರ್ಣ ಸಹಕಾರ, ಸಹಾನುಭೂತಿ, ಸಹಾಯಗಳನ್ನು ನಿರೀಕ್ಷಿಸುತ್ತೇವೆ.

ವಿಶ್ವಕಲ್ಯಾಣ ಮಿಷನ್ ವಿದ್ಯಾಸಂಸ್ಥೆ
ರಾಜಾಜಿನಗರ, ಬೆಂಗಳೂರು.

Education is an ornament in prosperity and a refuse in adversity.

ವಿದ್ಯೆ ಎನ್ನುವುದು ಸಂಪತ್ತಿನ ಕಾಲದಲ್ಲಿ ಅಲಂಕಾರ. ಆಪತ್ತಿನ ಕಾಲದಲ್ಲಿ ಪರಮ ಆಶ್ರಯ.

— ಅರಿಸ್ಟಾಟಲ್

ಶಿಕ್ಷಣ ಪಡೆಯುವ ಕಾಲದಲ್ಲಿ ಕಹಿ, ಶ್ರಮದಾಯಕ; ದುಡಿಯುವ ಕಾಲದಲ್ಲಿ ಸಿಹಿ, ಸುಖದಾಯಕ.

— ಅರಿಸ್ಟಾಟಲ್

ವಿದ್ಯಾಲಯಗಳು, ಒರಟು ಕಲ್ಲುಗಳನ್ನು ಕಟೆಯುವ ಶಿಲ್ಪಾಗಾರಗಳಂತೆ.

— ರಾಬರ್ಟ್ ಇಂಗರ್‌ಸಾಲ್

ಸ್ಫುರಣ - ಕಿರಣ

ಮಾತಾಜಿ

1. ಅತಿ ಮಮತೆ ಹಾನಿಕರ

ಬಸವ ಗಂಗೋತ್ರಿಯ ಆವರಣದಲ್ಲಿ ನಾವು ವಾಸಿಸುವ ಕಟ್ಟಡದ ಹತ್ತಿರದಲ್ಲಿ ಒಂದು ಸುಂದರವಾದ ಕೆಂಕೇಸರಿ ಮರ (ಕೆಂಪುಬಣ್ಣದ ಚಿಟ್ಟೆಯಂತಹ ಹೂವು ಅರಳಿಸುವ ವೃಕ್ಷ)ವಿತ್ತು. ನಾವು 1978ರಲ್ಲಿ ಶ್ರೀ ಅಶೋಕ್‌ಕುಮಾರ್‌ರಿಂದ ಈ ಜಾಗವನ್ನು ಕೊಂಡುಕೊಳ್ಳುತ್ತಿದ್ದಂತೆಯೇ ಅದರ ಮೇಲೆ ನಮ್ಮ ಕಣ್ಣು ಬಿತ್ತು. ಛತ್ರಿಯಂತೆ ದಟ್ಟವಾದ ಎಲೆಗಳಿಂದ ನೆರಳನ್ನು ಕೆಡವಿತ್ತು. ಆ ನೆರಳಿನಲ್ಲಿ ಅನೇಕರು ಕೂತುಕೊಳ್ಳಲು ಅನುಕೂಲವಾಗುವುದೆಂದು ಅದರ ಸುತ್ತಲೂ ಕಟ್ಟೆಯನ್ನು ಕಟ್ಟಿದೆವು. ಸುತ್ತಲೂ ಸೈಜುಕಲ್ಲು ಇರಿಸಿ ಮಧ್ಯೆ ಮಣ್ಣು ತುಂಬಿ, ಪ್ಲ್ಯಾಸ್ಟರ್ ಮಾಡಿದಾಗ ಅಲ್ಲಿ ಕುಳಿತುಕೊಳ್ಳಲು ಅನುಕೂಲವಾಯಿತು. ಆದರೆ ಒಂದು ವರ್ಷದಲ್ಲೇ ಅದು ಬಾಡತೊಡಗಿತು. ಈಗ ಅದು ಚಿಗುರಲೇ ಇಲ್ಲ. ನಮಗೆ ಅಚ್ಚರಿಯಾಯಿತು. ಕಟ್ಟೆಯಿಲ್ಲದೆ ಇದ್ದಾಗ ಸೊಂಪಾಗಿ ಬೆಳೆದುದು, ವಿಶೇಷ ಕಾಳಜಿವಹಿಸಿ ಕಟ್ಟೆ ಹಾಕುತ್ತಿದ್ದಂತೆಯೇ ಬಾಡಿಬಿಟ್ಟಿತ್ತು. ಛತ್ರಿಯಂತೆ ಸುಂದರವಾಗಿ ಹರಡಿ ಬೆಳೆದಿದ್ದ ವೃಕ್ಷ, ಬಾಡಿ ನಿಂತುದನ್ನು ಕಂಡಾಗ ಜೀವವು ಮಮ್ಮಲ ಮರುಗಿತ್ತು. ತಕ್ಷಣವೇ ಒಂದು ವಿಚಾರವೂ ಸ್ಫುರಿಸಿತು. ಮಕ್ಕಳ ಸ್ವಾಭಾವಿಕವಾದ ಬೆಳವಣಿಗೆಗೆ ಅನುವಾಗುವಂತಹ ಪ್ರೀತಿ-ವಾತ್ಸಲ್ಯ ತಾಯಿತಂದೆ ತೋರಿದರೆ ಸಾಕು ; ಆದರೆ ಕೆಲವು ತಾಯಿ ತಂದೆಯರು ಅತೀವವಾಗಿ ಮಕ್ಕಳನ್ನು ಮುದ್ದಿಸಿಬಿಡುವುದರಿಂದ, ಅವರುಗಳು ಉಸಿರುಗಟ್ಟಿಸುವ ವಾತಾವರಣ ನಿರ್ಮಿಸಿ ಮಕ್ಕಳ ಭವಿಷ್ಯತ್ತನ್ನೇ ಹಾಳುಮಾಡಿಬಿಡುತ್ತಾರೆ. ಕೆಲವು ವೃಕ್ಷಗಳು ಕಟ್ಟೆ ಹಾಕಿದರೂ ಚೆನ್ನಾಗಿ ಬೆಳೆಯುತ್ತವೆ. ಪ್ರಸಂಗ ಬಂದರೆ ಕಟ್ಟೆಯನ್ನೂ ಸೀಳಿ ಬೆಳೆಯುತ್ತವೆ. ಇನ್ನು ಕೆಲವು ಮಮತೆಯಿಂದ ಕಟ್ಟೆ ಹಾಕಿದರೂ ಬಾಡಿಬಿಡುತ್ತವೆ. ಹಾಗೆಯೇ ವಿದ್ಯೆ, ವ್ಯಕ್ತಿತ್ವ ನಿರ್ಮಾಣ ಇಂಥವುದರಲ್ಲಿ ಆಸಕ್ತಿಯುಳ್ಳವರು ಮಮತೆಯನ್ನು ಪೂರಕವಾಗಿ ಬಳಸಿಕೊಂಡು ಬೆಳೆಯುತ್ತಾರೆ. ಇನ್ನು ಕೆಲವರು ಅದರಲ್ಲಿ ಸೀಮಿತರಾಗಿ, ಬಾಡುತ್ತಾರೆ. ಯಾವ ಗಿಡಕ್ಕೆ ಕಟ್ಟೆ ಹಾಕಬೇಕು ;

Digitalized by e-Sahithya Documentation Forum
Sponsored by Sarayu Foundation Trust

ಯಾವುದಕ್ಕೆ ಹಾಕಬಾರದು ಎಂಬ ಪರಿಜ್ಞಾನ ನಮಗಿರಬೇಕಾದಂತೆ, ಮಕ್ಕಳ ಸ್ವಭಾವ ಅರಿತು ಮಮತೆ ತೋರಬೇಕಾದ್ದು ತಾಯಿ ತಂದೆಯರ ಕರ್ತವ್ಯ. ಅವರ ಮಮತೆಯೇ ಮಕ್ಕಳಿಗೆ ಮುಳುವಾಗಬಾರದು.

2. ಸಂಪರ್ಕ ರಹಿತತೆ

ಸ್ನಾನದ ಕೋಣೆಯಲ್ಲಿ ಬಾಯಿಲರ್ ಇರುವುದಷ್ಟೆ. ಅದು ಏಕೋ ಆಗಾಗ ಷಾಕ್‌ಅನ್ನು ಮಾಡುತ್ತಿತ್ತೆಂದು ನೀರು ಕಾಯ್ದಾದ ಮೇಲೆ ಪ್ಲಗ್ಗಿನ ಸಂಪರ್ಕ ತೆಗೆದು ನೀರನ್ನು ತೆಗೆದುಕೊಳ್ಳಲಾಗುತ್ತಿತ್ತು. ಹಾಗೆಯೇ ಒಂದು ದಿನ ಸಂಪರ್ಕ ತೆಗೆಯ ಲಾಗಿತ್ತು. ಆದರೆ ಮರುದಿನ ಬೆಳಗಿನ ಜಾವದಲ್ಲಿ ಬಂದು ಸ್ವಿಚ್ ಆನ್ ಮಾಡಿದೆ. ಅದರ ಕುರುಹಾಗಿ ಕೆಂಪು ದೀಪವೂ ಉರಿಯತೊಡಗಿತು. ಶೌಚಕ್ಕೆ ಹೋಗಿ ಬಂದು, ಸ್ನಾನಕ್ಕೆ ನೀರು ಬಳಸಲು ನೋಡಿದರೆ ನೀರು ಎಷ್ಟೂ ಕಾಯ್ದಿಲ್ಲ. ಆಶ್ಚರ್ಯವಾಗಿ ಗಮನಿಸಿದರೆ ಪ್ಲಗ್ಗಿಗೆ ಪಿನ್ನುಗಳನ್ನು ಹೊಂದಿಸಿ ಸಂಪರ್ಕ ಕಲ್ಪಿಸಿಯೇ ಇರಲಿಲ್ಲ, ಸ್ವಿಚ್ ಮಾತ್ರ ಹಾಕಲ್ಪಟ್ಟಿತ್ತು. ಆಗೊಂದು ವಿಚಾರ ಸ್ಫುರಿಸಿತು. ಕೆಲವರು ಶಾಸ್ತ್ರಗಳನ್ನು ಓದಿ ಓದಿ ವಿಪರೀತ ಜ್ಞಾನವನ್ನು ಸಂಪಾದಿಸುತ್ತಾರೆ, ಅದು ಪುಸ್ತಕಜ್ಞಾನ, ಶಾಸ್ತ್ರಜ್ಞಾನವಾಗಿ ಅವರಲ್ಲಿ ಇರುತ್ತದೆ. ಆದರೆ ಅದನ್ನು ಪ್ರಾಯೋಗಿಕವಾಗಿ ಬೋಧೆ, ಬರವಣಿಗೆ, ಸಮಾಜ ಪರಿವರ್ತನೆ ಮುಂತಾದವುಗಳ ಮೂಲಕ ಸಂಪರ್ಕ ಕಲ್ಪಿಸಿ ಹರಿಯಬಿಡದಿದ್ದರೆ ಆ ಜ್ಞಾನವೆಲ್ಲ ಸ್ವಿಚ್‌ನಲ್ಲಿ ಅಡಗಿ ಕುಳಿತ ನಿಷ್ಕ್ರಿಯ ವಿದ್ಯುತ್ತಿನಂತಿರುತ್ತ, ಅನ್ಯರಿಗೆ ಏನೂ ಪ್ರಯೋಜನವನ್ನುಂಟುಮಾಡುವುದಿಲ್ಲ, ಜನಜಾಗೃತಿಯನ್ನೂ ಉಂಟುಮಾಡುವುದಿಲ್ಲ.

3. ತೋರಿಕೆ-ಅರಿಯುವಿಕೆ

ಪೂಜೆಗಾಗಿ ಒಂದು ವಿಭೂತಿಗಟ್ಟಿ ಬಳಸುತ್ತೇವಷ್ಟೆ. ನಾವು ಬಳಸುತ್ತಾ ಇರುವುದು ದೊಡ್ಡ ಗಾತ್ರದ ಷಟ್ಕೋನಾಕಾರದ ಸುಂದರವಾದ ಶುಭ್ರವಾದ ಗಟ್ಟಿ. ಒಂದು ದಿವಸ ನಾನು ಸ್ನಾನ ಮುಗಿಸಿ ಪೂಜಾಗೃಹಕ್ಕೆ ಬಂದೆ; ಆ ಗಟ್ಟಿ ಸೀಳಿದಂತೆ ಒಂದು ಗೆರೆಯು ಆ ವಿಭೂತಿ ಗಟ್ಟಿಯ ನೆತ್ತಿಯ ಮೇಲೆ ಕಂಡಿತು. ನನಗೆ ತೀವ್ರವಾಗಿ ವ್ಯಥೆಯಾಯಿತು. ಎಷ್ಟು ದೊಡ್ಡ ಮತ್ತು ಸುಂದರ ಗಟ್ಟಿ ಸೀಳಿ ಹೋಯಿತೆ? ಎಂದು ಬೇಸರಪಟ್ಟು ಕುಳಿತುಕೊಂಡು ಅದನ್ನು ತೆಗೆದುಕೊಂಡೆ. ಗಟ್ಟಿಯನ್ನು ಪರೀಕ್ಷಿಸಿದಾಗ ಕೆಳಗಿನಿಂದ ಎಲ್ಲೂ ಸೀಳಿರಲಿಲ್ಲ. ಒಂದು ತೆಂಗಿನ ನಾರಿನ ತುಂಡು ಗಟ್ಟಿಯ ಮೇಲ್ಭಾಗದಲ್ಲಿ ಕುಳಿತಿದ್ದು, ಅದು ದೂರಕ್ಕೆ ಸೀಳಿದ ಭ್ರಮೆಯನ್ನು ಉಂಟು ಮಾಡುತ್ತಿತ್ತು. ಆಗ ಸಮಾಧಾನವಾಗಿ, ಆ ನಾರಿನ ತುಂಡನ್ನು ತೆಗೆದು ಎಸೆದೆ. ಗಟ್ಟಿ

ಚೆನ್ನಾಗಿಯೇ ಇತ್ತು. ಆಗ ಒಂದು ವಿಚಾರ ಸ್ಫುರಿಸಿತು. ಕೆಲವರು ಧೂರ್ತರು, ಸ್ವಾರ್ಥ ಸಾಧಕರು, ಕುಹಕಿಗಳು ತಮ್ಮ ಮೋಸ ಏನೂ ನಡೆಯದೆ ಸಂಘ-ಸಂಸ್ಥೆಗಳಿಂದ ಹೊರಹಾಕಲ್ಪಟ್ಟಾಗ, ಸಂಸ್ಥೆಯೇ ನಾಶವಾಯಿತೇನೋ ಎಂಬ ಭ್ರಮೆ ಜನಕ್ಕೆ ಬರುವಂತೆ ಅಪಪ್ರಚಾರ ಮಾಡುತ್ತಾರೆ. ಕೆಲವು ದೂರದ ಜನ ಹಾಗೆಂದು ತಿಳಿದು, ಭ್ರಾಂತ್ಯಾತ್ಮಕ ದುಃಖಕ್ಕೆ ಒಳಗಾಗುತ್ತಾರೆ. ಆದರೆ ನಂತರ ಪರಿಶೀಲಿಸಿದಾಗ ಅಂಥ ಅನಾಹುತವೇನೂ ಆಗಿರದೆ, ಸಂಸ್ಥೆ ಸ್ವಾಭಾವಿಕವಾಗಿಯೇ ನಡೆಯುತ್ತಿರುತ್ತದೆ.

4. ಹುಳುತಿಂಪ ಕೊಂಬೆ

ಅಂದು ಮೇ 29, 1981; ಸಿಡಿಲೆರಗಿ ಪಾರಾದ ದಿನ. ಅಂದು ಬಸವ ಗಂಗೋತ್ರಿಯ ಆವರಣದಲ್ಲಿ ಅನೇಕ ಕಡೆ ಆಘಾತವಾಗಿತ್ತು. ಪಪ್ಪಾಯಿ ಗಿಡಗಳಂತೂ ಸಾಕಷ್ಟು ಬಿದ್ದು ಬಿಟ್ಟಿದ್ದವು. ಒಂದು ಬೃಹತ್ತಾದ ನೀಲಗಿರಿ ವೃಕ್ಷದ ಬೃಹತ್ತಾದ ಕೊಂಬೆಯೊಂದು ಹಾರಿ ಬಿದ್ದು ಗೇಟನ್ನು ಉರುಳಿಸಿತ್ತು. ಮಳೆಗಾಳಿ ನಿಂತಾದ ಮೇಲೆ ಎಲ್ಲಾ ನೋಡಿಕೊಂಡು ಬಂದೆವು. ನೀಲಗಿರಿ ವೃಕ್ಷವನ್ನು ಗಮನಿಸುತ್ತಾ ನಿಂತೆ. ಯಾವ ಕೊಂಬೆ ಬಿದ್ದಿತ್ತೋ ಅದರ ತಳವನ್ನು ಪರೀಕ್ಷಿಸಿದೆ. ಗಿಡದೊಡನೆ ಕೊಂಬೆ ಬೆಸೆಯಲ್ಪಟ್ಟಿರುವ ಭಾಗದಲ್ಲಿ ಹುಳುತಿಂದಂತಿತ್ತು. ಅಲ್ಲಿ ಪೊಳ್ಳುತನವಿದ್ದ ಕಾರಣದಿಂದಲೇ ಬಿರುಗಾಳಿ ಬೀಸಿದಾಗ ಆ ಕೊಂಬೆ ಮಾತೃವೃಕ್ಷದ ಬಂಧನ ಹರಿದುಕೊಂಡು ಬಿದ್ದಿತ್ತು. ಗಿಡ ಮಾತ್ರ ಯಥಾ ಪ್ರಕಾರ ಗಟ್ಟಿಯಾಗೇ ನಿಂತಿತ್ತು.

ಇದನ್ನು ನೋಡುತ್ತಾ ನಿಂತ ನನಗೆ ಒಂದು ವಿಚಾರ ಸ್ಫುರಿಸಿತು. ಕಷ್ಟ ಕಾರ್ಪಣ್ಯ, ನಷ್ಟ-ನಿಷ್ಠೂರಗಳ ಬಿರುಗಾಳಿ ಬೀಸಿದಾಗ ಎಷ್ಟೋ ಜನ ಹಿತೈಷಿಗಳು, ಸ್ನೇಹಿತರು, ಬಂದು ಬಾಂಧವರು ಎಂಬ ರೆಂಬೆ ಕೊಂಬೆಗಳು ಕತ್ತರಿಸಿ ಬೀಳುವುದುಂಟು. ನೆಪ ಮಾತ್ರಕ್ಕೆ ಓಲೈಸಿಕೊಂಡು, ಆಶ್ರಯಿಸಿಕೊಂಡು ಇರುವ ಅನೇಕರು ಎಡರು ತೊಡರಿನ ಗಾಳಿ ಬೀಸಿದಾಗ ಪಟಪಟನೆ ಉದುರಿಬಿಡುವುದುಂಟು. ಹುಳು ಆಡಿದ ಕೊಂಬೆಗಳೇ ಬೇಗನೇ ಉದುರುವಂತೆ, ನಿಜ ಸ್ನೇಹಿತರಲ್ಲದವರು ಕಷ್ಟಗಳ ಕಾಲದಲ್ಲಿ ತೊರೆದು ಬಿಡುವರು.

5. ಗೆದ್ದಲಿ ಹಿಡಿದ ಗಿಡ

ಬಸವ ಗಂಗೋತ್ರಿ ಆವರಣದಲ್ಲಿ ಬಲಿತು ನಿಂತ ಕೆಲವು ಹುಣಿಸೆ ಗಿಡಗಳಿವೆ. ಅಲ್ಲಿ ಒಣಗಿದ ಸೌದೆ ಹೊಡೆಯುತ್ತ ಇದ್ದ ಓರ್ವ ಕೊಡಲಿಯನ್ನು ಅಲ್ಲೇ ಎಸೆದು ಊಟಕ್ಕೆ ಹೋದಾಗ, ಶಾಲೆಯ ವಿದ್ಯಾರ್ಥಿಯೊಬ್ಬ ಅಡ್ಡಾಡುತ್ತ ಬಂದು ಬಿದ್ದಿದ್ದ ಕೊಡಲಿಯಿಂದ ಜೀವಂತ ವೃಕ್ಷಕ್ಕೆ ಏಟನ್ನು ಹಾಕುತ್ತಿದ್ದ. ಗಮನಿಸಿದ ನಾನು ಬೈದು

Digitalized by e-Sahithya Documentation Forum
Sponsored by Sarayu Foundation Trust

ಕಳಿಸಿದೆ. ಗಿಡದ ತೊಗಟೆ ಕಿತ್ತು ಗಾಯವಾದಂತೆ ಕಾಣುತ್ತಿತ್ತು. ನನ್ನ ಜೀವ ತುಂಬಾ ಮರುಗಿತು. ಆದರೆ ನಾಲ್ಕಾರು ದಿವಸಗಳಲ್ಲೇ ತೊಗಟೆ ಮತ್ತೆ ಬೆಳೆಯ ತೊಡಗಿತ್ತು. ಇನ್ನೊಮ್ಮೆ ಆ ವೃಕ್ಷದ ಕೊಂಬೆ ಕಟ್ಟಡ ಒಂದಕ್ಕೆ ಆತಂಕವಾಗುತ್ತಿದೆಯೆಂದು ಸ್ವಲ್ಪ ಭಾಗ ಕತ್ತರಿಸಬೇಕಾಯಿತು. ಆದರೂ ವೃಕ್ಷ ತನ್ನ ಪಾಡಿಗೆ ತಾನು ಕುಲುಕುಲು ನಗುತ್ತಿತ್ತು. ಇದರ ಮೇಲೆ ಚಿಂತನೆ ಮಾಡುತ್ತ ನಾನಿರುವಾಗ ಒಂದು ವಿಚಾರ ಸ್ಫುರಿಸಿತು. ವಿಸ್ತಾರವಾಗಿ ಹಬ್ಬಿದ, ಕೆಳಗೆ ಬೇರುಬಿಟ್ಟಿಳಿದ ವೃಕ್ಷವನ್ನು ಹೊರಗಿನಿಂದ ಅನೇಕರು ಕಡಿಯಬಹುದು; ದಾರಿಹೋಕ ತುಂಟ ಮಕ್ಕಳು ಗೀಚಬಹುದು, ಕಚ್ಚು ಹಾಕಬಹುದು. ಇಷ್ಟೆಲ್ಲಾ ಆದರೂ ಗಿಡವು ಆಂತರಂಗಿಕವಾಗಿ ಸುಭದ್ರವಾಗಿದ್ದರೆ ಮತ್ತೆ ಹಸಿರು ತಳೆದು ವಿಜೃಂಭಿಸುತ್ತದೆ. ನವ ಚೇತನ ಪಡೆದು ನಗುತ್ತದೆ. ಆದರೆ ವೃಕ್ಷದ ಒಳಭಾಗವೇನಾದರೂ ಗೆದ್ದಲಿ ಹಿಡಿದು ಪೊಳ್ಳಾಗಿದ್ದರೆ ಯಾರು ಕಡಿಯುವುದೂ ಬೇಕಾಗಿಲ್ಲ. ಒಂದು ಸಣ್ಣ ಬಿರುಗಾಳಿಗೆ ಧಡಾರನೆ ಕತ್ತರಿಸಿ ಬೀಳುತ್ತದೆ.

ಇದೇ ರೀತಿ ಮನುಷ್ಯನ ವ್ಯಕ್ತಿತ್ವವೂ ಸಹ. ದಿಟ್ಟ, ಸತ್ಯ, ಆದರ್ಶ ಪಥದಲ್ಲಿ ನಡೆಯುವ ಮನುಷ್ಯನಿಗೆ ಅನೇಕರು ಅನೇಕ ಬಗೆಯ ಎಡರು ಒಡ್ಡ ಬಹುದು. ಆರೋಪ-ಅಪವಾದಗಳ ಗೀಚುವಿಕೆ ಇತ್ಯಾದಿಗಳು ನಡೆದಿರುತ್ತವೆ. ಅಪಪ್ರಚಾರದ ಕೊಂಬೆ ಕಡಿತವೂ ಉಂಟು. ಆದರೆ ದೈವೀಕಾರುಣ್ಯದ ಬಗ್ಗೆ ವಿಶ್ವಾಸದ ಬೇರು ಆಳವಾಗಿ ಬೇರುಬಿಟ್ಟದ್ದು, ಅಂತಃಸಾಕ್ಷಿಗನುಗುಣವಾಗಿ ನಡೆಯುವವನ ಆತ್ಮ ಬಲ ಕುಂದುವುದಿಲ್ಲ. ದೈವಬಲ ಕಳೆದುಕೊಂಡವ ಮಾತ್ರ ಗೆದ್ದಲಿ ಹುಳು ತಿಂದ ಗಿಡ ದಂತೆ ನಾಶ ಹೊಂದುವನೇ ವಿನಾ, ನಿಂದಿಸಲ್ಪಟ್ಟವನಲ್ಲ. ಅಂತೆಯೇ ಬಸವಣ್ಣನವರು ಹೇಳುತ್ತಾರೆ: "ನೀನೊಲಿಯಿತ್ತೇ ಪುಣ್ಯ, ನೀನೊಲ್ಲದುದೇ ಪಾಪ; ನೀನೊಲಿದವನೇ ಧನ್ಯ, ಜಗಕ್ಕೆ ಪಾವನನೋಡಾ" ಎಂಬುದಾಗಿ.

ಕಲ್ಯಾಣ ಕಿರಣದ ಓದುಗರಿಗೆ ಸೂಚನೆ

★ ಮುಂದಿನ ವರ್ಷದ ಚಂದಾ ಕಳಿಸುವಾಗ ಮರೆಯದೆ ಚಂದಾ ನಂಬರು ತಿಳಿಸಿರಿ.

★ ಮನಿಯಾರ್ಡರ್ ಫಾರ್ಮಿನಲ್ಲಿ ವಿವರಗಳನ್ನು ಬರೆಯಲಿರುವ ಖಾಲಿ ಜಾಗದಲ್ಲಿ ಸಂಪೂರ್ಣ ವಿಳಾಸ ಚಂದಾ ಸಂಖ್ಯೆ, ಮೊತ್ತದ ವಿವರ ಮರೆಯದೆ ಬರೆಯಿರಿ.

ಅಲ್ಲಮ ಮತ್ತು ಮಾಯೆಯ ಸಾಂಬಂಧಿಕ ವಿನ್ಯಾಸ

ಚಿಕ್ಕೆರೆ ಶಿವಶಂಕರ್

ಅಲ್ಲಮ ಪ್ರಭು ಬಸವಣ್ಣನಂತೆ ಆದರ್ಶವಾದಿಯಲ್ಲ ಅನುಭವವಾದಿ ತಾರ್ಕಿಕ ಕ್ರಿಯಾಜ್ಞಾನಗಳ ಸಾಂಬಂಧಿಕ ಕಾರಣ ಪುರುಷ ಆದಿಯಲ್ಲಿಯೇ ಪ್ರಭು ಎಂದು ಹೊಗಳಿಸಿಕೊಂಡವನು. ಇಂಥ ಅಲ್ಲಮನ ಜೀವನವನ್ನು ಕುರಿತಂತೆ ಬಹಳಷ್ಟು ಕವಿ ಗಳು ಬರೆದಿದ್ದಾರಾದರೂ ಪ್ರಮುಖವಾಗಿ ಹರಿಹರ ಮತ್ತು ಚಾಮರಸರ ಚಿತ್ರಣ ಮುಖ್ಯ. ಅಲ್ಲಮ ಮತ್ತು ಮಾಯೆಯರ ಸಂಬಂಧವನ್ನು ಚಿತ್ರಿಸುವಲ್ಲಿ ಇಬ್ಬರದೂ ಭಿನ್ನ ಮನೋಧರ್ಮ.

ಹರಿಹರ ಚಿತ್ರಿಸಿದ ಅಲ್ಲಮ-ಕಾಮಲತೆಯರ ಪ್ರಸಂಗ ಮಾನವ ಸಹಜವಾದ ಐಂದ್ರಿಯಿಕ ಚಟುವಟಿಕೆಗಳ ಸೋಲು-ಗೆಲವುಗಳಾಗಿ ಕಂಡುಬಂದರೂ ಅನಂತರದ ಕವಿಗಳಿಗೆ ಅದು ಸರಿದೋರಲಿಲ್ಲ. ಕಾರಣ ಹರಿಹರನ ಅಲ್ಲಮ ಕಾಮಲತೆಯ ಸೌಂದ ರ್ಯಾತಿಶಯಕ್ಕೆ ಮೋಹಕತೆಗೆ ಮರುಳಾಗಿ ಅವಳನ್ನು ಬಯಸಿದವನು. ಹರಿಹರನ ಅಲ್ಲಮ ಮಧುಕೇಶ್ವರ ದೇವಾಲಯದಲ್ಲಿ ಆಕಸ್ಮಿಕವಾಗಿ ಕಾಮಲತೆಯನ್ನು ಸಂಧಿಸಿ ದಾಗ ಅವಳ ರೂಪು ಲಾವಣ್ಯಕ್ಕೆ ಮಾರುಹೋಗಿ ಅವರಿಬ್ಬರೂ ಪರಸ್ಪರ ಆಕರ್ಷಿತ ರಾಗಿ ಕಾಮಲತೆಯ ಗೆಳತಿಯರ ಮೂಲಕ ತನ್ನ ಆಕಾಂಕ್ಷೆಯನ್ನು ಈಡೇರಿಸಿಕೊಳ್ಳು ತ್ತಾನೆ. ಅವರಿಬ್ಬರೂ ಕೆಲಕಾಲ ಸಂತೋಷದಿಂದಿದ್ದು ಆಕಸ್ಮಿಕವಾಗಿ ಕಾಮಲತೆ ಕಾಮಜ್ವರದಿಂದ ಅಸುನೀಗುತ್ತಾಳೆ. ದುಃಖಿತನಾದ ಅಲ್ಲಮ ಕಾಮಲತೆಯ ವಿಯೋಗ ವನ್ನು ಸಹಿಸಲಾರದೆ ಹುಚ್ಚನಂತಾಗಿ ಊರ ಹೊರಗಿನ ತೋಟವೊಂದರಲ್ಲಿ ಕುಳಿತಿ ದ್ದಾಗ ಕಾಲ ಬೆರಳುಗಳಿಂದ ಯಾಂತ್ರಿಕವಾಗಿ ನೆಲ ಕೆರೆಯುತ್ತಿರುವಾಗ ಇದ್ದಕ್ಕಿ ದ್ದಂತೆಯೇ ಭೂಗರ್ಭದಲ್ಲಿ ಹುದುಗಿ ಹೋದ ದೇವಸ್ಥಾನವೊಂದು ಬೆಳಕಿಗೆ ಬರಲು ಕಾರಣನಾಗಿ ಅದರೊಳಗೆ ಅನಾದಿಕಾಲದಿಂದಲೂ ತಪೋನಿರತರಾಗಿದ್ದ ಅನಿಮಿಷಯ್ಯರ ದರ್ಶನ ಪಡೆದು ಅವರಿಂದ ಇಷ್ಟ ಕರಸ್ಥಲ ಲಿಂಗವನ್ನು ಪಡೆದು ದೀಕ್ಷೆ ಹೊಂದಿ ಸಿದ್ಧಿ ಸನ್ನದ್ಧನಾಗುತ್ತಾನೆ

ಈ ತೆರನಾದ ವಿವರಣೆ ಚಾಮರಸಾದಿಗಳಿಗೆ ಹಿಡಿಸಲಿಲ್ಲ. ಅಲ್ಲಮನಂಥ ಮಹಾತ್ಮರು ಕಾಮಲತೆಯ ಮಾಯೆಗೆ ಒಳಗಾದದ್ದು ಅವರಿಗೆ ಸರಿದೋರದೆ ಮಾಯಾ

Digitalized by e-Sahithya Documentation Forum
Sponsored by Sarayu Foundation Trust

ಕೋಳಾಹಳನಾಗಿ ಚಿತ್ರಿಸತೊಡಗಿದರು. ಈ ದೃಷ್ಟಿಯಿಂದ ಹರಿಹರನ ಪ್ರಭುದೇವರ ರಗಳೆಯಲ್ಲಿನ ಪ್ರಭುವಿನ ವ್ಯಕ್ತಿತ್ವಕ್ಕೂ, ಚಾಮರಸನ ಕಥಾನಾಯಕನ ವ್ಯಕ್ತಿತ್ವಕ್ಕೂ ವ್ಯತ್ಯಾಸವಿದೆ. ಪ್ರಸ್ತುತದಲ್ಲಿ ನಾರೀಗ ಚಾಮರಸನ ಕೃತಿಯಲ್ಲಿ ಕಂಡು ಬರುವ ಅಲ್ಲಮ ಮತ್ತು ಮಾಯೆ ಸಂಬಂಧದ ವಿನ್ಯಾಸವನ್ನು ಕುರಿತು ವಿವೇಚಿಸುವುದೇ ಒಳ್ಳಿತು ಕಾರಣ ಚಾಮರಸ, ಪ್ರಭುವಿನ ಕಥಾಸರಣಿಯಲ್ಲಿ ಮಾಡಿಕೊಂಡಿರುವ ಮಾರ್ಪಾಟುಗಳು ಸುಸಂಗತವಾದುವುಗಳಾಗಿವೆ ಎಂಬ ಆಧಾರದ ಮೇಲಿನಿಂದ. ರಜತಗಿರಿಯ ಒಡ್ಡೋಲಗದಲ್ಲಿ ನಡೆದ ಶಿವ ಪಾರ್ವತಿಯರ ವಾಗ್ವಾದದ ಫಲವಾಗಿ ಪಾರ್ವತಿಯ ತಾಮಸ ಕಳೆಯಾದ ಮಾಯೆ ಭೂಮಿಗಿಳಿಯುತಾ ಳೆ, ಅಲ್ಲಮನನ್ನು ಗೆದ್ದು ಹಿಡಿದು ತರುವೆನೆಂಬ ಛಲದಿಂದ. ಆದರೆ ಅಲ್ಲಮ ಮಾಯೆಯನ್ನು ಮೀರಿ ನಿಂತವ ಶಿವಸ್ವರೂಪಿ ಕಾರಣಪುರುಷ ಘಳಿಗೆಯಲ್ಲಿ ಯುಗಪುರುಷನಾಗಿ ಬೆಳೆದು ನಿಂತವನು ಮಾಯೆಯ ಜನ್ಮೋದ್ದೇಶ ಇವನಿಗೆ ತಿಳಿದಿದೆ. ಆದರೆ ಅಲ್ಲಮನದು ಸ್ಥಿರ ಪ್ರವೃತ್ತಿಯಲ್ಲ, ಚರ ಪ್ರವೃತ್ತಿ. ತಾನು ಹೋದೆಡೆಯಲ್ಲೆಲ್ಲಾ ಮೂಲಾಹಂಕಾರದಲ್ಲಿ ನಿಂತುಕೊಂಡು ಜನರು ಮನಸ್ಸನ್ನು ಜ್ಞಾನ ದೀಪ್ತಿಯ ಕಡಗೆ ಕ್ರಿಯೆಯ ವ್ಯಾಪ್ತಿಯ ಕಡೆಗೆ ಪರಿವರ್ತಿಸುತ್ತಿದ್ದ ದಿವ್ಯ ಚೇತನ. ಈ ದೃಷ್ಟಿಯಿಂದ ಮಾಯೆಯನ್ನು ತಿದ್ದುವ ಸಲುವಾಗಿ ಸ್ವನಾಮ ಸ್ವರೂಪವನ್ನು ಮರೆಸಿಕೊಂಡು ಮದ್ದಳೆಯ ಅಲ್ಲಮನಾಗಿ ಮಾಯೆಯನ್ನು ಭೇಟಿಯಾಗುತ್ತಾನೆ. ಈ ಭೇಟಿಯ ಉದ್ದೇಶ ಆಕೆಯ ತಪ್ಪು ತಿಳುವಳಿಕೆಯನ್ನು ಸರಿ ಪಡಿಸುವುದಾಗಿದ್ದಿತೇ ಹೊರತು ಹರೀಶ್ವರನಲ್ಲಿ ಚಿತ್ರಿತವಾಗಿರುವಂತೆ ಕಾಮಲತೆಯ ಮೇಲಿನ ಮೋಹದಿಂದಾಗಲೀ ಬಯಕೆಯಿಂದಾಗಲೀ ಅಲ್ಲ.

ಚಾಮರಸ ತನ್ನ 'ಪ್ರಭುಲಿಂಗ ಲೀಲೆ' ಯಲ್ಲಿ ಬಳಸಿರುವ ಒಂದೊಂದು ಹೆಸರುಗಳೂ ಅಲ್ಲಮ ಮಾಯೆಯರ ನಡುವಿನ ಸಂಬಂಧದ ವಿಸ್ತಾರವಾದ ಚಿತ್ರಪಠದಲ್ಲಿ ಸಂಕೇತಗಳಾಗಿ ಒಂದಕ್ಕೊಂದು ಸಂಬಂಧಿಸಿದ ಸೂತ್ರಗಳಾಗಿ ಕಂಡು ಬರುತ್ತವೆ. ಮಾಯೆ, ಮಮಕಾರ, ಮೋಹಿನಿದೇವಿ. ಅಹಂಕಾರಾಚಾರ್ಯ ಇತ್ಯಾದಿಗಳು ಮಾಯೆಯ ಸುತ್ತಲಿನ ಪರಿಸರದ ವಲಯದ ತಾಮಸಿಕ ಪರಿಧಿಯಾಗಿ ಕಂಡು ಬರುತ್ತವೆ. ಅಲ್ಲಮ ಮಾಯೆಯರ ಪ್ರಥಮ ಭೇಟಿ ಯಶಸ್ವಿಯಾಗಿ ಕೊನೆಗೊಳ್ಳುತ್ತದೆ. ವಿರಹ ಪೀಡಿತಳಾದ ಮಾಯೆಯ ಅಂತಃಪುರವನ್ನು ಅವಳ ವಿದಗ್ಧ ಸಖಿಯರ ಮುಖಾಂತರ ಅಲ್ಲಮ ಸೇರುತ್ತಾನೆ. ಅಲ್ಲಮ ಅಂತಃಪುರ ಸೇರಿದರೂ ಮಾಯೆಗೆ ವಶನಾಗುವುದಿಲ್ಲ ಎಂಬುದು ಇಲ್ಲಿ ಮುಖ್ಯ ಶಯ್ಯಾಗೃಹದಲ್ಲಿಯೂ ಸಹ ನಿರ್ದೇಹಿಯಾಗಿ ಉದಾಸೀನವಾಗಿರುವ ಅಲ್ಲಮನನ್ನು ಕಂಡು ಆಚ್ಚರಿಗೊಳ್ಳುತ್ತಾಳೆ. ಮೋಹದ ಕುರುಡುತನದಲ್ಲಿ ಬಿದ್ದಿದ್ದ ಮಾಯೆಗೆ ತಾನು ರಜತಗಿರಿಯಿಂದ ಬಂದ ಉದ್ದೇಶವೇ ಮರೆತು ಹೋಗಿದ್ದು ಅಲ್ಲಮನಲ್ಲಿಯೇ ತನ್ನ ಸರ್ವಸ್ವವನ್ನು ಗುರುತಿಸಿಕೊಳ್ಳಲು ಯತ್ನಿಸುತ್ತಾಳೆ. ಆದರೆ ಇಷ್ಟು

ಹೊತ್ತಿಗೆ ಆಕೆಯ ತಾಯಿಗೆ ವಿಷಯ ತಿಳಿದು ಅಲ್ಲಮ ಬಿಡಾರದಿಂದ ಹೊರಬರಬೇಕಾಗುತ್ತದೆ.

ಇಲ್ಲಿಗೆ ಅಲ್ಲಮ ಮತ್ತು ಮಾಯೆಯರ ನಡುವಿನ ಸಂಬಂಧದ ಒಂದು ಘಟ್ಟ ಮುಗಿಯುತ್ತದಾದರೂ ಹಾಗೆಯೇ ಪ್ರಶ್ನೆಯೊಂದು ಓದುಗರ ಮನಸ್ಸಿನಲ್ಲಿ ಹುಟ್ಟಿಕೊಳ್ಳುತ್ತದೆ. ಅಲ್ಲಮ ಪ್ರೀತಿಸುವಂತೆ ನಟಿಸುತ್ತಿದ್ದರೂ ಮಾಯೆನ್ನು ಪ್ರೀತಿಸಲಾರದೆ ಹೋದನಲ್ಲ ಎಂಬುದು. ವಾಸ್ತವವಾಗಿ ಅಲ್ಲಮನದು ಮೋಹದಿಂದ ಕೂಡಿದ ಪ್ರೀತಿಯಲ್ಲ, ಗುರುವೊಬ್ಬ ಅಜ್ಞಾನ ಮಾರ್ಗದಲ್ಲಿ ಸಿಕ್ಕು ನರಳುತ್ತಿದ್ದ ಶಿಷ್ಯೆಯೊಬ್ಬಳನ್ನು ಸನ್ಮಾರ್ಗದೆಡೆಗೊಯ್ಯಲು ತೋರಿಸುವ ಪ್ರೀತಿ ಅದು. ಆದರೆ ಮಾಯೆಯನ್ನು ತಿದ್ದುವುದು ಅಸಾಧ್ಯ ಎಂದು ತಿಳಿದಾಗ ಅಲ್ಲಮ ಮಾಯೆಯ ಸಂಗದಿಂದ ಹೊರಬೀಳುತ್ತಾನೆ. ಕಾಮನೆಗಳಿಂದ ವಶಪಡಿಸಿಕೊಳ್ಳಲಾರದೆ ಹೋದ ಮಾಯೆ 'ನಿರ್ಮ್ರಳೆ' ಯಿಂದ ತನ್ನ ಕಾರಣಿಕತ್ವವನ್ನು ಅರಿತು, ಅಲ್ಲಮನನ್ನು ಗೆಲ್ಲುವ ನಿಜವಾದ Challenge ನೊಂದಿಗೆ ಅಲ್ಲಮ ಹೋದ ದಾರಿಯನ್ನು ಹಿಂಬಾಲಿಸುತ್ತಾಳೆ. ಕೈಯಲ್ಲಿದ್ದ ಮಾಣಿಕ್ಯವನ್ನು ಕಾಮದ ದೆಸೆಯಿಂದ ಅರಿಯಲಾರದವಳು ಮೋಹದ ಕುರುಡುತನ ಬಿಟ್ಟು ಸಾತ್ವಿಕ ದೃಷ್ಟಿಯಿಂದ ದಿಟ್ಟಿಸಿದಾಗ ಅಲ್ಲಮನ ಶಿವಸ್ವರೂಪಿ ದರ್ಶನದ ಗೋಚರವಾಗುತ್ತದೆ. ಆದರೆ ಹಿಂಬಾಲಿಸಿ ಬಂದ ಮಾಯೆಯ ಒಳಗುಟ್ಟು ಅಲ್ಲಮನಿಗೆ ಸಂಪೂರ್ಣ ತಿಳಿದಿದೆ. ಅವಳಿಗೆ ತತ್ವೋಪದೇಶ ಮಾಡುವುದು ಕಟುಕರ ಮುಂದೆ ಬಸವ ಪುರಾಣ ಓದಿದಂತೆ ವ್ಯರ್ಥ, ನಿಷ್ಫಲ. ಅದಕ್ಕಾಗಿ, "ಜಗತ್ತಿನ ಸಾಗರಗಳೆಲ್ಲಾ ಅಮೃತದ ಮಡುಗಳಾಗಬಹುದು. ಗಿಡಮರಗಳೆಲ್ಲಾ ಕಲ್ಪವೃಕ್ಷಗಳಾಗಬಹುದು. ಹಸುಗಳೆಲ್ಲಾ ಕಾಮಧೇನುಗಳಾಗಬಹುದು, ಆದರೆ ಎತ್ತಾನುಂ ಮಡದಿ ಮಾಯೆಗೆ ಪರತತ್ವದ ತಿಳಿವು ಸಲ್ಲದು" ಎಂದು ನಿರ್ಗಮಿಸುತ್ತಾನೆ. ಮಾಯೆ ಸೋಲನ್ನೊಪ್ಪಿ ರಜತಗಿರಿಗೆ ಹಿಂದಿರುಗುತ್ತಾಳೆ. ಕವಿ, "ದ್ಯುಮಣಿ ಅಲ್ಲಮ ಸಿಕ್ಕದಾದನು ತಮದ ಮಾಯೆಗೆ" ಎಂದು ಅವರಿಬ್ಬರ ಸಂಬಂಧದ ಮುಕ್ತಾಯ ಹಾಡುತ್ತಾನೆ.

ಇದಿಷ್ಟೂ, ನಿಜವಾದ, ಅಲ್ಲಮ ಮತ್ತು ಮಾಯೆಯರ ಸಂಬಂಧದ ಚಿತ್ರಪಠ. ಆದರೆ ಈ ಖಾಲಿ ಚಿತ್ರಪಠದಲ್ಲಿ ಸಮರ್ಥನಾದ ಚಾಮರಸ ರೂಪುರೇಷೆಗಳ ಮುಖಾಂತರ ಗೆರೆ ಎಳೆದು ಜೀವತುಂಬಿ ಪುಷ್ಟಿನೀಡಿ ಅದನ್ನು ಜೀವಂತಗೊಳಿಸಿದ್ದಾನೆ. ತಾನು ಆರಿಸಿಕೊಂಡ ವಸ್ತು ಲಿಂಗವಂತರಿಗೆ ಲಿಂಗಮಾರ್ಗ ಉಪದೇಶ ಕಾವ್ಯ ಎಂಬುದು ಅವನಿಗೆ ಗೊತ್ತಿದೆ. ಆದರೆ ಈ ಹಿನ್ನೆಲೆಯಲ್ಲಿ ಅಲ್ಲಮ ಮಾಯೆಯರ ಪ್ರಣಯ ಎಂದು ಹೇಳಲಾಗುವುದಿಲ್ಲ. ಒಂದು ತೆರನಾದ ಸಂಬಂಧದ ಸ್ವಾರಸ್ಯವನ್ನು ನಿರೂಪಿಸುತ್ತಾ

Digitalized by e-Sahithya Documentation Forum
Sponsored by Sarayu Foundation Trust

ಆ ಮೂಲಕ ಅಲ್ಲಮನ ಮಹತ್ವವನ್ನು, ವ್ಯಕ್ತಿತ್ವದ ಹಿರಿಮೆಯನ್ನು ಅತ್ಯದ್ಭುತವಾಗಿ ಚಿತ್ರಿಸಿದ್ದಾನೆ. ಅಲ್ಲಮ ಮಾಯೆಯರ ಸಂಬಂಧ ತರಣಿ ಮತ್ತೆ ತಮವನ್ನು ಒಂದು ಗೂಡಿಸಲು ಸಾಧ್ಯವೆ ಎನ್ನುವಂಥದ್ದು, ಕಾರಣಿಕ ಪುರುಷನ ನೆಲೆ ಮಾಯದ ಮೋಹದ ಮಾಯೆಗೆ ಅಳವೆ ಎಂಬುದು. ಯುಗಪುರುಷನೆಲ್ಲಿ, ಕಾಮದ ಪುತ್ಥಳಿ ಅಹಂಕಾರದ ಸಜೀವಿ ಮಾಯೆ ಎಲ್ಲಿ ಎತ್ತಣಿಂದೆತ್ತಣ ಸಂಬಂಧವಯ್ಯಾ ಈರ್ವರಿಗೆ ಎಂಬುದಾಗಿದೆ.

ಚಾಮರಸ ರಸಪ್ರಧಾನ ಕವಿ. ಅಲ್ಲಮ ಮಾಯೆಯರ ಭೇಟಿ, ಶೃಂಗಾರ ಸನ್ನಿವೇಶಗಳನ್ನು ವರ್ಣನಾಮಯವಾಗಿ ಚಾತುರ್ಯದಿಂದ ಚಿತ್ರಿಸಿದ್ದಾನೆ. ತನ್ನ ಕಥಾನಾಯಕನ ಗೌರವಕ್ಕೆ ಎಲ್ಲೂ ಕುಂದುಬರದ ರೀತಿಯಲ್ಲಿ ಈ ಸಂಬಂಧದ ವಿನ್ಯಾಸವನ್ನು ರೂಪಿಸಿದ್ದಾನೆ. ಪ್ರಭುಲಿಂಗಲೀಲೆ ಧಾರ್ಮಿಕ ವಲಯದಲ್ಲಿ ಕ್ರಿಯಾಶೀಲವಾಗುವ ಒಂದು ಪುರಾಣ ರೂಪಕ ಕಾವ್ಯ. ಈ ಮುಂಚೆ ಅಲ್ಲಮನ ಜೀವನಕ್ಕೊಂದು ಅಲೌಕಿಕವಾದ, ಅತಿಮಾನುಷ ರೂಪವನ್ನು ಹರಿಹರ ದೊರಕಿಸಿದ್ದನು. ವೀರಶೈವ ಧರ್ಮ ಕರ್ನಾಟಕದಲ್ಲಿ ಕ್ರಿಯಾರೂಪಕ್ಕಿಳಿದಾಗ ತೀವ್ರತರವಾಗಿದ್ದು ಚಾಮರಸನ ಕಾಲಕ್ಕೆ ಅದರ ಬಿಸಿ ಕುಂದಿತ್ತು. ಆರಂಭದಲ್ಲಿ establishment ಗೆ ವಿರುದ್ಧವಾಗಿ ನಿಂತಂತೆ ಕಂಡರೂ ಅನಂತರ ಅದರ ಫಲಿತ ಕೂಡ ಒಂದು establishment ಆದದ್ದು ಚಾರಿತ್ರಿಕ ದುರಂತ. ಇಂಥ ಸಂದರ್ಭದಲ್ಲಿ ವೀರಶೈವ ಧರ್ಮದ ನಂಬಿಕೆಗೆ ಬೆಂಬಲವಾಗಿ ಪ್ರಭುಲಿಂಗ ಲೀಲೆಯಲ್ಲಿ ಸಾತ್ವಿಕ ಭಕ್ತಿಗೆ ಗೆಲುವು ಲಭಿಸಿರುವುದು, ವೀರಶೈವರು ಭಕ್ತಿಯ ಮೂಲಕ ಸಾಕ್ಷಾತ್ಕಾರವನ್ನು ಸಾಧಿಸಬಹುದೆಂಬುದಕ್ಕೆ ಒತ್ತು ನೀಡಿದೆ.

ಕಲ್ಯಾಣ ಕಿರಣ ಓದುಗರಿಗೆ ಸೂಚನೆ

★ ಪತ್ರಿಕೆ ಅಕಸ್ಮಾತ್ ಕೈಸೇರದಿದ್ದರೆ ಒಂದು ಕಾರ್ಡ್ ಹಾಕಿ ತರಿಸಿಕೊಳ್ಳಲು ಮರೆಯದಿರಿ.

★ ಚಂದಾ ಸಂಖ್ಯೆ ದಯವಿಟ್ಟು ನೆನಪಿಟ್ಟುಕೊಳ್ಳಿ ಕಲ್ಯಾಣ ಕಿರಣ ಬಂದಾಗ ಅದರ ಕಾಗದದ ಕವರಿನ ಮೇಲೆ ನಿಮ್ಮ ಚಂದಾ ಸಂಖ್ಯೆ ಇರುತ್ತದೆ.

★ ಪತ್ರಿಕಾಲಯದೊಡನೆ ವ್ಯವಹರಿಸುವಾಗ ಮರೆಯದೆ ಚಂದಾ ಸಂಖ್ಯೆ ಬರೆಯಿರಿ. ಇಲ್ಲವಾದರೆ ಹೆಸರಿನ ಮೇಲೆ ವಿಳಾಸ ಹುಡುಕಲು ಸಾಧ್ಯವಿಲ್ಲ.

೧೫೧ ರೂ. ಸಲ್ಲಿಸಿದ ಹೊಸ ಆಜೀವ ಸದಸ್ಯರು

ಶರಣ/ಶರಣೆಯರುಗಳಾದ,

1.	869	ಹೆಚ್. ಪಿ. ನಂದೀಶ್, ವಿ. ಸಿ. ಹೊಸೂರು, ಚಾಮರಾಜನಗರ ತಾಲ್ಲೂಕು
2	870	ಟಿ. ಎನ್. ಗಂಡುಗಲಿ, ಮದಕರಿ, ಚಿತ್ರದುರ್ಗ ಜಿಲ್ಲೆ
3.	874	ಹೆಚ್. ಬಿ. ರವೀಂದ್ರನಾಥಗೌಡ, ಬಳ್ಳಾರಿ
4.	875	ಶಿವಪ್ರಸಾದ್ ತೋರಣ್, ಗುಲ್ಬರ್ಗಾ-3
5.	876	ಕೆ. ಜಿ. ಬದರಿ ಪ್ರಸಾದ್, ಮೈಸೂರು-1
6.	877	ಲಲಿತ ಆರ್. ಹೆಚ್. ಶೆಟ್ಟಿ, ದಾವಣಗೆರೆ-4
7.	878	ಎಸ್. ಎನ್. ನಾರಾಯಣಸ್ವಾಮಿ, ಬೆಂಗಳೂರು-20
8.	879	ಟಿ. ಎಲ್. ನಾರಾಯಣ್, ಬೆಂಗಳೂರು-10
9.	880	ಎ. ಸಿದ್ಧಪ್ಪ ಮನೋಳಿ, ದಾವಣಗೆರೆ-4
10.	881	ಬಿ. ಹೆಚ್. ಅಂಕಲಿ, ನಾಂದೇಡ್, ಮಹಾರಾಷ್ಟ್ರ
11.	882	ಬಿ. ಎಮ್. ಶಾಂತಮೂರ್ತಿ, ಮಲ್ಲೇಶ್ವರಂ, ಬೆಂಗಳೂರು
12.	883	ವಿ ಅನುಸೂಯಮ್ಮ ಮಲ್ಲೇಶ್ವರಂ, ಬೆಂಗಳೂರು
13.	884	ಟಿ ಕೆ. ವೀರಣ್ಣ, ದಾವಣಗೆರೆ
14.	885	ವಿ ರಾಜಣ್ಣ, ಗಾಂಧಿನಗರ, ಬೆಂಗಳೂರು
15.	886	ಎಮ್. ವೀರಣ್ಣ, ಗುಡ್ಡದಹಳ್ಳಿ, ಎ.ಪಿ.
16.	887	ಎನ್.ಸಿ. ರತ್ನಶೇಖರ್, ಮಲ್ಲೇಶ್ವರಂ, ಬೆಂಗಳೂರು
17.	888	ರೇವಣಸಿದ್ದಪ್ಪ, ಎಸ್. ಹೊನ್ನಪ್ಪನವರು ಬೆಂಗಳೂರು-21
18.	889	ಸಿದ್ಧಾರೆಡ್ಡಿ, ಸಾಲೇಬೀರನಹಳ್ಳಿ, ಗುಲಬರ್ಗಾ ಜಿಲ್ಲೆ
19.	890	ವಿ. ದಿವಾಕರ್, ಸಿರಗುಪ್ಪಾ, ಬಳ್ಳಾರಿ ಜಿಲ್ಲೆ

Digitalized by e-Sahithya Documentation Forum
Sponsored by Sarayu Foundation Trust

ಬಸವ ಭಾರತಿ ವಿದ್ಯಾಲಯದ ಕಟ್ಟಡ ನಿರ್ಮಾಣಕ್ಕೆ ಧನ ಸಹಾಯಗೈದ ಬಾಲಕರ ಮಾತಾಪಿತೃಗಳು

ಶರಣ/ಶರಣೆಯರುಗಳಾದ,

೧.	ಎನ್. ಮಲ್ಲಿಕಾರ್ಜುನ, ಮಧುಗಿರಿ	೧೧೦೦೧-೦೦
೨.	ಟಿ. ಚನ್ನಯ್ಯ, ಜಾಲಹಳ್ಳಿ, ಬೆಂಗಳೂರು	೧೦೦೧-೦೦
೩.	ಕೆ. ಆರ್. ರಾಮಕೃಷ್ಣಶೆಟ್ಟಿ ಮತ್ತು ಜಯಲಕ್ಷ್ಮಮ್ಮ, ಮೈಸೂರು	೨೦೦೧-೦೦
೪.	ಅಮರಪ್ಪ ಶಿವನಗುತ್ತಿ, ಜಾಯ್ ಪ್ರಾಡಕ್ಟ್ಸ್, ಗದಗ	೨೦೦೨-೦೦
೫.	ಪಿ. ರಾಜೀವಶೆಟ್ಟಿ, ಆದವಾನಿ, ಆಂಧ್ರಪ್ರದೇಶ	೧೦೦೧-೦೦
೬.	ಕೆ. ಎಂ. ಕೊಟ್ರಯ್ಯ, ಹೊಸಪೇಟೆ (ಮಂಚಕ್ಕೆ ಕೊಟ್ಟ ದಾನವೂ ಅಡಕವಾಗಿದೆ)	೨೦೦೧-೦೦
೭.	ಪ್ರೇಮನಾಥ ಸಾ ರಾಯಭಾಗಿ, ಹುಬ್ಬಳ್ಳಿ (ಮಂಚಕ್ಕೆ ಕೊಟ್ಟ ದಾನವೂ ಅಡಕವಾಗಿದೆ)	೨೦೦೧-೦೦
೮.	ಎಂ. ಪಂಚಾಕ್ಷರಪ್ಪ, ಶಿವಮೊಗ್ಗ	೧೦೦೧-೦೦
೯.	ಬಿ. ನಾಗರಾಜಶೆಟ್ಟಿ, ದಾವಣಗೆರೆ	೧೦೦೧-೦೦
೧೦.	ನಾಗಣ್ಣ ಜಾಬಶೆಟ್ಟಿ, ಬೀದರ	೧೦೦೧-೦೦
೧೧.	ಬಿ. ಕೃಷ್ಣಪ್ಪ, ಜಾಲಹಳ್ಳಿ, ಬೆಂಗಳೂರು	೧೦೦೧-೦೦
೧೨.	ಬಿ. ಜಿ. ಎಲ್. ಕಾಂತ, ದೊಡ್ಡಬಳ್ಳಾಪುರ	೧೦೦೧-೦೦
೧೩.	ಎನ್. ಸಿ. ವಿಶ್ವನಾಥ, ಇಂಜಿನಿಯರ್, ಬೆಂಗಳೂರು	೧೦೦೧-೦೦
೧೪.	ಚಿಕ್ಕಬ್ಯೆಯಣ್ಣನವರು, ಬೆಂಗಳೂರು	೧೦೦೧-೦೦
೧೫.	ಸಿ. ಜೋಗೀಗೌಡ, ಅಧ್ಯಕ್ಷರು, ಚಂದಗಾಲು	೧೦೦೧-೦೦
೧೬.	ಬಿ. ಎನ್. ರಾಜಣ್ಣಶೆಟ್ಟಿ, ಬೆಂಗಳೂರು	೧೫೦೦-೦೦
೧೭.	ಎನ್. ಹೆಚ್. ಚನ್ನವೀರಪ್ಪ, ಶಿವಮೊಗ್ಗ	೧೦೦೧-೦೦
೧೮.	ಟಿ. ಮುನಿಯಲ್ಲಪ್ಪ, ಕಾಂಟ್ರ್ಯಾಕ್ಟರ್, ಬೆಂಗಳೂರು	೧೦೦೧-೦೦
೧೯.	ಲೇಟ್ ಶ್ರೀಮತಿ ಲಲಿತಾದೇವಿ ಗುರುಸಿದ್ಧಪ್ಪ ಸಿಂಧೂರು, ಸವಣೂರು	೧೦೦೧-೦೦

೨೦.	ಬಿ. ಕೃಷ್ಣಪ್ಪ, ಬೆಂಗಳೂರು	೧೦೦೧-೦೦
೨೧.	ಮೈಸೂರು ಕಾವೇರಿ ಪ್ರಾಡಕ್ಟ್ಸ್, ಬೆಂಗಳೂರು	೧೦೦೧-೦೦
೨೨.	ವಿ. ಸುಬ್ಬರಾಜು, ಜಯನಗರ, ಬೆಂಗಳೂರು	೧೦೦೧-೦೦
೨೩.	ಕಾಂತರಾಜ ವಡೆಯರ್, ಧಾರವಾಡ	೧೦೦೧-೦೦
೨೪.	ಎಂ. ನಾಗಭೂಷಣಮ್, ಪೆನುಕೊಂಡ	೫೦೧-೦೦
೨೫.	ಕೆ. ಮಂಜಪ್ಪ, ಹೊನ್ನಾಳಿ	೫೦೧-೦೦
೨೬.	ಬಿ. ರಾಮಚಂದ್ರರಾವ್ ನಾರಾಯಣರಾವ್, ವಿಜಯವಾಡ	೫೦೧-೦೦
೨೭.	ಎನ್. ಸಿ. ಕರಿಸಿದ್ಧಿಮಠ, ಬಾಗಲಕೋಟೆ	೫೦೧-೦೦
೨೮.	ಟಿ. ಎಲ್. ನಾರಾಯಣ, ಬೆಂಗಳೂರು	೫೦೧-೦೦
೨೯.	ಹೆಚ್. ಎಸ್. ನರಸಿಂಹನ್, ಹಾಸನ	೫೦೧-೦೦
೩೦.	ನಾರಾಯಣಮ್ಮ, ಮುನಿರೆಡ್ಡಿಪಾಳ್ಯ, ಬೆಂಗಳೂರು	೫೦೧-೦೦
೩೧.	ಬಿ. ನಾಗಪ್ಪ, ಬೆಂಗಳೂರು	೫೦೧-೦೦
೩೨.	ಪುಟ್ಟಸ್ವಾಮಿಗೌಡ, ಕೌಡ್ಲಿ	೫೦೧-೦೦
೩೩.	ವೆಂಕಟರಮಣಯ್ಯ, ಬೆಂಗಳೂರು	೫೦೧-೦೦
೩೪.	ಅಶ್ವಥನಾರಾಯಣ ಪ್ರಸಾದ್, ಬೆಂಗಳೂರು	೫೦೧-೦೦
೩೫.	ಪಿ. ಚನ್ನವೀರಪ್ಪ, ನಗರ್ತಪೇಟೆ, ಬೆಂಗಳೂರು	೫೦೧-೦೦
೩೬.	ಮಾಳಪ್ಪ, ಪಕ್ಕೀಗೌಡನಪಾಳ್ಯ	೫೦೧-೦೦
೩೭.	ಬಸವರಾಜ ಮುರುಗಾ, ಬೀದರ	೫೦೧-೦೦
೩೮.	ಡಾ॥ ಗುರುರಾಜ್, ಪಾವಗಡ	೫೦೧-೦೦
೩೯.	ಅತ್ತೀಗೆರೆ ನಾಗಣ್ಣ, ಅತ್ತೀಗೆರೆ	೫೦೧-೦೦
೪೦.	ಡಿ. ಮಹೇಶ್ವರಪ್ಪ, ಕತ್ತಲಗೆರೆ	೫೦೧-೦೦
೪೧.	ಹೆಚ್. ಆರ್. ಸುರೇಂದ್ರ, ಹೊನ್ನುಡಿಕೆ	೫೦೧-೦೦
೪೨.	ಸುಬ್ಬರಾಜು, ಮಲ್ಲೇಶ್ವರಂ ಬೆಂಗಳೂರು	೫೦೧-೦೦
೪೩.	ಸಂಜೀವಕುಮಾರ್‌ಸಿಂಗ್, ಸೆಕ್ಮಾಯ್, ಇಂಫಾಲ	೫೦೧-೦೦
೪೪.	ಜಿ. ಬಿ. ಚಿಕ್ಕೊಂಡ, ಬಿಜಾಪುರ	೫೦೧-೦೦
೪೫.	ಎಸ್. ಎನ್. ಎಸ್. ನಾರಾಯಣ, ಬೆಂಗಳೂರು	೫೦೧-೦೦
೪೬.	ಬಿ. ಎನ್. ಮುದ್ದುಮಲ್ಲಪ್ಪ, ಕಿಬ್ಬೆಟ್ಟ	೫೦೧-೦೦
೪೭.	ಬಿ. ತಿಮ್ಮಯ್ಯ, ಹೊಳಲಕೆರೆ	೫೦೧-೦೦
೪೮.	ವಿ. ಸುಬ್ಬರಾಜು, ಬೆಂಗಳೂರು	೫೦೧-೦೦
೪೯.	ಚಿನ್ನಸ್ವಾಮಿನಾಯ್ಡು, ಬೆಂಗಳೂರು	೫೦೧-೦೦

Digitalized by e-Sahithya Documentation Forum
Sponsored by Sarayu Foundation Trust

೫೦. ಜಿ. ವಿ. ಕೇಶವನಾಯ್ಡು, ಬೆಂಗಳೂರು ೫೦೧-೦೦
೫೧. ಶ್ರೀಮತಿ ವಿಜಯಲಕ್ಷ್ಮಿ ಮತ್ತು ಬಾಬು ರಾಜೇಂದ್ರಪ್ರಸಾದ್ ೫೦೧-೦೦
೫೨. ಬಿ. ಕಾಳಯ್ಯ, ಮಂಡ್ಯ ೫೦೧-೦೦
೫೩. ಡಿ. ಶಂಕರಪ್ಪ, ಬೆಂಗಳೂರು-53 ೫೦೧-೦೦
೫೪. ಹೆಚ್. ವಿ. ನಾರಾಯಣರೆಡ್ಡಿ, ಬೆಂಗಳೂರು ೫೦೧-೦೦
೫೫. ಟಿ. ಪುಟ್ಟಸ್ವಾಮಿ, ಆದಿವಾಲ ೫೦೧-೦೦
೫೬. ಸಿ. ಎಂ. ಪಾಟೇಲ್, ಅಡ್ನೂರು, ನವಲಗುಂದ ೫೦೧-೦೦
೫೭. ಪಿ. ಎಂ. ಶಂಕರ್, ಹಿರಿಯೂರು ೫೦೧-೦೦
೫೮. ಬಸಪ್ಪ ಮಾಲ್ಲಾಡದ, ಗದಗ ೫೦೧-೦೦
೫೯. ಮಹಾದೇವಪ್ಪ ಹೆದ್ದೂರುಶೆಟ್ಟಿ, ಗೋಕಾಕ ೫೦೧-೦೦
೬೦. ಎಂ. ಸಹದೇವಪ್ಪ, ಕುಷ್ಟಗಿ ೫೦೧-೦೦
೬೧. ಟಿ. ವಿ. ಈಶ್ವರಯ್ಯ, ಶಿವಮೊಗ್ಗ ೫೦೧-೦೦
೬೨. ದೊಡ್ಡಮಲ್ಲಪ್ಪ, ಮಂಡ್ಯ ೫೦೧-೦೦
೬೩. ಜಿ. ರಾಮಯ್ಯ, ಬೆಂಗಳೂರು ೫೦೧-೦೦
೬೪. ಬಸವರಾಜ ಪಾಟೀಲ, ಚಂದಾಪುರ ೫೦೧-೦೦
೬೫. ಎಸ್. ರುದ್ರಪ್ಪ, ಬೆಂಗಳೂರು ೫೦೧-೦೦
೬೬. ರಾಮಯ್ಯ ವಿ.ಪಿ. ಛೇರ್ಮನ್, ಕೊಮ್ಮೇರಹಳ್ಳಿ ೨೦೦೨-೦೦
೬೭. ಮಲ್ಲಿಕಾರ್ಜುನಪ್ಪ ಕೊಲ್ಹಾರ, ಗೋಕಾಕ ೧೦೦೧-೦೦
೬೮. ಪಿ. ಸುಬ್ರಹ್ಮಣ್ಯಾಚಾರಿ, ಬೆಂಗಳೂರು ೧೦೦೧-೦೦
೬೯. ಎಂ. ಆರ್. ಜಗದೀಶ್, ಚಾಮರಾಜನಗರ ೫೦೧-೦೦
೭೦. ಶ್ರೀಮತಿ ರಾಧಾ ಅಂಕೇನಹಳ್ಳಿ ೧೦೦೧-೦೦

ಬಸವ ಭಾರತಿ ವಿದ್ಯಾಲಯದ ಅಭಿವೃದ್ಧಿಗಾಗಿ ಧನ ಸಹಾಯ ಮಾಡಿದ ಎಲ್ಲ ಪಾಲಕರಿಗೂ ವಿಶ್ವಗುರು ಬಸವಣ್ಣನವರು ಆಯುರಾರೋಗ್ಯಭಾಗ್ಯ ಸಕಲ ಸಂಪದ ವನ್ನೀಯಲೆಂದು ಹಾರೈಸುತ್ತೇವೆ.

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು
ಚೇರ್ಮನ್ ವಿಶ್ವ ಕಲ್ಯಾಣ ಮಿಷನ್, ಬೆಂಗಳೂರು

ವಿಶ್ವಕಲ್ಯಾಣ ಮಿಷನ್‌ಗೆ ಮತ್ತು ವಿ.ಕ.ಮಿ. ವಿದ್ಯಾಸಂಸ್ಥೆಗೆ ಧನ ಸಹಾಯಗೈದ ಸದ್ಭಕ್ತರು

ಶರಣ/ಶರಣೆಯರುಗಳಾದ,

೧. ಶ್ರೀಮತಿ ಅನಸೂಯಮ್ಮ ಮತ್ತು ಮಕ್ಕಳು, ಬೆಂಗಳೂರು ೧೦೦೦೧ ೦೦
೨. ಜಿ. ಸಂಪಣ್ಣ, ಜಿ. ಶಿವಾನಂದಪ್ಪ, ಕಂಪ್ಲಿ ೫೦೦೧ ೦೦
೩. ಎಸ್. ಎಂ. ರುದ್ರಯ್ಯಸ್ವಾಮಿ, ಕಂಪ್ಲಿ ೧೦೦೧ ೦೦
೪. ಕೆ. ಶ್ರೀನಿವಾಸಪ್ಪ, ಕಂಪ್ಲಿ ೧೦೦೧ ೦೦
೫. ಶಕುಂತಲಾ ಪುಟ್ಟಸಿದ್ಧಪ್ಪ, ಮಲ್ಲೇಶ್ವರಮ್, ಬೆಂಗಳೂರು ೧೦೦೧ ೦೦
೬. ಎಂ. ಆರ್. ರಾಮಯ್ಯಶೆಟ್ಟಿ, ಬೆಂಗಳೂರು ೧೦೦೧ ೦೦
೭. ಟಿ. ಮುನಿರಾಮಯ್ಯ, ವಸಂತನಗರ ಬೆಂಗಳೂರು ೧೦೦೧ ೦೦
೮. ಜಗದಾಂಬಾ ಶ್ರೀಶೈಲ ಪಾಟೀಲ್, ಬೆಂಗಳೂರು ೧೦೦೧ ೦೦
೯. ಉಷಾ ದಿನಕರ ಕರ್ತೆ, ಕಲ್ಕತ್ತ ೧೦೦೧ ೦೦
೧೦. ಮುದೇಗೌಡರ ಶಾಂತಮ್ಮ ಸಣ್ಣ ಮುರಿಗೆಪ್ಪ ಮತ್ತು ಮಕ್ಕಳು, ಬೆಂಗಳೂರು ೧೦೦೧ ೦೦
೧೧. ಎ. ವಿ. ಕೃಷ್ಣಸ್ವಾಮಿ, ಬೆಂಗಳೂರು ೫೦೦ ೦೦
೧೨. ಕೆ. ಸಂಪಂಗಿರಾಮರಾಜು, ಬೆಂಗಳೂರು ೫೦೧ ೦೦
೧೩. ಚನ್ನಬಸಮ್ಮ ಬಿ. ಮುದ್ದುಬಸಪ್ಪ, ಬೆಂಗಳೂರು ೧೦೦೧ ೦೦

ಬಾಳ ಕಡಲಲಿ ಮುಳುಗಿ ಮೂರು ಮೂತ್ತನು ತಂದೆ
'ಸ್ನೇಹ, ಸ್ಮರಣೆ, ಮಮತೆ' ಎಂದು ಕರೆದಿ !
ಬಾಳಬನದಲಿ ತಿರುಗಿ ಮೂರು ಫಲಗಳ ತಂದೆ
'ದಿಟ, ಚೆಲುವು, ಒಲವುಗಳು' ಎಂದು ಒರೆದೆ !

Digitalized by e-Sahithya Documentation Forum
Sponsored by Sarayu Foundation Trust

ಮುನಿಸೇಕೆ ಮನದನ್ನ ?

ಪಿ. ಬಸವಣ್ಣ

ಮುನಿಸೇಕೆ ಮನದನ್ನ ಪೇಳು ಗುಣಮಣಿರನ್ನ
ಎನಿತು ಕಾಡುವೆ ಚೆನ್ನ ಕೂಡು ಬೇಗದೊಳೆನ್ನ ॥ ಪ ॥

ಜಗವೆಲ್ಲ ಬರಿಶೂನ್ಯ ನಿನ್ನ ನೋಡದೆ ವಿಭುವೆ
ಹಗಲಿರುಳು ನಿನಗಾಗಿ ಪರಿತಪಿಸಿ ಗೋಳಿಡುವೆ
ಸೊಗಸುದೋರದು ರನ್ನ ಯಾವುದೀ ಭುವಿಯೊಳಗೆ
ಸುಗುಣ ಸುಂದರರೂಪ ನಿನ್ನ ಕಾಣದ ಕಣ್ಗೆ ॥ ೧ ॥

ನೂಕದಿರು ಕಾಲವನು ತಾಳಲಾರದು ಜೀವ
ಸಾಕು ನಿಲ್ಲಿಸು ನಿನ್ನ ಶೋಧನೆಯ ಮಮದೇವ
ನೀ ಕೊಡದೆ ದರುಶನವ ಕಾಡಲೆನ್ನನು ಬಹಳ
ನಾ ಕೊಡುವೆಯತ್ತತ್ತು ಕುರುಡಾದ ಕಣ್ಣುಗಳ ॥ ೨ ॥

ಧರೆಯೊಳುಂಟೇ ಬೇರೆ ನಿನಗೆ ತಿಳಿಯದ ವಿಷಯ
ಇರಲಿಂತು ಓಗೊಡದೆ ಸುಮ್ಮನಿಹೆ ಏಕಿನಿಯ ?
ಇರಲಾರೆ ನಾನಿನ್ನು ನಿನ್ನ ಕಾಣದೆ ಜಗದಿ
ಕರುಣದಿಂ ತೋರೆನಗೆ ಸುಸ್ವರೂಪವ ಭರದಿ ॥ ೩ ॥

ಹಲವು ಬಗೆಯೊಳು ಕೊರಗಿ ಪರಿತಪಿಸಿ ಬಲುನೊಂದು
ಹಲವಾರು ವರುಷಗಳ ಕಳೆದೆ ವಿರಹದಿ ಬೆಂದು
ಗೆಲುವು ಕಾಣದೆ ಸೊರಗಿ ಅಳಿವೆ ಗುಣಸಂಪನ್ನ
ಚೆಲುವ ಚೆನ್ನಿಗ ನಿನ್ನ ರೂಪುದೋರುಳಿಸೆನ್ನ ॥ ೪ ॥

ವರಿಸದಲೆ ಬೇಗದೊಳು ಪೂಜೆಗೊಂಬನ ಮನದಿ
ಇರಲು ಸಾಧ್ಯವೆಯೊಂಟಿ ಬೆರೆದು ಬಾಳದೆ ಜಗದಿ
ಧರೆಯ ಜನರಾಡುವರು ಪರಿಪರಿಯೊಳಣಕಿಸುತ
ಭರದಿಂದಲೈತಂದು ಪಿಡಿಕರವ ಮುದ್ದಿಸುತ ॥ ೫ ॥

(೧೬ನೇ ಪುಟದಿಂದ ಮುಂದುವರೆದಿದೆ)

ಸಂಪೂರ್ಣವಾಗಿ ಮಾಡಿದ್ದು ವಿ. ಎಸ್. ಎನ್. ಎ. ಯವರು ಹಾಕಿ ಕೊಟ್ಟ ಯೋಜನೆಯ ಮೇರೆಗೆ. ಸ್ವತಂತ್ರವಾಗಿ ರೂಪಿಸಿಕೊಳ್ಳಬೇಕಾಗಿದ್ದು ಶ್ರೀ ನಾದಬ್ರಹ್ಮಾನಂದ ಸ್ವಾಮೀಜಿಯವರ ಸಂದರ್ಶನವನ್ನು ಮಾತ್ರ. ಹೀಗಾಗಿ ನಾನು ಹೇಳಿದೆ: "ನನ್ನ ಬರವಿಗಾಗಿ ಕಾಯ್ದಿರುವ ಅತಿಥಿಗಳಿಗೆ ದೂರವಾಣಿ ಮೂಲಕ ನಾನೇ ಹೇಳಿ ಮನವರಿಕೆ ಮಾಡುತ್ತೇನೆ. ಮತ್ತು ಅಲ್ಲಿಗೆ ಹೋಗಿ ಬರುವ ವೆಚ್ಚವನ್ನೇನೂ ವಹಿಸಿಕೊಳ್ಳಬೇಕಾಗಿಲ್ಲ. ಅವರೆಲ್ಲ ವ್ಯವಸ್ಥೆ ಮಾಡಿಕೊಡುತ್ತಾರೆ" ಎಂದು ನುಡಿದೆ. "ಸಾನ್‌ಫ್ರಾನ್ಸಿಸ್ಕೋ ಕಾರ್ಯಕ್ರಮ ತಪ್ಪಿಸಿದರೆ ಆಗದೆ?" ಎಂದು ಕೋರಿಯವರು ಕೇಳಿದರು. "ಇಲ್ಲ; ಅತ್ಯಂತ ವಯಸ್ಸಾದ ತಾಯಿತಂದೆಯರು ಮಕ್ಕಳಿಗೆ ಏನಾದರೂ ಆಜ್ಞೆ ಮಾಡಿದಾಗ ಮಕ್ಕಳು ಅದನ್ನು ಉಲ್ಲಂಘಿಸಿದರೆ ಎಂಥಾ ತಪ್ಪಾಗುತ್ತೋ ಹಾಗಾಗುತ್ತೆ ನಾನು ಉಲ್ಲಂಘಿಸಿದರೆ. ಆ ವಯಸ್ಕರ ಮನಸ್ಸನ್ನು ನೋಯಿಸಿ ಹೋದರೆ ಅಲ್ಲಿ ಗುರುಗಳೂ ಬೇಸರಪಡುತ್ತಾರೆ. ಇಷ್ಟು ಸಾವಿರ ಮೈಲಿ ದೂರಬಂದು ಪೂಜ್ಯರನ್ನು ಕಾಣದೆ ಹೋದರೆ ತುಂಬಾ ತಪ್ಪಾಗುತ್ತೆ." ಎಂದು ನಿರ್ಧಾರದಿಂದ ಹೇಳಿದೆ. ಸ್ವಾಮೀಜಿಯವರಿಗೆ ಬರುವ ನಿರ್ಧಾರ ತಿಳಿಸಿದಾಗ ಆಕಾಶ-ಭೂಮಿಗಳು ಒಂದಾದಷ್ಟು ಸಂಭ್ರಮ ಅವರಿಗೆ. ಅವರ ಸಹೃದಯತೆ ಕಂಡು ನನಗೇ ಆಶ್ಚರ್ಯ. ವಾಲ್ಟ್ ಡಿಸ್ನಿಲ್ಯಾಂಡ್ ನೋಡ ಹೋದಾಗ ಅಲ್ಲಿಯೇ ಇದ್ದ ಅಮೆರಿಕನ್ ಏರ್‌ಲೈನ್ಸ್‌ನ 147ನೇ ಫ್ಲೈಟ್‌ನ ಟಿಕೆಟ್ ತೆಗೆದುಕೊಂಡು ಬಿಟ್ಟು, ಫ್ಲೈಟ್ ನಂಬರ್ ತಿಳಿಸಿ, "ಯಾರನ್ನಾದರೂ ನಿಲ್ದಾಣಕ್ಕೆ ಕಳಿಸಿಕೊಡಿ...." ಎಂದು ತಿಳಿಸಿದೆ. 20ನೇ ಫೆಬ್ರವರಿ 1981 ರಂದು ಬೆಳಿಗ್ಗೆ ಕೇವಲ ಮುಕ್ಕಾಲು ತಾಸಿನಲ್ಲಿ ಸಾನ್‌ಫ್ರಾನ್ಸಿಸ್ಕೋ ತಲುಪಿದ್ದಾಯಿತು.

ಸ್ವಾಮೀಜಿಯವರ ಪರವಾಗಿ ಯಾರಾದರೂ ಬಂದಿದ್ದಾರೆಯೇ ಎಂದು ನೋಡ ಹೋದರೆ, ಸ್ವತಃ ಸ್ವಾಮಿಗಳೇ ಎರಡು ಕಾರುಗಳನ್ನು ತೆಗೆದುಕೊಂಡು ಬಂದಿದ್ದಾರೆ. ಅವಸರದಿಂದ ಧಾವಿಸಿ ನಮಸ್ಕರಿಸುವ ಅವರ ವಿನಯ ಕಂಡು ನನಗೆ ದಿಗ್ಭ್ರಾಂತಿ. ಅವರ ಕಾರಿನ ಸಾರಥ್ಯವಹಿಸಿದ್ದ ಮಾತಾದೇವಿ, ಇನ್ನೊಂದು ಕಾರಿನ ಸಾರಥ್ಯ ವಹಿಸಿದ್ದ ಕ್ರಿಯಾನಂದ, ಪೂಜ್ಯ ಸ್ವಾಮೀಜಿಯವರ ಪರಮ ಶಿಷ್ಯೆ ಪಾರ್ವತಿದೇವಿ ಎಲ್ಲರೂ ಭಾರತೀಯ ಸಂಸ್ಕೃತಿಯ ಮಾದರಿಯಲ್ಲಿ ಮಂಡಿಯೂರಿ ನಮಸ್ಕರಿಸಿ, 'ಓಂ ನಮಃ ಶಿವಾಯ' ಎಂದು ಉಚ್ಚರಿಸಿದರು.

ಎಂಭತ್ತಾರನೆಯ ವಯಸ್ಸಿನಲ್ಲಿದ್ದರೂ ಮೂವತ್ತರ ಹರೆಯದ ಕಾಂತಿ, ಬಂಗಾರ ವರ್ಣ, ಹಕ್ಕಗೊಂಡ ನಿಲುವು, ಮುಗ್ಧ ಮಗುವಿನಂತಹ ನಿಷ್ಕಲ್ಮಶ,

Digitalized by e-Sahithya Documentation Forum
Sponsored by Sarayu Foundation Trust

ನಿರ್ವ್ಯಾಜ್ಯ ಪ್ರೇಮ ತುಂಬಿದ ಮುಖ. ಸ್ವಾಮೀಜಿಯವರ ಮುಖದಲ್ಲಿ ಸಂಭ್ರಮದ ಹೊನಲು ಹರಿಯುತ್ತಿತ್ತು. "ಎಷ್ಟೋ ವರ್ಷಗಳ ಬಳಿಕ ಕನ್ನಡ ಮಾತಿನ ಇಂಪು ಕೇಳುತ್ತಿದ್ದೇನೆ. ಬನ್ನಿ ಬನ್ನಿ; ಅಂತೂ ನಮ್ಮ ಮಾತಿಗೆ ಬೆಲೆಗೊಟ್ಟು ಬಂದಿರಲ್ಲ. ಅದಕ್ಕಾಗಿ ಅನಂತ ಕೋಟಿ ಪ್ರಣಾಮಗಳು". ಅವರ ಸಹೃದಯತೆಗೆ ಮೂಕಳಾದೆ. ಕಾರಿನ ಹಿಂಬದಿಯ ಸೀಟಿಗೆ ಮೆತ್ತನೆಯ ಕುತನಿ, ಕಾವಿಯ ಹಾಸು ಹಾಸಿ ಕರೆದೊಯ್ದರು.

ಫಾಲ್‌ಸಮ್ ರಸ್ತೆಯಲ್ಲಿರುವ ಶ್ರೀನಾದಬ್ರಹ್ಮಾನಂದಾಶ್ರಮಕ್ಕೆ ಕರೆದೊಯ್ದರು. ಅದೊಂದು ಎತ್ತರವಾದ, ಸುಂದರವಾದ ಕಟ್ಟಡ. ಅದರಲ್ಲಿ ಒಂದು ದೇವಾಲಯ, ಯೋಗ ಕೇಂದ್ರ, ನಿಸರ್ಗಚಿಕಿತ್ಸಾಲಯ, ಗ್ರಂಥ ಮಳಿಗೆ ಎಲ್ಲ ಇವೆ. ಒಳಗೆ ಕರೆದೊಯ್ದಾಗ ಆಶ್ರಮವಾಸಿಗಳೆಲ್ಲ ಬಂದು ನಮಸ್ಕರಿಸಿದರು. ಎಲ್ಲರೂ ಆ ನಾಡಿನವರೇ! ಅವರ ಸರಳತೆ ಸಂಸ್ಕೃತಿ ಕಂಡು ಅಚ್ಚರಿ ಎನಿಸಿತು. ಇಲ್ಲಿಂದ ಹೋಗಿರುವ ಹೆಚ್ಚಿನ ಪಾಲು ಭಾರತೀಯರು ತಮ್ಮ ಧರ್ಮ-ಸಂಸ್ಕೃತಿಗಳ ಬಗ್ಗೆ ಉದಾಸೀನತೆ ತಾಳಿ, ಕೇವಲ ಹಣ ಗಳಿಕೆಯಲ್ಲಿ ಮಾತ್ರ ಆಸಕ್ತರಾಗಿದ್ದರೆ, ಸಮುದ್ರ ಮಧ್ಯದಲ್ಲಿ ದ್ವೀಪಸಂಭವವೊಂದನ್ನು ನೋಡಿದಂತೆ ಅಮೆರಿಕನ್ನರ ನಾಡಿನಲ್ಲಿ ಭಾರತೀಯ ಸಂಸ್ಕೃತಿಯ ಪ್ರತಿಬಿಂಬವಾಗಿರುವ ಆಶ್ರಮಗಳನ್ನು ಕಾಣಬಹುದು. ಆತ್ಮಶಾಂತಿ ಕಾಣದ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಕೇವಲ ಹಣಗಳಿಸಲು ಬರುವ ಭಾರತೀಯರನ್ನು ಕಂಡಾಗ ಅಲ್ಲಿಯ ಅಧ್ಯಾತ್ಮ ಜೀವಿಗಳಿಗೆ ತುಂಬಾ ಅಚ್ಚರಿ.

ಕೈ ಕಾಲು ಮುಖತೊಳೆದು ಸುಧಾರಿಸಿಕೊಂಡು ಕುಳಿತಾಗ ಪೂಜ್ಯ ಸ್ವಾಮೀಜಿ ತಮ್ಮ ಜೀವನದ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟರು. ಸ್ವಾಮೀಜಿಯವರು ಜನ್ಮತಃ ಕರ್ನಾಟಕ ನಾಡಿನವರು; ಧಾರವಾಡ ಜಿಲ್ಲೆಯ ನರಗುಂದ ಅವರ ಜನ್ಮಸ್ಥಳ. ಸಂಗೀತ ವೃತ್ತಿಯನ್ನು ಸ್ವೀಕರಿಸಿ, ವಚನಗಳನ್ನು ಉತ್ತರಾದಿ ಪದ್ಧತಿಯಲ್ಲಿ ಹಾಡಲು ಮೊದಲಿಗೆ ಪ್ರಯತ್ನ ಮಾಡಿದವರು. ಕಾಲಾನಂತರದಲ್ಲಿ ವಿರಕ್ತಿಯುಂಟಾಗಿ, ಮನೆಯನ್ನು ಬಂದುಬಾಂಧವರನ್ನು ತ್ಯಜಿಸಿ ಋಷಿಕೇಶದತ್ತ ಮುನ್ನಡೆದರು. ಅಲ್ಲಿ ಸಾಧನಾಕಾಂಕ್ಷಿಗಳಾಗಿ ಗುರುವಿಗಾಗಿ ಅರಸುವಾಗಲೇ ಶ್ರೀ ಶಿವಾನಂದರ ದರ್ಶನ, ಆಶೀರ್ವಾದ, ಆಶ್ರಯ ಲಭ್ಯವಾದವು. ಅಂತರ್ಮುಖಿಗಳಾಗಿ ತಪಸ್ಸು ಮಾಡುವಾಗಲೇ ಶ್ರೀ ಶಿವಾನಂದ ಸಂಗೀತ ವಿದ್ಯಾಲಯದ ಸ್ಥಾಪನೆಯಾಗಿ ಅದರ ಪ್ರಿನ್ಸಿಪಾಲರಾಗಿ ಕಾಯಕಮಗ್ನರಾದರು. ಬಾಯಿ ಹಾಡುಗಾರಿಕೆಯಿಂದ ಹಿಡಿದು ಹಲವಾರು ವಾದ್ಯಗಳಲ್ಲಿ ಅದ್ಭುತ ಪರಿಣತಿ ಸಾಧಿಸಿರುವ ಸ್ವಾಮೀಜಿ, ಆಶ್ರಮದ ನಾದಯೋಗಿ. ಹೀಗಾಗಿ ಗುರುಗಳಿಂದ

ನಾದಬ್ರಹ್ಮಾನಂದರೆಂಬ ನಾಮಾಂಕಿತ ದಾನ. ಹಲವಾರು ಶಿಷ್ಯರಿಗೆ ಸಂಗೀತ ವಿದ್ಯೆಯಲ್ಲಿ ತರಬೇತಿ ನೀಡಿದರು.

ನಮ್ಮ-ಅವರ ಮೊದಲ ಭೇಟಿ 1966 ರಲ್ಲಿ, ನಾವು ಉತ್ತರ ಭಾರತ ಪ್ರವಾಸ ಕೈಗೊಂಡಾಗ; ಶಿವಾನಂದಾಶ್ರಮವನ್ನು ಸಂದರ್ಶಿಸಲು ಹೋದಾಗ, ಪೂಜ್ಯ ಸ್ವಾಮಿ ಚಿದಾನಂದರು ಉಭಯತರನ್ನು ಪರಿಚಯಿಸಿದರು. ಕೆಲವಾರು ತಿಂಗಳುಕಾಲ ಅನುಷ್ಠಾನ ಮಾಡುವ ಆಕಾಂಕ್ಷೆಯಿಂದ ನಿರ್ಜನ ಪ್ರದೇಶದಲ್ಲಿದ್ದ, ಜನವಸತಿ ಕಡಿಮೆ ಇದ್ದ ಮೋಕ್ಷಾಶ್ರಮದಲ್ಲಿ ನಾವಿದ್ದಾಗ ಆಗಾಗ ನಾದಬ್ರಹ್ಮಾನಂದರ ಆಗಮನ. ಆತ್ಮೀಯ ಸಂದರ್ಶನ ಮಾತುಕತೆಗಳ ಜೊತೆಗೆ ಅವರಿಗಿದ್ದ ಆಕರ್ಷಣೆಯ ಕೇಂದ್ರಬಿಂದು ನಮ್ಮ ಶಿಷ್ಯನೋರ್ವ ಮಾಡುತ್ತಿದ್ದ ಕರ್ನಾಟಕದ ಉಪಮಾ (ಉಪ್ಪಿಟ್ಟು)! ಅದೇ ತಿಂದು ತಿಂದು ನಿಮಗೇನೂ ವಿಶೇಷವೆನಿಸಲಿಕ್ಕಿಲ್ಲ. ಆದರೆ ಉತ್ತರ ಭಾರತದಲ್ಲಿ ಇಡ್ಲಿ, ದೋಸೆ, ಉಪ್ಪಿಟ್ಟು, ಸಾಂಬಾರ್ ತುಂಬಾ ಪ್ರಸಿದ್ಧ. ಸ್ವಾಮೀಜಿ ಬರುತ್ತಿದ್ದಂತೆಯೇ ನಮ್ಮ ಶಿಷ್ಯನನ್ನು ಕೇಳಿ ಉಪ್ಪಿಟ್ಟು ಮಾಡಿಸಿ ತಿಂದು ಪೂಜ್ಯ ಲಿಂಗಾನಂದ ಗುರೂಜಿಯವರೊಡನೆ ವಾಯು ಸೇವನೆಗೆ ಹೊರಡುತ್ತಿದ್ದರು.

ಒಮ್ಮೆ ಒಂದು ಪ್ರಸಂಗ ಜರುಗಿತು. ಅಂದು ಸಹಜವಾಗಿ ಅಡಿಗೆ ಶಿಷ್ಯ ಉಪ್ಪಿಟ್ಟು ಮಾಡಿದ್ದ; ತೀರಾ ರುಚಿಯಾಗಿತ್ತು. "ಇಂದು ನಾದ ಬ್ರಹ್ಮಾನಂದರಿಗೆ ಹೇಳಿ ಕಳಿಸಿದ್ದರೆ ಚೆನ್ನಾಗಿತ್ತು" ಎಂದು ಮಾತನಾಡಿಕೊಂಡೆವು. ಆಶ್ರಮದ ವ್ಯವಸ್ಥಾಪಕ ಕೃಪಾನಂದರು ನಾವೆಲ್ಲ ಮಾತನಾಡುತ್ತ ಕುಳಿತಿರುವಾಗಲೇ ಸ್ವಾಮೀಜಿಯವರ ಆಗಮನ. "ಬರಬೇಕು ಅಂತ ತುಂಬಾ ಹೃದಯ ತುಡಿಯಿತು" ಎಂದು, ತೆಗೆದು ಕಾಯ್ದಿಟ್ಟಿದ್ದ ಉಪ್ಪಿಟ್ಟು ಸವಿದರು. ಇದು ಮೊದಲನೆಯ ಪರಿಚಯ. ನಂತರ ನಾವು ಅನುಷ್ಠಾನ ಮುಗಿಸಿ, ತಾಂಡೂರಿಗೆ ಪ್ರವಚನದ ಕರೆ ಬಂದುದರಿಂದ, ಬಂದು ಬಿಟ್ಟೆವು.

ಅಮೆರಿಕಾದ ಕೆಲವು ಸಾಧಕರು ಶಿವಾನಂದಾಶ್ರಮ ಸಂದರ್ಶಿಸಿ, ನಾದಬ್ರಹ್ಮಾನಂದರ ಬಳಿ ಸಂಗೀತ ಕಲಿತು, ತಮ್ಮ ನಾಡಿಗೊಮ್ಮೆ ಬರಲು ಆಮಂತ್ರಿಸಿದರು. ಕುತೂಹಲ ಪ್ರಜ್ಞೆಯಿಂದ ಸ್ವಾಮೀಜಿ ಆಮಂತ್ರಣ ಸ್ವೀಕರಿಸಿ, ಹೋಗಿ ಆ ನಾಡಿನಲ್ಲಿ ಸಂಚರಿಸಿ ಅಲ್ಲಲ್ಲೇ ಸಂಗೀತ ಕಾರ್ಯಕ್ರಮ ಕೊಟ್ಟಾಗ ಅಲ್ಲಿಯ ಜನ ಬೆರಗಾದರಂತೆ. ಎರಡನೆ ಬಾರಿ ನಾವವರನ್ನು ಕಂಡುದು ಅಷ್ಟೇ ಅನಿರೀಕ್ಷಿತ. ಒಂದು ದಿನ ಬೆಂಗಳೂರಿನ ಬಸವ ಮಂಟಪಕ್ಕೆ ಆಗಮನ, ಈಗ ಮೂರು ನಾಲ್ಕು ವರ್ಷಗಳ ಕೆಳಗೆ. ಬೆಂಗಳೂರಿನಲ್ಲಿ ಆಶ್ರಮವಾಗಿದೆ ಎಂದು ಸುದ್ದಿ ಸಂಗ್ರಹಿಸಿದ ಅವರು ಅನೇಕರನ್ನು ಕೇಳಿದ್ದಾರೆ, "ಅಕ್ಕ ಮಹಾದೇವಿ ಇಲ್ಲಿ ಎಲ್ಲಿರುತ್ತಾರೆ?" ಎಂದು. ಯಾರಿಗೂ ಅರ್ಥವೇ ಆಗಿಲ್ಲ. ವಿಶ್ವೇಶ್ವರಪುರದ ಭಕ್ತರೊಬ್ಬರು, 'ಜಗದ್ಗುರು ಮಾತೆ ಮಹಾದೇವಿಯವರನ್ನೇ ನೀವು ಕೇಳುತ್ತಿ

Digitalized by e-Sahithya Documentation Forum
Sponsored by Sarayu Foundation Trust

ರುವುದು' ಎಂದಾಗ 'ಅವರೇ ಇರಬೇಕು' ಎಂದು ಅರಸಿಕೊಂಡು ಬಂದಿದ್ದರು. ಆದರೆ ಅಂದು 8–30 ರ ಟ್ರೇನಿಗೆ ತಯಾರಾಗಿ ಹೊರಟು ಸಂಜೆ 7ಕ್ಕೆ ಬಂದಿದ್ದಕಾರಣ ಅರ್ಧ ಗಂಟೆ ಸಹ ಇರಲು ಆಗಿರಲಿಲ್ಲ. ಮುಂದೆ ಅಮೇರಿಕಾದ ಶಿಷ್ಯವರ್ಗ ಅವರನ್ನು ಭಾರತಕ್ಕೆ ಮರಳಿ ಬಿಡದೆ, ಸಾನ್ ಫ್ರಾನ್ಸಿಸ್ಕೋದಲ್ಲೇ ಆಶ್ರಮವನ್ನು ನಿರ್ಮಾಣ ಮಾಡಿ, ಅಲ್ಲೇ ಇರಿಸಿಕೊಂಡಿದ್ದಾರೆ.

ಅವರದೀಗ ಸಂತೃಪ್ತ ಜೀವನ. ಅವರು ಹೇಳುತ್ತಾರೆ, ''ಅಧ್ಯಾತ್ಮ ಜೀವಿಗಳಿಗೆ ಈ ನಾಡು ನೆಮ್ಮದಿಯ ತಾಣ. ಈ ದೇಶಕ್ಕೆ ಬಂದು ಮರುಳಾಗಿ ಉಳಿಯುವ ಜನರಲ್ಲಿ ಮೂರು ಬಗೆ:

1. ಇಲ್ಲಿಯ ಸ್ವಚ್ಛಂದ ಜೀವನ, ಸುಖಭೋಗ ಮತ್ತು ಧಾರಾಳವಾದ ಹಣ ಪ್ರಾಪ್ತಿಗಾಗಿ ಉಳಿಯುವವರು ಒಂದು ರೀತಿ.

2. ಭಾರತದಂತಹ ಗೊಂದಲಮಯ ದೇಶದಲ್ಲಿ, ಅಪ್ರಮಾಣಿಕತೆ, ಜೀವನಾವಶ್ಯಕತೆಗಳ ಕೊರತೆ, ವಿಳಂಬ ಪ್ರವೃತ್ತಿಗಳನ್ನು ಎದುರಿಸಲಾರದೆ ಶಾಂತವಾದ ಕರ್ತವ್ಯಪರ ಜೀವನ ನಡೆಸಬೇಕೆನ್ನುವವರು ಇನ್ನೊಂದು ಬಗೆ.

3. ಅಧ್ಯಾತ್ಮ ಸಾಧನೆಗೆ ಬೇಕಾದ ಪ್ರಶಾಂತ ಜೀವನ ಇಲ್ಲಿ ಸಾಧ್ಯವಿದೆ. ನಮ್ಮಲ್ಲಿಯಂತೆ ಮಠಮಾನ್ಯಗಳಲ್ಲಿ ಸೇರಿ, ಮಠಾಧೀಶರನ್ನೇ ಆಳುತ್ತ, ಕಪಿಮುಷ್ಟಿಯಲ್ಲಿರಿಸಿಕೊಂಡು ಹೆಗ್ಗಣಗಳಂತೆ ತಿನ್ನುವ ಜನರಿಲ್ಲ. ತಮ್ಮ ಪಾಡಿಗೆ ತಾವಿರುತ್ತೇವೆ ಎಂದರೂ ಬಿಡದೆ ಅಪಪ್ರಚಾರ, ತೇಜೋವಧೆ ಮಾಡುವವರು, ಮತ್ಸರಿಸುವವರು ಇಲ್ಲ. ಆಸಕ್ತಿ ಇದ್ದವರು ಬಂದು ಪ್ರವಚನ ಕೇಳಿ, ಆತ್ಮವಿದ್ಯೆ ಅರಿತು ತಮ್ಮ ಪಾಡಿಗೆ ತಾವಿರುತ್ತಾರೆ. ಹೆದರಿಸಿ. ಬೆದರಿಸಿ ಹಣ ಕೇಳುವ ಪೀತ ಪತ್ರಿಕೆಗಳ ಹಾವಳಿಯಿಲ್ಲ. ಹೀಗಾಗಿ ತನ್ನಲ್ಲಿರುವ ಅಧ್ಯಾತ್ಮ ವಿದ್ಯೆಯನ್ನು ದಾನಮಾಡಿ, ಬಂದ ಹಣದಲ್ಲಿ ಪ್ರಶಾಂತವಾದ ಜೀವನ ನಡೆಸಿ ಅಂತರ್ಮುಖಿಗಳಾಗಿ ಸಾಧನೆ ಮಾಡಬೇಕೆನ್ನುವವರೂ ಈ ದೇಶದಲ್ಲಿ ಇರಲು ಇಚ್ಛಿಸುತ್ತಾರೆ.''

ನಾದಯೋಗ ಸಾಧನೆ

ಪೂಜ್ಯ ಸ್ವಾಮೀಜಿಯವರ ಸಾಧನೆ ಅಪೂರ್ವ. ಎಂಭತ್ತಾರನೆಯ ವಯಸ್ಸಿನಲ್ಲೂ ಅವರ ಕಂಠ ಅದ್ಭುತವಾಗಿದೆ. ಅಲ್ಲದೆ ಅಸಾಮಾನ್ಯ ಸಾಧನೆ ಮಾಡಿರುವ ಅವರು ಅಸಂಖ್ಯಾತ ವಾದ್ಯಗಳನ್ನು ನುಡಿಸಬಲ್ಲರು. ಮೂಗಿನಿಂದ, ತುಟಿ ಮುಚ್ಚಿ ಕೇವಲ ಗಂಟಲಿನಿಂದ ಸಂಗೀತವನ್ನು ಹಾಡಬಲ್ಲರು. ಉಸಿರನ್ನು ಅರ್ಧಗಂಟೆಗೂ ಮಿಗಿಲಾಗಿ ಸಂಪೂರ್ಣ ನಿಲ್ಲಿಸಿ, ತಬಲಾ ಬಾರಿಸಬಲ್ಲರು. ಅವರು ಉಸಿರನ್ನು ಸಂಪೂರ್ಣವಾಗಿ

ನಿಯಂತ್ರಿಸಿರುವುದನ್ನು ಇ.ಇ.ಜಿ, ಇ.ಸಿ.ಜಿ ಗಳ ಮುಖಾಂತರ ಅಮೆರಿಕಾದ ವೈದ್ಯರು ಪರೀಕ್ಷಿಸಿರುವ ಅನೇಕ ಫೋಟೋಗಳಿವೆ. ಮತ್ತು ಅಮೆರಿಕಾದ ಅನೇಕ ಪತ್ರಿಕೆಗಳು ಈ ಸಾಧನೆಯನ್ನು ಪ್ರಶಂಸಿಸಿವೆ.

ಇಡೀ ಮೈಯನ್ನು ಸ್ಥಿರವಾಗಿ ಸ್ತಂಭೀಕರಿಸಿ, ಕೇವಲ ಬೆರಳಿನ ತುದಿಗಳಿಂದ ತಬಲಾ ನುಡಿಸುವರು. ಅವರು ಸ್ವರ ಮಂಡಲ ಎಂಬ ಸ್ವಂತ ರಚನೆಯ ವಾದ್ಯದಿಂದ ವಿಶೇಷ ಸಂಗೀತ ನುಡಿಸಬಲ್ಲರು. ಇವರು ಅಮೆರಿಕಾ ನೋಡುತ್ತಾ ಹಾಗೆಯೇ ಕೆನಡಾಕ್ಕೆ ಹೋಗಿದ್ದರಂತೆ. ಕೇವಲ ಪ್ರವಾಸಿಗರಾಗಿ ಹೋಗಿದ್ದರು. ಆದರೆ ಅಲ್ಲಿಯ ಕೆಲವು ಭಾರತೀಯರು ಇವರದೊಂದು ಸಂಗೀತ ಕಾರ್ಯಕ್ರಮ ಇಟ್ಟುಕೊಂಡರಂತೆ. ವೀಸಾ ಮುಗಿಯುತ್ತದೆ ಆ ದಿನಾಂಕಕ್ಕೆ ಎಂದು ಇವರು ಹೇಳಿದರೆ ನಾವೆಲ್ಲ ಮುಂದುವರೆಸಲು ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿ, ಮರೆತೇ ಬಿಟ್ಟರಂತೆ. ಆಗ ಇವರು ಕಾರ್ಯಕ್ರಮ ಮುಗಿಸಿ ಹೊರಟಾಗ ಗಡಿಯಲ್ಲಿ ವೀಸಾ ಅಧಿಕಾರಿಗಳು ನೋಡಿದರಂತೆ. ತಾರೀಖು ಮುಗಿದ ಅವಧಿಯಲ್ಲಿ ಇದ್ದುದರಿಂದ ಲಾಕಪ್ಪಿನಲ್ಲಿ ಇಟ್ಟುಬಿಟ್ಟರಂತೆ. ಇವರಿಗೆ ಭಾಷೆ ಬೇರೆ ಬರದು. ಇಂಗ್ಲಿಷ್, ಸ್ಪಾನಿಷ್ ಏನೂ ಬರದು. ಎರಡು ದಿನ ಕಳೆದವಂತೆ. ಆಗ ಇವರು ಪೋಲೀಸರಿಗೆ ಮೇಲಧಿಕಾರಿಗಳ ಬಳಿಗೆ ಕರೆದೊಯ್ಯಲು ಸನ್ನೆ ಮಾಡಿ ಹೇಳಿ, ಹರುಕು ಮುರುಕು ಇಂಗ್ಲೀಷ್ ಪದಗಳನ್ನು ಉಚ್ಛರಿಸಿದರಂತೆ. ಅವರ ಅಧಿಕಾರಿಯ ಬಳಿ ತಮ್ಮ ವಾದ್ಯ ತೆಗೆದು ಸ್ವರ ಮಂಡಲ ಬಾರಿಸುತ್ತಲಿದ್ದಂತೆಯೇ ಮಂತ್ರ ಮುಗ್ಧನಾಗಿ ಕುಳಿತ ಇಮಿಗ್ರೇಷನ್ ಆಫೀಸರು ಕ್ಷಮೆ ಕೇಳಿ, ಆರು ತಿಂಗಳು ಕಾಲ ವೀಸಾ ವಿಸ್ತರಿಸಿ, ಗೌರವಿಸಿ ಕಳಿಸಿಕೊಟ್ಟನಂತೆ. 'ಈ ಸಂಗೀತವೇ ನನ್ನ ಸಂಪತ್ತು, ನನ್ನ ರಕ್ಷೆ' ಎನ್ನುತ್ತಾರೆ ಸ್ವಾಮೀಜಿ.

ಭಾಷೆ ಬರದಿದ್ದಾಗ ಈ ದೇಶದಲ್ಲಿ ಕಾಲ ಕಳೆಯುವುದು ಕಷ್ಟಸಾಧ್ಯ ಎನ್ನುವಾಗಲೇ ಶಿವೇಚ್ಛೆಯಿಂದ ಓರ್ವ ಶಿಷ್ಯೆ ದೊರತಿದ್ದಾಳೆ. ಆಕೆಗೆ ಗುರುಗಳು ಇಟ್ಟ ಹೆಸರು ಮಾತಾ ಪಾರ್ವತಿದೇವಿ. ಪಾರ್ವತಿ ವೃದ್ಧಾಪ್ಯದಲ್ಲಿರುವ ಸ್ವಾಮೀಜಿಯವರಿಗೆ ತಾಯಿಯೋಪಾದಿಯಲ್ಲಿ ಜೋಪಾನ ಮಾಡುತ್ತಾಳೆ. ಸಮಸ್ತ ಜವಾಬ್ದಾರಿ ಹೊತ್ತಿದ್ದಾಳೆ. ಮಗಳಂತೆ ಸೇವೆ ಮಾಡುತ್ತಾಳೆ. ಶಿಷ್ಯಳಾಗಿ ಸಂಗೀತವನ್ನು ಕಲಿಯುತ್ತ, · ಯೋಗಾಭ್ಯಾಸ ಮಾಡುತ್ತಿದ್ದಾಳೆ. ಆಕೆಯ ಬಾಯಿಯಲ್ಲಿ ಬರುವ ಹಿಂದುಸ್ತಾನಿ ಗಾಯನ, ಭಜನೆ, ಬ್ರಹ್ಮ ಮುರಾರಿ ಸುರಾರ್ಚಿತ ಲಿಂಗಂ ಕೇಳಿದರೆ ಸಮಾಧಿ ಸ್ಥಿತಿ ಪ್ರಾಪ್ತಿಯಾಗುತ್ತದೆ. ವೃದ್ಧಾಪ್ಯದಲ್ಲಿರುವ ಸ್ವಾಮೀಜಿಯವರ ಊಟೋಪಚಾರ ನಿರ್ವಹಿಸುವುದು ಕಂಡಾಗ, ಹೃದಯ ತುಂಬಿ ಬರುತ್ತದೆ. ಎರಡು ದಿನ ಕಾಲ ನಾನು ಆ ಆಶ್ರಮದಲ್ಲಿದ್ದಾಗ ನಮ್ಮ ಸೇವೆ ಮಾಡಿದ್ದನ್ನು ಕಂಡು ಮೂಕವಿಸ್ಮಿತಳಾದೆ. ''ಪಾರ್ವತಿ ಒಂದು

Digitalized by e-Sahithya Documentation Forum
Sponsored by Sarayu Foundation Trust

ಅನರ್ಘ್ಯ ರತ್ನ ಸ್ವಾಮೀಜಿ-!" ಎಂದು ಉದ್ಗಾರ ತೆಗೆದು ಹೇಳಿದೆ, "ಒಳ್ಳೆಯ ಗುರುಗಳನ್ನು ಪಡೆಯುವುದು ಶಿಷ್ಯನಿಗೆ ಎಷ್ಟು ಅಪೂರ್ವ ಭಾಗ್ಯವೋ, ಒಳ್ಳೆಯ ಶಿಷ್ಯರನ್ನು ಪಡೆಯುವುದು ಗುರುಗಳಿಗೆ ಅಷ್ಟೇ ಸೌಭಾಗ್ಯ !''


ಉಪಕಾರ ಮಾಡಿಸಿಕೊಂಡು ಅಪಕಾರ ಮರಳಿಸುವ, ಅನ್ನ ಹಾಕಿದ ಕೈಗೆ ಕಚ್ಚುವ, ಆಶ್ರಯ ನೀಡಿದ ಮನೆಯ ಛಾವಣಿ ಕತ್ತರಿಸುವ, ಉಂಡಮನೆಯ ಜಂತೆ ಎಣಿಸುವ ದ್ರೋಹಿಗಳ ಸಂಖ್ಯೆಯೇ ಹೆಚ್ಚಿರುವ ಲೋಕದಲ್ಲಿ, ಅಮೆರಿಕನ್ ಹುಡುಗಿಯೋರ್ವಳು ತನ್ನನ್ನು ತಾನು ಸಮರ್ಪಿಸಿಕೊಂಡು ಭಾರತೀಯ ಯೋಗ-ಸಂಗೀತಗಳನ್ನು ಅಳವಡಿಸಿಕೊಂಡು, ಹರಪೂಜೆ, ಗುರುಸೇವೆ ಮಾಡುವುದು ಕಂಡಾಗ ಅಶ್ಚರ್ಯವೆನಿಸದಿರದು.

"ನಿಜ ಮಾತಾಜಿ, ಪಾರ್ವತಿ ಇಲ್ಲದಿದ್ದರೆ ಇಷ್ಟೆಲ್ಲ ಆಶ್ರಮವನ್ನು ನಿರ್ವಹಿಸುವುದು ಕಷ್ಟವಾಗುತ್ತಿತ್ತು. ಕಷ್ಟವೇನು ಸ್ಥಾಪನೆಯೇ ಸಾಧ್ಯವಿರಲಿಲ್ಲ.'' ಎಂದರು ಸ್ವಾಮೀಜಿ. ಇಲ್ಲಿಯ ಜನತಾ ಬಜಾರನ್ನು ಮೀರಿಸುವಂತಹ ಒಂದು ಸುಪ್ರಸಿದ್ಧ, ಶ್ರೀಮಂತ ಮಾಲ್‌ನ ಮಾಲಿಕರೊಬ್ಬರ ಮಗಳು ಪಾರ್ವತಿ. ಸಾನ್ ಫ್ರಾನ್ಸಿಸ್ಕೋದ ಆ ತರುಣಿ ಭಾರತದ ಪ್ರವಾಸ ಕೈಗೊಂಡಾಗ ಶಿವಾನಂದಾಶ್ರಮದ ಸಂದರ್ಶನ. ಅಮೆರಿಕಾಕ್ಕೆ ಸ್ವಾಮೀಜಿ ಬಂದಾಗ ಅವರೊಡನೆ ಪ್ರವಾಸ. ಸಂಗೀತ ಕಲಿಕೆಯ ಆರಂಭ. ನಂತರ ಸಂಗೀತ, ಯೋಗವಿದ್ಯೆಗಾಗಿ ಬಾಳಿನ ಸಮರ್ಪಣೆ. ಗುರುಗಳಿಂದ ಸಂಗೀತ ಕಲಿತು, ಅವರಿಗೆ ಇಂಗ್ಲಿಷ್ ಕಲಿಸುತ್ತಾಳೆ.

ದೂರ ದೂರದಿಂದ ಕಾರ್ಯಕ್ರಮದ ಆಮಂತ್ರಣ ಬಂದಾಗ ತಾನೇ ಎಲ್ಲ ವ್ಯವಹಾರ ಮಾಡಿ, ಗುರುಗಳನ್ನು ಕರೆದೊಯ್ದು ಸಂಗೀತ ಕಛೇರಿ ನಡೆಸಿ, ತಬಲಾ ಬಾರಿಸಿ ಬಂದ ಹಣವನ್ನು ಕೊಡುಗೆಯಾಗಿ ಸ್ವೀಕರಿಸಿ, ಆಶ್ರಮದ-ಗುರುಗಳ ಸೇವಾಕಾರ್ಯ ನಿರ್ವಹಿಸುತ್ತಾಳೆ. ಸರಳವಾದ ಬದುಕನ್ನು ನಡೆಸುವ ಸ್ವಾಮೀಜಿ ಆಶ್ರಮದಲ್ಲಿ ಸಂಗೀತ ಪಾಠ ಹೇಳುತ್ತಾರೆ. ಉಳಿಕೆಯ ಹಣವನ್ನು ತಮ್ಮ ಸ್ವಂತ ಸ್ಥಳವಾದ ನರಗುಂದದಲ್ಲಿ ಕಾಲೇಜು ಕಟ್ಟಿಸಲು ದಾನ ಮಾಡಿದ್ದಾರೆ. ಪಾರ್ವತಿ ಕಣ್ಮುಚ್ಚಿಕೊಂಡು ಭಜನೆ ಮಾಡುತ್ತಲಿದ್ದರೆ, ತಬಲಾ ಬಾರಿಸುತ್ತಿದ್ದರೆ ಸಾಕ್ಷಾತ್ ಉಮೆಯನ್ನು ನೋಡಿದ ಅನುಭವ ನನಗೆ. ಆಕೆಯ ಬಗ್ಗೆ ಮಾತೃವಾತ್ಸಲ್ಯ ಹರಿಯುತ್ತಿತ್ತು. "ನೀವು ನಮ್ಮೊಟ್ಟಿಗೆ ಇದ್ದುದು ಎರಡೇ ದಿನಗಳಾದರೂ ಜನ್ಮಜನ್ಮದ ಋಣಾನುಬಂಧ ಎನಿಸುತ್ತಿದೆ ಮಾತಾಜಿ ನೀವು ಅಗಲಿದರೆ ನಾವು ಹಸುವನ್ನಗಲಿದ ಕರುಗಳಾಗುತ್ತೇವೆ.'' ಎಂದು ಆಕೆ ಕಣ್ಣು ಸಜಲವಾಗಿ ನಿಂತಾಗ ನನಗೂ ಹೃದಯ ತುಂಬಿ ಬಂದಿತು.

"ನಿಷ್ಠೆಯಿಂದ ಕರ್ತವ್ಯ ಮಾಡು ಪಾರ್ವತಿ. ನೀನೊಂದು ರತ್ನ. ಸ್ವಾಮೀಜಿಯವರನ್ನು ಮಗಳಾಗಿ, ತಾಯಿಯಾಗಿ ನೋಡಿಕೋ; ಉನ್ನತ ಸಿದ್ಧಿಹೊಂದು''. ನಾನಂದಾಗ "ನಿಮ್ಮ ಕೃಪೆ ಇರಲಿ'' ಎಂದು ಪಾದಕ್ಕೆ ನಮಸ್ಕರಿಸಿದಳು.

ಅಮೆರಿಕಾದಲ್ಲಿ ನಾನು ಕಳೆದ 118 ದಿವಸಗಳಲ್ಲಿ ಸಾನ್‌ಫ್ರಾನ್ಸಿಸ್ಕೋದಲ್ಲಿ ಕಳೆದ ಎರಡು ದಿನಗಳು ಅಪೂರ್ವ ಕ್ಷಣಗಳು. ಸಹೃದಯತೆಯ ಸಾಕಾರವಾದ ಪೂಜ್ಯ ಸ್ವಾಮೀಜಿ, ಶ್ರದ್ಧೆ-ಭಕ್ತಿ-ನಿಷ್ಠೆಗಳ ತ್ರಿವೇಣಿ ಸಂಗಮವಾದ ಮಾತಾ ಪಾರ್ವತಿ, ಸರಳತೆ-ತ್ಯಾಗಗಳ ಪ್ರತೀಕವಾದ ಸಾಧಕ-ಸಾಧಕಿಯರು. 20ನೆಯ ತಾರೀಖು ಬೆಳಿಗ್ಗೆ 10-30ಕ್ಕೆ ತಲ್ಪಿ, ಸಂಜೆ ಸ್ವಲ್ಪ ಹೊತ್ತು ಭಜನೆ ಮಾಡಿಸಿ ಪ್ರವಚನ ಮಾಡಿದಾಗ ಸಾಧಕ-ಸಾಧಕಿಯರು ತುಂಬಾ ಹರ್ಷಿಸಿದರು. ನಾದಯೋಗಿ ನಾದಬ್ರಹ್ಮಾನಂದಜಿಯವರು ಆಶ್ರಮದವರನ್ನೆಲ್ಲ ಸೇರಿಸಿ ಸಾಮೂಹಿಕ ಭಜನೆ ಮಾಡಿದಾಗ ಅತೀವ ಆನಂದವೆನಿಸಿತು. ಪಾರ್ವತಿಯು ಮಧುರವಾಗಿ ಶಾಸ್ತ್ರೀಯವಾಗಿ ತಬಲಾ ಬಾರಿಸಿದಳು.




ಪೂಜ್ಯ ನಾದಬ್ರಹ್ಮಾನಂದರ ಸಂಗೀತದಲ್ಲಿ ತಬಲಾ ಬಾರಿಸುತ್ತಲಿರುವ ಮಾತಾ ಪಾರ್ವತಿದೇವಿ

Digitalized by e-Sahithya Documentation Forum
Sponsored by Sarayu Foundation Trust

ಮರುದಿನ ಅಂದರೆ 21-2-1981 ರಂದು ಬೆಳಿಗ್ಗೆ ಸಾಮೂಹಿಕ ಲಿಂಗಪೂಜೆ ಇಟ್ಟು, ನಾನು ಇಷ್ಟಲಿಂಗ ವಿಜ್ಞಾನವನ್ನು ವಿವರಿಸಿ, ಅದರ ಹಿಂದಿರುವ ಸರ್ವ ಸಮನ್ವಯಯೋಗದ ವಿವರಣೆ ನೀಡಿದಾಗ, ಆಶ್ರಮದ ಪ್ರಮುಖ ಮಾತೃಸಾಧಕಿ ಮಾತಾ ಸರಸ್ವತಿ ದೇವಿಯೇ ಆದಿಯಾಗಿ ಎಲ್ಲರೂ ಬೆರಗಾದರು. ಇಂಗ್ಲೀಷಿನಲ್ಲಿ ವಚನಗಳನ್ನು ಹಾಡುತ್ತಾ, ಭಾವತನ್ಮಯತೆಯಿಂದ ಹಾಡಿ ನಾನು ಲಿಂಗಪೂಜೆ ಮಾಡಿದಾಗ ಎಲ್ಲರೂ ಆನಂದ ಸರಸಿಯಲ್ಲಿ ತೇಲಾಡಿದರು. "ಓಂ ನಮಃಶಿವಾಯ"ವನ್ನು ಸಾಮೂಹಿಕ ಜಪ ಮಾಡಿಸಿದಾಗ ಹೊರಹೊಮ್ಮಿದ ನಾದ ಆಶ್ರಮದ ಆವರಣವನ್ನೆಲ್ಲ ತುಂಬಿ, ಚೇತನಿಸಿತು. ಅವರುಗಳು ಜಪದಲ್ಲಿ ಭಾಗಿಯಾದದ್ದು, ಇಷ್ಟ ಲಿಂಗಪೂಜೆ ನೋಡಿ ತನ್ಮಯರಾಗಿದ್ದು ಕಂಡಾಗ ನಮ್ಮ ಜನರ ಬಗ್ಗೆಯೇ ಜಿಗುಪ್ಸೆ. ಎಷ್ಟೇ ಜಪ ಮಾಡಿಸಿದರೂ ಬಾಯಿ ತೆರೆಯದೆ ಆಢ್ಯತೆಯಿಂದ ಕುಳಿತುಕೊಳ್ಳುವ ಹಿಂದುಗಳು ಭಾರತದಲ್ಲೂ ಉಂಟು, ಅಮೆರಿಕಾದಲ್ಲಿಯೂ ಉಂಟು. ಆದರೆ ಅಮೇರಿಕನ್ನರು ನಾಲಿಗೆ ಹೊರಳದಿದ್ದರೂ ಕಷ್ಟಪಟ್ಟಾದರೂ ಉಚ್ಚಾರ ಮಾಡುತ್ತಾರೆ, ಹೃದಯ ತುಂಬಿ ಹಾಡುತ್ತಾರೆ.

ಪೂಜಾನಂತರ ತೀರ್ಥ-ಪ್ರಸಾದ ವಿತರಣೆ. ಆಗಲೂ ಅಷ್ಟೇ! ವಿಭೂತಿ ಹಚ್ಚುವುದನ್ನು ಮರೆತರೆ ವಿಭೂತಿ ಹಚ್ಚಿಸಿಕೊಂಡು, ಭಯಭಕ್ತಿಯಿಂದ ತೀರ್ಥ ಪ್ರಸಾದ ಪಡೆದು ಹೋಗುತ್ತಿದ್ದರು. ಅಂದು ಸಂಜೆ ಪ್ರವಚನ: ಹೊರಗಿನಿಂದಲೂ ದೂರವಾಣಿಯಲ್ಲೇ ಆಮಂತ್ರಣ ಸ್ವೀಕರಿಸಿ ಅನೇಕ ಸದ್ಭಕ್ತರು ಬಂದಿದ್ದರು. ಸರಿಯಾದ ಕಾಲಾವಕಾಶವಿದ್ದಿದ್ದರೆ ದೊಡ್ಡ ಕಾರ್ಯಕ್ರಮ ಇಡಿಸಬಹುದಾಗಿತ್ತು ಎಂದು ಪೇಚಾಡಿಕೊಂಡರು. ಮಾತಾ ಸರಸ್ವತಿ ಸ್ವಾಗತಿಸಿದರು. ಪೂಜ್ಯ ಸ್ವಾಮೀಜಿ ನಮ್ಮ ಪರಿಚಯ, ಸಾಧನೆಯ ಹಿರಿಮೆಯನ್ನು ಕುರಿತು ಹೇಳಿದರು. "ನಮ್ಮ ಕರ್ನಾಟಕದಲ್ಲಿ ಅಕ್ಕಮಹಾದೇವಿ ಎಂಬ ವೀರ ವಿರಾಗಿಣಿ ಆಗಿಹೋದಳು. ಅವರ ಅವತಾರವೇ ಈ ತಾಯಿ ಎಂದು ನನ್ನ ನಂಬುಗೆ. ಸ್ತ್ರೀಯಾಗಿ ಜನಿಸಿಯೂ ಎಲ್ಲ ಕಷ್ಟನಿಷ್ಠುರಗಳನ್ನು ಸಹಿಸಿಕೊಂಡು ಪ್ರಪ್ರಥಮ ಗುರುವಾಗಿ ಕಂಗೊಳಿಸುತ್ತಿರುವರು" ಎಂದು ತೀರಾ ಅಭಿಮಾನದಿಂದ ಪರಿಚಯಿಸಿದರು. ಎಲ್ಲರ ಅಪೇಕ್ಷೆಯ ಮೇರೆಗೆ ಅಕ್ಕಮಹಾದೇವಿಯ ಜೀವನ ಚರಿತ್ರೆ ಹೇಳಿದೆ; ನನ್ನ ಜೀವನದ ಅಧ್ಯಾತ್ಮಿಕ ಪ್ರಗತಿಯ ಹಂತಗಳನ್ನು ಹೇಳಿದೆ. ಹರ್ಷವದನರಾಗಿ ಆಲಿಸಿದ ಎಲ್ಲರೂ ಕೃತಜ್ಞತೆಗಳನ್ನು ಸಲ್ಲಿಸಿದರು. ಪೂಜ್ಯ ಗುರೂಜಿಯವರಿಗಾಗಿ ನಾದಬ್ರಹ್ಮಾನಂದರು ಬಟ್ಟೆಗಳನ್ನು ಖರೀದಿಸಲು ಕಾಣಿಕೆ ನೀಡಿದರು. ಅಲ್ಲಿ ಸಮಾವೇಶವಾಗಿದ್ದ ಸದ್ಭಕ್ತರು ಸಂಗ್ರಹಿಸಿ, ತಮ್ಮ ಕೊಡುಗೆ 250 ಡಾಲರುಗಳನ್ನು ತಂದು ಸಮರ್ಪಿಸಿದರು.



ಶ್ರೀ ನಾದಬ್ರಹ್ಮಾನಂದಾಶ್ರಮದಲ್ಲಿ ಪ್ರವಚನ ಮಾಡುತ್ತಿರುವ ಮಾತಾಜಿಯವರು

ರಾತ್ರಿಯ ಪೂಜೆ-ಪ್ರಸಾದ ಮುಗಿಸಿ ರಾತ್ರಿ 12 ಕ್ಕೆ ಇದ್ದ ಫ್ಲೈಟಿಗೆ ಹೊರಡಲು ಸಿದ್ಧರಾದೆವು. ಟೆನೆಸ್ಸಿಯ ನ್ಯಾಶವೀಲ್‌ಗೆ ಮುಂದೆ ಹೋಗಬೇಕಾಗಿತ್ತು. ಮಾರ್ಗ ಮಧ್ಯದಲ್ಲಿ ಡಲ್ಲಾಸ್‌ನಲ್ಲಿ ಬದಲಾಯಿಸಬೇಕಿತ್ತು. ಓರ್ವ ಬೌದ್ಧ ಸನ್ಯಾಸಿಗಳು ಅಂದಿನ ಕಾರ್ಯಕ್ರಮಕ್ಕೆ ಬಂದಿದ್ದರು. ಅವರ ಕಾರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮುಂದೆ ಹಾದುಹೋಗಬೇಕಾದ್ದರಿಂದ ಅಲ್ಲೇ ಬಿಟ್ಟು ಹೋಗುವುದಾಗಿ ಹೇಳಿದರು.

ಆಶ್ರಮವಾಸಿಗಳು ಬೀಳ್ಕೊಡಲು ನೆರೆದರು. ಕಳೆದುದು ಒಂದೂವರೆ ದಿನವನ್ನು. ಆದರೂ ಅಪಾರವಾದ ಭಕ್ತಿ-ಶ್ರದ್ಧೆಗಳನ್ನು ಆಗಲೇ ಬೆಳೆಸಿಕೊಂಡು ಬಿಟ್ಟಿದ್ದರು. ಮರುಭೂಮಿಯ ನಡುವೆ ಓಯಸಿಸ್ ಅನ್ನು ಕಂಡಂತಹ ಅನುಭವ ಎರಡು ದಿವಸ ಆಶ್ರಮದಲ್ಲಿದ್ದಾಗ. "ಈ ಆಶ್ರಮ ಸದಾ ನಿಮ್ಮದು. ಬಂದಾಗಲೆಲ್ಲ ಮರೆಯದೆ ಬನ್ನಿ" ಮಾತಾ ಸರಸ್ವತಿ ಹೇಳಿದರು. ಪೂಜ್ಯ ಸ್ವಾಮೀಜಿಯವರಂತೂ "ನೀವು ಬಂದುದರಿಂದ ನಮಗಾದ ಆನಂದ ಅಷ್ಟಿಷ್ಟಲ್ಲ. ಅದನ್ನು ಮರೆಯಲಾರೆವು" ಎಂದರು.

Digitalized by e-Sahithya Documentation Forum
Sponsored by Sarayu Foundation Trust

"ತಾಯಿಯನ್ನಗಲುವಂತಾಗಿದೆ" ಪಾರ್ವತಿ ನುಡಿದಳು. ಎಂಥ ಭಕ್ತಿಪೂರ್ಣ, ಆತ್ಮೀಯ ಬೆಸುಗೆ! ಇದನ್ನೇ ಮೌನವಾಗಿ ಸವಿಯುತ್ತ ಕಾರನ್ನು ಹತ್ತಿದೆವು.

ಪೂಜ್ಯ ಸ್ವಾಮೀಜಿ ಬೀಳ್ಕೊಡಲು ನಿಂತಿದ್ದರು. ನಿರ್ಲಿಪ್ತ ತೇಜಸ್ಸು, ಕಾಂತಿ ಯುಕ್ತವಾಗಿ ಮಿನುಗುವ ಕಣ್ಣುಗಳು, ಮುಖದಲ್ಲಿ ಮಗುವಿನ ಮುಗ್ಧತೆ. ಎಂತಹ ನಿಷ್ಕಲ್ಮಶ ಹೃದಯ! ಕಾವಿ ಬಟ್ಟೆ ಹಾಕಿದ ಮಾತ್ರಕ್ಕೆ ಅಹಂಕಾರದಿಂದ ಬೀಗುವ ಸ್ವಾಮಿಗಳು ತುಂಬಿರುವಾಗ, ಕಾವಿ ಅತ್ತಲಿರಲಿ ಬರೀ ಯಾವುದಾದರೊಂದು ಸ್ವಕಲ್ಪಿತ ಶ್ರೇಷ್ಟ ಜಾತಿಯಲ್ಲಿ ಹುಟ್ಟಿದ್ದನ್ನೇ ಒಂದು ಮಹಾನ್ ಅರ್ಹತೆ ಎಂದು ಕೊಂಡು ಅಂತಃಸತ್ವವಿಲ್ಲದಿದ್ದರೂ ಹಮ್ಮಿನಿಂದ ವರ್ತಿಸುವ ಮಠಾಧೀಶರು ಹೇರಳ ವಾಗಿರುವಾಗ ವಿದ್ಯೆ-ತಪಸ್ಸು-ಆತ್ಮಸಿದ್ಧಿ ಎಲ್ಲ ಇದ್ದೂ ಇಂಥ ವಿನಯಪೂರ್ಣ, ತೇಜೋಪೂರ್ಣ ವ್ಯಕ್ತಿತ್ವವಿರುವ ಸ್ವಾಮೀಜಿ ಎಂಥಾ ಪರಿಪಕ್ವ ಜೀವ! ಮನದಲ್ಲಿ ಭಾವಿಸುವಾಗಲೇ ಕಾರು ಚಲಿಸಿತು; ಸ್ವಾಮೀಜಿ ಮತ್ತು ಆಶ್ರಮವಾಸಿಗಳು ಕೈ ಬೀಸುತ್ತಿದ್ದರು. ★

ದೊಡ್ಡವರ ಮಾತು

ಮನಸ್ಸಿಗೆ ಬಂದಂತೆ ಖರ್ಚು ಮಾಡುವುದು ಔದಾರ್ಯವೇನಲ್ಲ. ಔದಾರ್ಯ ದಲ್ಲಿ ಆದರ್ಶವಿದೆ, ಸಾರ್ಥಕತೆ, ಸದ್ವಿನಿಯೋಗವಿದೆ. ಅತಿಯಾಗಿ ಖರ್ಚು ಮಾಡುವಿಕೆಯಲ್ಲಿ ಬೇಜವಾಬ್ದಾರಿತನ, ಸ್ವಾರ್ಥ ಮತ್ತು ಅಹಂಕಾರವಿದೆ.

—ಜಗದ್ಗುರು ಮಾತಾಜಿ

ನ್ಯಾಯ ಪ್ರಜ್ಞೆಯ ವೃಕ್ಷ ತಳೆಯುವ ಹೂವೇ ಔದಾರ್ಯದ ದಾನ

—ನಥೇನಿಯಲ್ ಹ್ಯಾಥರ್ನ್

ಔದಾರ್ಯದ ಕೈಯಿ ಕತ್ತಿ ಹಿಡಿದ ಕೈಗಿಂತಲೂ ಬಲವುಳ್ಳುದು

—ಸೌದಿ, ಗುಲಿಸ್ತಾನ

ಕೆರೆಯ ಕಟ್ಟೆಗೊಂದು ಕೋಡಿ ಇದ್ದಂತೆ, ಧನ ಸಂಪತ್ತಿಗಿರುವ ಕೋಡಿಯೇ ದಾನ

—ಅಕ್ಕಮಹಾದೇವಿ

ಮಲ್ಲೇಶ್ವರಮ್ ಬಡಾವಣೆಯಲ್ಲಿ ನಡೆದ ವಿಶ್ವಧರ್ಮ ಪ್ರವಚನದ ಮುಕ್ತಾಯ

ವರದಿ: ಮಾತೆ ಗಂಗಾದೇವಿ

ಕರ್ನಾಟಕದ ರಾಜಧಾನಿ ಬೆಂಗಳೂರು ನಗರದ ಮಲ್ಲೇಶ್ವರಮ್ ಖ್ಯಾತಿವೆತ್ತ ಬಡಾವಣೆ. ಅನೇಕ ಬುದ್ಧಿಜೀವಿಗಳು, ಸುಸಂಸ್ಕೃತರು ವಾಸಿಸುವ ಬೆಂಗಳೂರು ಭಾಗ. ಸುಂದರವಾದ, ವಿಶಾಲವಾದ ಬಯಲು ದಿ. 13-4-1981 ರಿಂದ 7-6-1981 ರ ವರೆಗೆ ಅವಿಮುಕ್ತ ಕ್ಷೇತ್ರವಾಗಿ ವಿಜೃಂಭಿಸಿತು. ಸರ್ಕಾರಿ ಮಾಧ್ಯಮಿಕ ಶಾಲೆಯ ಆಟದ ಮೈದಾನ ಆತ್ಮಜ್ಞಾನದ ಕೇಂದ್ರವಾಗಿ 56 ದಿವಸಗಳು ಕಂಗೊಳಿಸಿ, ಅಸಂಖ್ಯಾತ ಮುಮುಕ್ಷುಗಳನ್ನು ಆಕರ್ಷಿಸಿತು. ಪ್ರತಿನಿತ್ಯ 6-45ರಿಂದ 9-00ರ ವರೆಗೆ ನಿರರ್ಗಳವಾಗಿ ಅವ್ಯಾಹತವಾಗಿ ನಡೆದ ಕಾರ್ಯಕ್ರಮ 7-6-1981 ರಂದು ಮಂಗಲಗೊಂಡಿತು.

ದಿನಾಂಕ 24-5-1981 ರಂದು ಸುಪ್ರಸಿದ್ಧ ಯಕ್ಷಿಣೀ ವಿದ್ಯಾಪ್ರವೀಣ ಪ್ರೊ. ಶಿವನ್‌ರವರು ಅದ್ಭುತ ಚಮತ್ಕಾರಗಳನ್ನು ಉಚಿತವಾಗಿ ಪ್ರದರ್ಶಿಸಿ, ಆ ಪ್ರದರ್ಶನದಿಂದ ಸ್ವಯಂ ಇಚ್ಛೆಯ ಕೊಡುಗೆಯಾಗಿ ಬಂದ 990-00 ರೂಗಳನ್ನು ವಿಶ್ವಕಲ್ಯಾಣ ಮಿಷನ್ ಸಂಸ್ಥೆಗೆ ದಾನವಾಗಿ ನೀಡಿದರು.

ದಿನಾಂಕ 7-6-1981 ರಂದು ಪ್ರವಚನದ ಮುಕ್ತಾಯ ಸಮಾರಂಭ. ಸಮಾರಂಭದ ನೇತೃತ್ವವನ್ನು ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು ವಹಿಸಿದ್ದರು. ಅಧ್ಯಕ್ಷರಾಗಿ ಶ್ರೀ ಮ. ನಿ. ಪ್ರ. ಬಸವಲಿಂಗಸ್ವಾಮಿಗಳು ಆಗಮಿಸಿದ್ದರು. ಸುಪ್ರಸಿದ್ಧ ಸಾಹಿತಿಗಳೂ, ಮಹಿಳಾ ಸಂಘಟಕ ಕಾರ್ಯಕರ್ತೆಯರೂ ಆದ ಶ್ರೀಮತಿ ಎ. ಪಂಕಜಾರವರು ಮಲ್ಲೇಶ್ವರಮ್ ಬಡಾವಣೆಯ ನಾಗರಿಕರ ಪರವಾಗಿ ಪೂಜ್ಯ ಶ್ರೀ ಮಾತಾಜಿಯವರನ್ನು ಸನ್ಮಾನಿಸಿದರು. ಒಂದು ಶಾಲನ್ನು ಹೊದಿಸಿ, ಫಲ ಪುಷ್ಪಗಳ ಸಮೇತವಾಗಿ ಕಾಣಿಕೆಯನ್ನು ಸಮರ್ಪಿಸಿದರು. ಪೂಜ್ಯ ಮಾತಾಜಿಯವರ ಘನ ವ್ಯಕ್ತಿತ್ವವನ್ನು, ಅವರು ಕೈಗೊಂಡ ಅಪೂರ್ವ ಧರ್ಮಪ್ರಚಾರ ಕಾರ್ಯವನ್ನು, ಅವರ ಪ್ರವಚನದಿಂದ ಸಮಾಜದ ಮೇಲಾಗುವ ಪರಿಣಾಮಗಳನ್ನು ಮನಂಬೊಗು ವಂತೆ ವಿವರಿಸಿ, ಪೂಜ್ಯರು ಕೈಗೊಂಡ ಮಹಾಮಣಿಹದ ಸರ್ವತೋಮುಖ ಯಶಸ್ಸು

Digitalized by e-Sahithya Documentation Forum
Sponsored by Sarayu Foundation Trust

ಕೋರಿದರು. ಶ್ರೀ ಮ. ನಿ. ಪ್ರ ಬಸವಲಿಂಗಸ್ವಾಮಿಗಳು ಪೂಜ್ಯ ಮಾತಾಜಿಯವರು ವ್ಯಕ್ತಿಯಲ್ಲ ದೈವೀಶಕ್ತಿ ಎಂದು ಉದ್ಗರಿಸಿ, ಅವರಾಡುವ ಮಾತು ಕೇವಲ ಪಾಂಡಿತ್ಯದಿಂದ ಬರುವಂಥದಲ್ಲ, ಅನುಭಾವದ ನಿರರ್ಗಳಧಾರೆ, ದೈವೀವಾಣಿ ಎಂದು ಕೊಂಡಾಡಿದರು. ಅವರ ಮಸ್ತಕದಲ್ಲಿ ಚಿಚ್ಛಕ್ತಿ ಉಮೆಯೂ, ನಾಲಿಗೆಯಲ್ಲಿ ಜ್ಞಾನಶಕ್ತಿ ಸರಸ್ವತಿಯೂ, ಹಸ್ತದಲ್ಲಿ ಸಂಪತ್ ಶಕ್ತಿ ಲಕ್ಷ್ಮಿಯೂ ನೆಲೆಸಿರುವರೆಂದು ನುಡಿಯುತ್ತ, 'ನಾನು ಮಠದ ಕೆಲಸ, ಜವಾಬ್ದಾರಿ ಅಲ್ಲಿ ನೂರೆಂಟು ಇದ್ದರೂ ಆ ಆದಾಯದ ಪರಿವೆ ಸಹಿತ ಇಲ್ಲದೆ ಇಲ್ಲಿ ವಾಣಿ ಸಂಪತ್ತನ್ನು ಸವಿಯಲು ಉಳಿದಿದ್ದೇನೆ. ಅಲ್ಲದೆ ಇಲ್ಲಿ ಕೇವಲ ಶಾಸ್ತ್ರಜ್ಞಾನವಲ್ಲದೆ ಸ್ವಾನುಭಾವವೂ ಮಿಳಿತವಾಗಿರುವುದರಿಂದ ಇದು ನರವಾಣಿಯಲ್ಲದೆ ಹರವಾಣಿ ಎನಿಸಿಕೊಳ್ಳುವುದು. ಕೆಲವಾರು ವರ್ಷಗಳಲ್ಲಿಯೇ ಸ್ವಂತ ಶಕ್ತಿಯಿಂದ ಬಸವ ಮಂಟಪ, ಬಸವ ಗಂಗೋತ್ರಿಯಂತಹ ಸಂಸ್ಥೆಗಳನ್ನು ನಿರ್ಮಾಣ ಮಾಡಿರುವುದನ್ನು ಕಂಡಾಗ ಎಂಥ ಶತ್ರುಗಳೂ ತಲೆದೂಗುವಷ್ಟು ಆನಂದ-ಆಶ್ಚರ್ಯಗಳಾಗುತ್ತವೆ' ಎಂದರು.

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು ಆಶೀರ್ವಚನ ದಯಪಾಲಿಸುತ್ತ ಬಸವಣ್ಣನವರ ವಿಶ್ವಧರ್ಮದ ವೈಶಿಷ್ಟ್ಯವನ್ನು ಧೀರೋದಾತ್ತವಾಗಿ ಹೇಳಿ, ಎಲ್ಲರನ್ನೂ ರೋಮಾಂಚನಗೊಳಿಸಿದರು. ವಿಶ್ವಕಲ್ಯಾಣ ಮಿಷನ್ ಸಂಸ್ಥೆಗಾಗಿ ಬಿಂದಿಗೆ ಹಿಡಿದು ಸಾಧಕಿಯರು ಮುನ್ನಡೆದಾಗ ಸ್ವಯಂ ಇಚ್ಛೆಯಿಂದ ಬಿಂದಿಗೆಯಲ್ಲಿ ಜನರು ಹಾಕಿದ ಕಾಣಿಕೆ ಐದು ಸಾವಿರದಷ್ಟಾಯಿತು. ಪ್ರವಚನ ಕಾರ್ಯಕ್ರಮ ಮಂಗಲಗೊಂಡಾಗ ಹತ್ತೂಮುಕ್ಕಾಲು ಗಂಟೆ ರಾತ್ರಿಯಾಗಿದ್ದರೂ ಜನರು ಮಂತ್ರ ಮುಗ್ಧರಾಗಿ ಕುಳಿತುದೊಂದು ಸೋಜಿಗವಾಗಿತ್ತು. ★

ವಿದೇಶಗಳಲ್ಲಿರುವವರಿಗೆ ಕಲ್ಯಾಣ ಕಿರಣ

ಕನ್ನಡ ಬಲ್ಲವರಿದ್ದು, ಕಲ್ಯಾಣ ಕಿರಣದ ಧಾರ್ಮಿಕ ವಿಷಯಗಳಲ್ಲಿ ಆಸಕ್ತರಾದ ಓದುಗರಿದ್ದರೆ ಚಂದಾದಾರರಾಗಬಹುದು. ವಿದೇಶಗಳಲ್ಲಿರುವ ನಿಮ್ಮ ಮಿತ್ರರು, ಬಂಧು ಬಳಗವರಿಗೆ ಕಳಿಸುವ ಇಷ್ಟವಿದ್ದರೆ ವಾರ್ಷಿಕ ಚಂದಾ 16, ಮತ್ತು 60 ರೂಪಾಯಿ ಅಂಚೆವೆಚ್ಚ ಸೇರಿ ರೂಗಳನ್ನು ಕಳಿಸಬೇಕು. ಪ್ರತಿ ತಿಂಗಳೂ ಅವರ ವಿದೇಶದ ವಿಳಾಸಕ್ಕೆ ಕಳಿಸಲಾಗುವುದು.

ಒಂದು ವೇಳೆ ಅಲ್ಲಿಂದಲೇ ಡಾಲರ್‌ಗಳನ್ನು ಕಳಿಸುವುದಿದ್ದಲ್ಲಿ ವಾರ್ಷಿಕ ಚಂದಾ 10 ಡಾಲರ್‌ಗಳು. ಆಸಕ್ತಿ ಇದ್ದವರು ಕಾರ್ಯಾಲಯದೊಡನೆ ವ್ಯವಹರಿಸ ಬೇಕು.

ಪ್ರವಚನದ ಶ್ರೋತೃ ಒಬ್ಬರ ನಿಸ್ಪೃಹ ಅಭಿಪ್ರಾಯ

ಪೂಜ್ಯ ಮಾತಾಜಿಯವರಲ್ಲಿ ಸಾಷ್ಟಾಂಗ ಪ್ರಣಾಮಗಳು

ನಾನೋರ್ವ ಸರ್ಕಾರೀ ನೌಕರ. ನಿಮ್ಮ ಪ್ರವಚನಕ್ಕೆ ಹಾಜರಿ ಇರುವ ನಿಮ್ಮ ಶಿಷ್ಯನೆಂದರೆ ತಪ್ಪಿಲ್ಲ. ನಾನು ಸಾಮಾನ್ಯವಾಗಿ ಪ್ರವಚನಗಳಿಂದ ದೂರ ಇರುತ್ತಿದ್ದೆ. ಏನೋ ಅನಾಸಕ್ತಿ. ಅದಕ್ಕೆ ಒಂದು ಕಾರಣವೂ ಇದೆ. ಸಾಮಾನ್ಯವಾಗಿ ಪ್ರವಚನಕಾರರು ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುವ ಭಾಷೆಯನ್ನು ಬಳಸುವುದು, ಸೂಕ್ತವಾದ ನಿದರ್ಶನ, ಉದಾಹರಣೆಗಳಿಂದ ಹೇಳುವುದು ಬಹಳ ಅಪರೂಪ. ಆದರೆ ನಿಮ್ಮ ಅಮೃತವಾಣಿಯಿಂದ ಕೇಳಿದ ಪ್ರವಚನ ಹಾಗಲ್ಲ, ಒಂದು ಚಿಕ್ಕ ಮಗು ಕೂಡ ಅರ್ಥಮಾಡಿಕೊಳ್ಳಬಲ್ಲ ಸರಳಭಾಷೆ, ಸಂಬಂಧಿಸಿದ ತತ್ವಕ್ಕೆ ಸರಿಯಾದ ಉದಾಹರಣೆ ಇದು ಅದರ ವೈಶಿಷ್ಟ್ಯ.

ದಿನನಿತ್ಯ ಜೀವನವೆಂಬ ಲೌಕಿಕ ಜಂಝಡದಲ್ಲಿ ಮನುಷ್ಯನು ಮುಳುಗಿ ಹೋಗಿದ್ದಾನೆ. ತನಗೊಂದು ಆತ್ಮವಿದೆ, ಎಂಬುದು ಕೂಡ ಅವನಿಗೆ ಅರಿವಿಲ್ಲ. ಪರಮಾತ್ಮನ ಪೂಜೆಯೆಂದರೆ ಸಾಮಾನ್ಯವಾಗಿ ಸಾಯಂಕಾಲ ದೇವಾಲಯಕ್ಕೆ ಹೋಗಿ, ಯಾಂತ್ರಿಕವಾಗಿ ಸುತ್ತುಹಾಕಿ ದೇವರಿಗೆ ಕೈಮುಗಿದು, ಧನಕನಕ ಮುಂತಾದ ಕೋರಿಕೆಗಳನ್ನು ಸಲ್ಲಿಸುವುದು ಮಾತ್ರ; ಅವನಿಗೆ ತನ್ನಲ್ಲಿರುವ ಪರಮಾತ್ಮನ ಶಕ್ತಿ ಎಲ್ಲೋ ಅಂತರ್ಗತವಾಗಿ ಹೋಗಿದೆ ಅದನ್ನು ಅವನಿಗೆ ಅರಿವು ಮೂಡಿಸಲು ಚಾಟಿ ಏಟು ಬೇಕಾಗಿದೆ. ಅದು ಎಂತಹ ಚಾಟಿ ಏಟೆಂದರೆ ನಿಮ್ಮಂತಹ ಪೂಜ್ಯರ, ಜ್ಞಾನಿಗಳ ಮಾತಿನಿಂದ ಅವರಲ್ಲಿರುವ ಅಂತಃಶಕ್ತಿ ಹೊರಹೊಮ್ಮುತ್ತದೆ. ಈ ದಿಶೆಯಲ್ಲಿ ನಿಮ್ಮಂತಹ ಮಹಾತ್ಮರಿಂದ ಜನಸಾಮಾನ್ಯರಿಗೆ, ಧರ್ಮದ ಬಗ್ಗೆ ಶ್ರದ್ಧೆಮೂಡಿಸುವಲ್ಲಿ ಮಹತ್ವದ ಪಾತ್ರ ಅತ್ಯಗತ್ಯ.

ನಿಮ್ಮನ್ನು ಕ್ರಾಂತಿಕಾರಿ ಎಂದರೆ ತಪ್ಪಲ್ಲ. ಮೂಢ ನಂಬಿಕೆಗಳಿಗೆ ದಾಸರಾಗಿ, ಹಳೆಯ ಕಂದಾಚಾರಗಳೆಂಬ ಹಗ್ಗಕ್ಕೆ ನೇತುಹಾಕಿಕೊಂಡಿರುವ ಮನುಷ್ಯನಿಗೆ ನೀವು ಹೇಳುವ ಪ್ರಗತಿಪರ ಧರ್ಮದ ಅಗತ್ಯವಿದೆ. ಜಾತೀಯತೆ, ಅಂಧಧರ್ಮದ ಅನುಕರಣೆ; ಅಸ್ಪೃಶ್ಯತೆ, ಇವು ನಮ್ಮ ಸಮಾಜದಲ್ಲಿ ಹಾಸುಹೊಕ್ಕಾಗಿ ಅನೇಕ

Digitalized by e-Sahithya Documentation Forum
Sponsored by Sarayu Foundation Trust

ವರ್ಷಗಳಿಂದ ನಡೆದುಕೊಂಡಿವೆ. ಇವನ್ನು ಬೇರುಸಹಿತ ಕಿತ್ತುಹಾಕದ ಹೊರತು ಸಮಾಜದ ಉದ್ಧಾರವಿಲ್ಲ. ನಾನು ಬ್ರಾಹ್ಮಣ. ನಾನು ವೀರಶೈವ ಎಂದು ಮುಂತಾಗಿ ನಮ್ಮ ನಮ್ಮಲ್ಲಿ ಕಿತ್ತಾಡುವುದರಿಂದ ಏನೇನು ಪ್ರಯೋಜನವಿಲ್ಲ. ಹೀಗೆ ಒಳಜಗಳದಿಂದ ಬೇರೆ ದೇಶದ ಧರ್ಮಗಳು ನಮ್ಮ ಭಾರತದಲ್ಲಿ ನೆಲೆಸಿ ಕಡೆಗೆ ನಮಗೆ ಜಾಗವಿಲ್ಲದಂತೆ ಆಗುವ ಸಂಭವವು ಇರುವುದು. ನೀವು ನಿಮ್ಮ ಪ್ರವಚನದಲ್ಲಿ ಇದನ್ನು ಮುಖ್ಯವಾಗಿ ಪ್ರಸಂಗಿಸಿ, ಹಿಂದೂಧರ್ಮದ ಉದ್ಧಾರಕ್ಕಾಗಿ ಶ್ರಮಿಸುತ್ತಿದ್ದೀರಿ, ಮೂಢನಂಬಿಕೆಗಳನ್ನು ಖಂಡಿಸುತ್ತಿದ್ದೀರಿ. ಹೀಗಿರುವಲ್ಲಿ ಕ್ರಾಂತಿಕಾರಿ ಎಂದರೆ ತಪ್ಪಿಲ್ಲ. ಭಗವದ್ಗೀತೆಯಲ್ಲಿ ಹೇಳಿರುವಂತೆ "ಸಂಭವಾಮಿ ಯುಗೇ ಯುಗೇ"; ಧರ್ಮವು ಕ್ಷಯಿಸುತ್ತಿರುವ ಕಾಲದಲ್ಲಿ ನಿಮ್ಮಂತಹ ವಿಭೂತಿಪುರುಷರು ಈ ಭೂಮಿಯಲ್ಲಿ ಹುಟ್ಟಿ ಧರ್ಮವನ್ನು ರಕ್ಷಿಸುವುದಕ್ಕೆ ನಿಲ್ಲುತ್ತೀರಿ. ಪರಮಾತ್ಮನೇ ಈ ರೂಪದಲ್ಲಿ ಜನಿಸಿರಬೇಕು ಎಂದು ನಮ್ಮ ನಂಬಿಕೆ.

ಹಿಂದೆ ಅನೇಕ ಮಹಾತ್ಮರು ಈ ನೆಲದಲ್ಲಿ ಹುಟ್ಟಿ ಅನೇಕಾನೇಕ ಸಂದೇಶಗಳನ್ನು ಬಿಟ್ಟುಹೋಗಿದ್ದಾರೆ. ಆದರೂ ಮನುಷ್ಯನಿಗೆ ಆಗಾಗ ಆಗಿನ ಭಾಷೆಯಲ್ಲಿ ಒತ್ತಿಹೇಳುವ ಮಹಾತ್ಮರು ಬೇಕಾಗಿದ್ದಾರೆ. ಮನುಷ್ಯನ ಮನಸ್ಸು ಮರ್ಕಟವಿದ್ದಂತೆ ಎಂದು ಹೇಳುತ್ತಾರೆ; ಇದು ನಿಜವಿರಬಹುದು. ಏಕೆಂದರೆ ಕೆಲವರು ಉಪದೇಶ ಕೇಳುವ ಕಾಲದಲ್ಲಿ ಸರಿಯಾಗಿರುತ್ತಾರೆ. ಮಾರನೇ ದಿನವೇ ದಬ್ಬೆಬಿಚ್ಚಿದ ನಾಯಿಬಾಲದಂತೆ ತಮ್ಮ ಹಳೆಯ ಚಾಳಿಯನ್ನು ಶುರುಮಾಡುತ್ತಾರೆ. ಹೀಗಿರುವ ಸಾಮಾನ್ಯ ಮನುಷ್ಯನಿಗೆ ಯಾವಾಗಲೂ ದಬ್ಬೆ ಕಟ್ಟುವ ನಿಮ್ಮಂತಹ ಮಹಾತ್ಮರು ಎಲ್ಲ ಕಾಲದಲ್ಲೂ ಬೇಕೇ ಬೇಕು. ಈಗ ನಿಮ್ಮ ಪ್ರವಚನಕ್ಕೆ ಬರಲು ವೇಳೆ ಆಯಿತು. ನನ್ನ ಬಾಲಭಾಷೆಯನ್ನು ನಿಲ್ಲಿಸುತ್ತೇನೆ. ಈ ನನ್ನ ಬರವಣಿಗೆಯನ್ನು ಓದಿ ನೀವು ನಗಬಹುದು. ನಾನು ಜಾತಿಯಲ್ಲಿ ಬ್ರಾಹ್ಮಣ; ಆದರೂ ನಾನು ಜಾತೀಯತೆಯನ್ನು ವಿರೋಧಿಸುತ್ತೇನೆ.

ತಮ್ಮ ಶಿಷ್ಯನ ಸಾಷ್ಟಾಂಗ ಪ್ರಣಾಮಗಳು,

ಬೈ. ಕೃ. ಶಿ.

ನುಡಿ ಮುತ್ತು

ಆರಿಹೋಗುತ್ತಿರುವ ಬೆಂಕಿಯಲ್ಲಿ ಎಣ್ಣೆ ಅಥವಾ ತುಪ್ಪ ಹಾಕಿ ಅದನ್ನು ಸ್ಫುಟಗೊಳಿಸುವಂತೆ, ನಿರಾಶಾವಾದಿಯಾದವನಿಗೆ ನಾವಾಡುವ ಎರಡು ಸಹಾನುಭೂತಿಯ ಶಬ್ದಗಳು ಸಾಂತ್ವನಿಸಿ, ಉತ್ಸಾಹ ನೀಡಬಲ್ಲುವು. —ಗಯಟೆ

ತುಂಬಿದ ಹೃದಯ ಜಲಭರಿತ ಮೋಡದಂತೆ ತನ್ನಲ್ಲಿರುವುದನ್ನು ದಾನ ಮಾಡಲು ಬಾಗುತ್ತದೆ. —ರವೀಂದ್ರನಾಥ ಟಾಗೋರು

ಹೇಳುವುದು ನ್ಯಾಯವನ್ನೇ ಎಂದ ಮಾತ್ರಕ್ಕೆ ಎಲ್ಲರೂ ನಮ್ಮ ಮಾತುಗಳನ್ನು ಕೇಳುವರು ಎಂದು ಭಾವಿಸಿಕೊಳ್ಳುವುದು ಮೂರ್ಖತನ. —ಇಸೋಪ

Akkamahadevi Alias Mataji

To have you amongst us-the unruly ;
It's a great gjft of the Almighty.
So I thank Him whole-heartedly,
His Grace will be on you till eternity.
Considering the present situation in the world,
You have chosen a path requiring hard work.
But you are sure to succeed in your mission,
As you possess a great deal of optimism.
You enlighten us by your impressive talk :
And remove ignorance from the lot.
I'm greatly indebted to you personally :
And I don't know how to repay you fully.
His Holiness Revered Sadguru Swami Linganandaji,
Has showered his blessings on you profoundly ;
The Vishwa Kalyana Mission will reach the peak of Glory by His Divine Grace,
And will prove a great contribution to the human race.

R. VANI, X Std. Malleswaram
Bangalore.

Thus Spake Basava

The man who slays is a pariah
The man who eats the carrion is a low-caste person
Where is the caste here–where ?
Our Lord's saint
Who loves all living beings
He is the high-born one.

Digitalized by e-Sahithya Documentation Forum
Sponsored by Sarayu Foundation Trust

ಪ್ರಶ್ನಾವಳಿ

ಮಲ್ಲಿಕಾರ್ಜುನಪ್ಪ, ಎಂ.ಎ. ಬಿ.ಇಡಿ.
ಮತ್ತೀಪುರ

ಪೂಜ್ಯರೇ,

ಸಮಾಜ-ಧರ್ಮಗಳಿಗೆ ಸಂಬಂಧಿಸಿದ ಕೆಲವು ಮುಖ್ಯ ಪ್ರಶ್ನೆಗಳನ್ನು 10-11-80 ರಂದು ಕೇಳಿ ಪತ್ರ ಬರೆದಿದ್ದೆ. ಈವರೆಗೂ ತಮ್ಮಿಂದ ಉತ್ತರವಿಲ್ಲ ; ದಯವಿಟ್ಟು ಉತ್ತರಿಸಿ.

(1) ಇಂದು ಲಿಂಗವಂತರು ಅಥವಾ ಲಿಂಗಾಯತರು ಆಚರಿಸುವ ಧರ್ಮವನ್ನು ಲಿಂಗಾಯತವೆಂದು ಕರೆದರೆ ಉಚಿತವೋ ಅಥವಾ ವೀರಶೈವವೆಂದು ಕರೆದರೆ ಉಚಿತವೋ ?

ಉ : ಅತ್ಯಂತ ಉಚಿತ ಶಬ್ದವೆಂದರೆ "ಬಸವ ಧರ್ಮ" ಎಂಬುದು ! ಬಳಕೆಯಲ್ಲಿರುವ ಶಬ್ದದ ಬಗ್ಗೆ ಹೇಳಬೇಕೆಂದರೆ "ಲಿಂಗಾಯತ," "ಲಿಂಗವಂತ" ಎಂಬುವು. ಇಷ್ಟಲಿಂಗಧಾರಣೆ ಈ ಸಮಾಜದ ವೈಶಿಷ್ಟ್ಯವಾದ ಕಾರಣ ಈ ಶಬ್ದಗಳೇ ಸಮರ್ಪಕ.

(2) ಜೈನಮತದ ಸ್ಥಾಪಕ ವೃಷಭ, ಬೌದ್ಧಮತದ ಸ್ಥಾಪಕ ಬುದ್ಧ, ಸಿಖ್‌ಮತದ ಸ್ಥಾಪಕ ಗುರುನಾನಕ್. ಹಾಗಾದರೆ ಲಿಂಗಾಯತ ಮತದ ಸ್ಥಾಪಕರಾರು ?

ಉ : ವಿಶ್ವಗುರು ಬಸವಣ್ಣನವರೇ ಈ ಧರ್ಮದ ಸ್ಥಾಪಕರು. ನೀವು ಯಾವ ಹೆಸರಿನಿಂದಲಾದರೂ ಕರೆಯಿರಿ ವಚನ ಸಾಹಿತ್ಯದಲ್ಲಿ ಒಂದು ಧರ್ಮದ ಸಂವಿಧಾನ ಸೂತ್ರಗಳಿವೆ. ಆ ಧರ್ಮದ ಆದ್ಯರು ಬಸವಣ್ಣನವರು. ಯಾವುದಾದರೊಂದು ಮತದ ಉದ್ಧಾರಕರು ಎಂದು ಅವರನ್ನು ಕರೆಯುವುದಕ್ಕಿಂತಲೂ ಅವರು ವಚನ ಸಾಹಿತ್ಯದಲ್ಲಿ ಕೊಟ್ಟಿರುವ ಧರ್ಮದ ಆದ್ಯರೆಂದು ಕರೆಯುವುದು ಅತ್ಯಂತ ಸೂಕ್ತ.

(4) ಹಾಗಾದರೆ ಬಸವಣ್ಣನವರಿಗಿಂತಲೂ ಹಿಂದೆ ವೀರಶೈವ ಮತ ಇರಲಿಲ್ಲವೆ ?

ಉ : ಬಸವಣ್ಣನವರಿಗೆ ಮೊದಲು ಶೈವಧರ್ಮ, ಅದರ ಪ್ರಭೇದಗಳು, ಸ್ಥಾವರ ಲಿಂಗಾರ್ಚನೆ ಮುಂತಾದುವು ಇದ್ದುವು. ಜಾತ್ಯತೀತವಾದ ದೃಷ್ಟಿಕೋನದ

ಲಿಂಗಾಯತ ಧರ್ಮದ ಉಗಮ ಬಸವಣ್ಣನವರ ಹೃದಯ-ಮೆದುಳುಗಳ ಗಂಗೋತ್ರಿಯಲ್ಲಿ.

(5) ಪ್ರತಿಧರ್ಮಕ್ಕೂ ತನ್ನದೇ ಆದ ಧರ್ಮಗ್ರಂಥಗಳಿವೆ. ಹಾಗಾದರೆ ಲಿಂಗಾಯತ ಧರ್ಮಕ್ಕೆ ಯಾವ ಗ್ರಂಥಗಳಿವೆ ?

ಉ : ಬಸವಣ್ಣನವರ ಷಟ್‌ಸ್ಥಲ ವಚನಗಳು ಮತ್ತು ಅವರ ಸಮಕಾಲೀನ ಶರಣರ ವಚನಗಳೇ ಲಿಂಗಾಯತ ಧರ್ಮದ ಧರ್ಮಗ್ರಂಥಗಳು ; ಅವೇ ಈ ಧರ್ಮದ ಪಠ್ಯಪುಸ್ತಕಗಳು.

(6) ಲಿಂಗಾಯತರ ಪವಿತ್ರ ಕ್ಷೇತ್ರಗಳು ಯಾವುವು ?

ಉ : ಲಿಂಗಾಯತ ಧರ್ಮದ ಪ್ರಕಾರ ಕ್ಷೇತ್ರದ ಮೋಹ ಇರತಕ್ಕದ್ದಲ್ಲ ; ಯಾವುದೇ ವಿಶೇಷವಾದ, ಮಹತ್ವಪೂರ್ಣ ಬೆಲೆ ನೆಲಕ್ಕೆ, ಜಲಕ್ಕೆ ಶರಣರು ಕೊಡರು. ಶರಣರು ಪಾದವಿಟ್ಟುದೇ ಅವಿಮುಕ್ತಕ್ಷೇತ್ರ ಎನ್ನುತ್ತಾರೆ. ಆದರೆ ಸ್ಮಾರಕ ದೃಷ್ಟಿಯಿಂದ, ಭಕ್ತಿಯ ದೃಷ್ಟಿಯಿಂದ ಬಸವ ಕಲ್ಯಾಣ, ಕೂಡಲಸಂಗಮದ ಬಸವ ಐಕ್ಯಮಂಟಪ, ಉಳವಿ ಚನ್ನಬಸವೇಶ್ವರ ಕ್ಷೇತ್ರ, ಎಡೆಯೂರು, ಕದಳಿಬನ, ಮಲೈಮಹದೇಶ್ವರಬೆಟ್ಟ ಮುಂತಾದ ಶರಣರು ಸಮಾಧಿಸ್ತರಾದ ತಾಣಗಳು ಗೌರವಾರ್ಹವಾಗಿವೆ.

(7) ಲಿಂಗಾಯತ ಒಂದು ಜಾತಿಯಲ್ಲ ; ಒಂದು ಧರ್ಮ, ಸ್ವತಂತ್ರವಾದ ಧರ್ಮ. ಇದನ್ನು ಶೈವಧರ್ಮದ ಒಂದು ಪ್ರಭೇದವೆಂದು, ಹಿಂದೂಧರ್ಮದ ಸುಧಾರಣೆಯ ಪಂಥವೆಂದು ಕರೆಯಬಹ:ದೆ ?

ಉ : ಆದಿಗುರು ಬಸವಣ್ಣನವರು ಶೈವಧರ್ಮ, ವೇದಧರ್ಮ, ಜೈನ, ಬೌದ್ಧ, ಈ ಎಲ್ಲವುಗಳಿಂದ ಪ್ರಭಾವಿತರಾದರೂ, ಹೊಸದೊಂದು ಧರ್ಮವನ್ನೇ ಕೊಟ್ಟಿದ್ದಾರೆ. ಆದ್ದರಿಂದ ಇದು ಶೈವದ ಪ್ರಭೇದವೂ ಅಲ್ಲ, ಹಿಂದೂಧರ್ಮದ ಒಂದು ಒಳಜಾತಿಯೂ ಅಲ್ಲ. ಹಿಂದೂತ್ವವು ಒಂದು ಜನಾಂಗವಾಚಕ ಶಬ್ದ. ಈ ,ಜನಾಂಗ ಸಮುಚ್ಚಯದಲ್ಲಿ ಬೇರೆ ಬೇರೆ ಧರ್ಮಗಳಿದ್ದು, ಲಿಂಗಾಯತವು ಸ್ವತಂತ್ರಧರ್ಮ. ಇದು ಹಿಂದೂ ಕಕ್ಷೆಯ ಒಳಗೇ ಬರುವ ಸ್ವತಂತ್ರಧರ್ಮ.

(8) ಕಾವಿಬಟ್ಟೆ ಧರಿಸಿದ ಧರ್ಮಗುರುಗಳನ್ನು ಬುದ್ಧಿ ಎನ್ನುವುದಾದರೆ ಕಾವಿಧರಿಸಿದ ಮಹಿಳಾ ಗುರುಗಳನ್ನು ಏನೆಂದು ಕರೆಯಬೇಕು ?

Digitalized by e-Sahithya Documentation Forum
Sponsored by Sarayu Foundation Trust

ಉ: 'ಮಾತೆ', "ಮಾತಾಜಿ" ಎನ್ನುವುದು ಅತ್ಯಂತ ಸೂಕ್ತ ಶಬ್ದ. ಜಗತ್ಪಿತನಾದ ಪರಮಾತ್ಮನಿಗೊಲಿದು ಶರಣ ಸತಿಯಾದವರಿಗೆ 'ಮಾತೆ' ಶಬ್ದ ಅತ್ಯಂತ ಸೂಕ್ತ.

(9) ಅಲಿಂಗಿಗಳಲ್ಲಿ ಲಿಂಗಿಗಳು ಪ್ರಸಾದ ಸ್ವೀಕರಿಸಬಹುದೆ?

ಉ: ಇದು ತುಂಬಾ ಸೂಕ್ಷ್ಮವಾದ. ಗಂಭೀರವಾದ ಪ್ರಶ್ನೆ. ಕೆಲವರು ಜಾತಿಯಲ್ಲಿ ಲಿಂಗಾಯತರಿದ್ದರೂ ತತ್ತ್ವಶಃ ಇರುವುದಿಲ್ಲ. ಲಿಂಗಧಾರಣೆಯನ್ನೂ ಮಾಡಿಕೊಂಡಿರುವುದಿಲ್ಲ. ಇಷ್ಟು ಮಾತ್ರವಲ್ಲದೆ ಮಾಂಸಾಹಾರ, ಮಧ್ಯಪಾನದಲ್ಲಿ ನಿರತರಾಗಿರುತ್ತಾರೆ. ಇನ್ನು ಕೆಲವರು ಲಿಂಗವಂತರಲ್ಲದಿದ್ದರೂ ಸದಾಚಾರ ಸಂಪನ್ನರು. ಸಾತ್ವಿಕಾಹಾರ ವ್ರತಧಾರಿಗಳೂ ಆಗಿರುತ್ತಾರೆ. ಆದ್ದರಿಂದ ಜಾತಿಯಿಂದ ನಿರ್ಧರಿಸುವುದಕ್ಕಿಂತ ಸದಾಚಾರದಿಂದ ನಿರ್ಧರಿಸುವುದೇ ಸೂಕ್ತ ಎಂದೆನ್ನಬೇಕಾಗುತ್ತದೆ. ಅದನ್ನೇ ಅಕ್ಕಮಹಾದೇವಿ ಹೀಗೆ ಹೇಳುತ್ತಾಳೆ: "ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಆಮಿಷ ಎಂಬ ಏಳು ಭವಿಗಳ ಒಳಗಿಟ್ಟುಕೊಂಡು ಲಿಂಗವಿಲ್ಲದವರ ಭವಿ ಎಂಬರು ಅವರಂತರಂಗದ ಲಿಂಗಾಂಗದ ಸುದ್ದಿಯನರಿಯದೆ" ಎಂಬುದಾಗಿ.

(10) ಆಕಾಂಕ್ಷೆಯುಳ್ಳ ಮುಮುಕ್ಷುಗಳು ಬಸವ ಧರ್ಮ ವ್ರತಧಾರಿಗಳು ಆಗಲು ಇಚ್ಛೆಪಟ್ಟರೆ ಅವರು ಯಾವುದೇ ಜಾತಿಯವರಿದ್ದರೂ ಅವರಿಗೆ ದೀಕ್ಷಾ ಬೋಧೆ ಕೊಡಬಹುದೆ? ಇಂದಿನ ಮಠಾಧಿಕಾರಿಗಳೇಕೆ ಎಲ್ಲರನ್ನೂ ಆ ರೀತಿ ಆಹ್ವಾನಿಸುವುದಿಲ್ಲ? ತಾವಾಗಿ ಬಂದರೆ ಸ್ವೀಕರಿಸುವುದಿಲ್ಲ. ಏಕೆ?

ಉ: ಬಹುಪಾಲು ಮಠಾಧಿಕಾರಿಗಳು ಪ್ರಗತಿಪರ ಬಸವ ಧರ್ಮವನ್ನು ಒಂದು ಜಾತಿಗೆ ಸೀಮಿತಿಗೊಳಿಸಿದ್ದಾರೆ. ಇದೊಂದು ಜಾತಿ, ಜನ್ಮದಿಂದಲೇ ಬರುತ್ತದೆ ಎಂಬ ನಂಬಿಗೆ ಜನರಲ್ಲಿ ಬಿತ್ತುತ್ತಿದ್ದಾರೆ. ಮಾನವರೆಲ್ಲ ಒಂದು, ದೇವಾಂಶಿಕರು ಎಂಬ ವಿಶಾಲ ದೃಷ್ಟಿಕೋನ ತೊರೆದು ತಮ್ಮ ಜಾತಿಯವರಷ್ಟೇ ಶ್ರೇಷ್ಟ ಎಂಬ ವಿಕೃತ ತತ್ತ್ವವನ್ನು ಜನರಲ್ಲಿ ನೆಲೆಗೊಳಿಸುತ್ತಿದ್ದಾರೆ. ಬಸವಣ್ಣನವರು ಮುಂಬಾಗಿಲಿನಿಂದ ಹೊರಹಾಕಿದ ಮೂಢ ನಂಬಿಕೆ, ಅಂಧಾನುಕರಣೆ, ಜಾತೀಯತೆ ಮುಂತಾದ ಪಿಡುಗುಗಳನ್ನು ಹಿಂಬಾಗಿಲಿನಿಂದ ಒಳಗೆ ಬಿಟ್ಟುಕೊಂಡು ಬಿಟ್ಟಿದ್ದಾರೆ. ಸುಶ್ರಾವ್ಯವಾದ ಕಂಠದ ಗಾಯಕನೊಬ್ಬ ಹಾಡುವಾಗ ಅವನ ಧ್ವನಿ ಇನ್ನಿತರರಿಗೆ ಚೆನ್ನಾಗಿ ಕೇಳಬರದಂತೆ, ಜೋರಾಗಿ ಗಾರ್ಧಭಗಾನ ಹಾಡಿ

(೯೬ನೇ ಪುಟವನ್ನು ನೋಡಿ)

ಕಣ್ಣರಿಯದಿದ್ದರೂ ಕರುಳರಿಯದೆ?

ಮಾತೆ ಗಂಗಾದೇವಿ

ಇದು ಶರಣವಾಣಿ. ಇದು ಅನುಭವದ ವಾಣಿ. ಮಲ್ಲೇಶ್ವರಂನಲ್ಲಿ ದಿನ ನಿತ್ಯ ಪ್ರವಚನ ಕೇಳಲು ಹುಲ್ಲೂರ್‌ರವರ ಕುಟುಂಬದವರೆಲ್ಲ ಬರುತ್ತಿದ್ದರು. ತಾಯಿ, ತಂದೆ ಮಕ್ಕಳು ಎಲ್ಲರೂ ಒಂದೇ ತರಹದ ಭಕ್ತಿ-ಶ್ರದ್ಧೆಯುಳ್ಳವರು. 29-5-81ರಂದು ಸಂಜೆ ಆಫೀಸಿನಿಂದ ತುಸುಬೇಗ ಬಂದ ಹುಲ್ಲೂರ್‌ರವರು ತಮ್ಮ ಮಕ್ಕಳನ್ನೆಲ್ಲಾ ಕರೆದು. 'ಈವತ್ತು ನನ್ನ ಮನಸ್ಸಿಗೇನೋ ದುಗುಡವಾಗುತ್ತಿದೆ. ಎಲ್ಲರೂ ಬನ್ನಿರಿ' ಎಂದು ಬಸವಣ್ಣನವರ ಫೋಟೋ ಪೂಜಿಸಿ ಮನೆಯವರನ್ನೆಲ್ಲ ಸೇರಿಸಿ ಭಜನೆ ಮಾಡಲಾರಂಭಿಸಿದರಂತೆ. ವಿಶ್ವಕಲ್ಯಾಣಗೀತೆ ಮತ್ತು ಸಾಮೂಹಿಕ ಪ್ರಾರ್ಥನೆ, ಪುಸ್ತಕಗಳನ್ನಿರಿಸಿಕೊಂಡು ಪ್ರಾರ್ಥನೆ, ಭಜನೆ ಮಾಡಿಸಿದರಂತೆ. ಮನೆಯವರಿಗೆಲ್ಲ ತೀರಾ ಆಶ್ಚರ್ಯವಾಯಿತಂತೆ. ಸಂಜೆ ಐದಕ್ಕೆ ಆರಂಭಿಸಿದ ಭಜನೆಯನ್ನು 6-00ರ ತನಕ ಮಾಡಿ ನಂತರ ಈಗ ಸ್ವಲ್ಪ ನೆಮ್ಮದಿಯಾಯಿತು ಎಂದರಂತೆ. ಇದನ್ನು ಹೇಳಬೇಕು ಎಂದು ಪ್ರವಚನಕ್ಕೆ ಆತುರಾತುರವಾಗಿ ಬಂದರೆ, ಪೂಜ್ಯ ಮಾತಾಜಿಯವರು ವೇದಿಕೆಗೆ ಬರುವುದು ತೀರಾ ತಡವಾಗಿತ್ತು. ಪ್ರವಚನ ಮುಗಿದ ನಂತರ ಹೇಳುವಾ ಎಂದುಕೊಂಡು ಕುಳಿತಿರುವಾಗಲೇ ಪ್ರವಚನ ಕಾಲದಲ್ಲಿ ಪೂಜ್ಯ ಮಾತಾಜಿಯವರು, ಮತ್ತು ಅಂದು ಪ್ರತ್ಯಕ್ಷ ಸಾಕ್ಷಿಯಾಗಿ ನೋಡಿಬಂದಿದ್ದ ಯಕ್ಷಿಣೀ ವಿದ್ಯೆಗಾರ ಪ್ರೊ. ಶಿವನ್‌ರು ಸಿಡಿಲು ಹೊಡೆದು ಕಟ್ಟಡದ ಛಾವಣಿ ಕತ್ತರಿಸಿ ಪೂಜ್ಯ ಗುರುದ್ವಯರು ಉಳಿದ ಪ್ರಸಂಗವನ್ನು ಹೇಳಿದಾಗ ಹುಲ್ಲೂರು ಕುಟುಂಬದವರಿಗೆ ಆಶ್ಚರ್ಯ-ಆನಂದ ಏಕಕಾಲಕ್ಕೆ ಉಂಟಾದವಂತೆ. ತಾದಾತ್ಮ್ಯಭಾವ ಅವರಲ್ಲಿ ಇದ್ದುದರಿಂದಲೇ ಅವರ ಕರುಳು ಕಳವಳಪಟ್ಟಿದೆ, ತನಗರಿಯದಂತೆ ಬಸವಣ್ಣನನ್ನು ಭಜಿಸಿ, ಬೇಡಿದೆ. ಶ್ರೀ ಹುಲ್ಲೂರವರ ಮಗಳು ಸುಮಂಗಲ ಬರೆದ ಒಂದು ಕವನ ಸಹ ಇದೇ ಸಂಚಿಕೆಯ ಪುಟ 48ರಲ್ಲಿ ಪ್ರಕಟವಾಗಿದೆ.

★

★ ಭದ್ರವಾಗಿ ಮುಚ್ಚಿಟ್ಟ ಪುಸ್ತಕ ಕೇವಲ ಖಾಲಿ ಹಾಳೆಯ ಕಟ್ಟನಂತೆ ಮಾತ್ರ

—ಚೀನಾಗಾದೆ


★ ಹೊಗಳಲಿಕ್ಕೆ ಬಲ್ಲವನು ತೆಗಳಲಿಕ್ಕೂ ಸಮರ್ಥನೆಂಬುದನ್ನು ಅರಿಯಬೇಕು

—ನೆಪೋಲಿಯನ್

★ ಕೆಲವರು ಆಕಾಶದಲ್ಲಿ ದೇವತೆಗಳನ್ನು, ಕೆಲವರು ಪಿಶಾಚಿಗಳನ್ನು ಕಂಡರೆ ಕೆಲವರು ಏನೂ ಕಾಣರು ಇದು ಅವರವರ ದೃಷ್ಟಿಯನ್ನು ಪ್ರತಿಪಾದಿಸುತ್ತದೆ.

—ಜಾನ್ ರಸ್ಕಿನ್

Digitalized by e-Sahithya Documentation Forum
Sponsored by Sarayu Foundation Trust



ಲೇ: ಜಗದ್ಗುರು ಮಾತೆ ಮಹಾದೇವಿ.

ಭಾಗ-5

ಸಾಹಿತ್ಯ ಕೃಷಿಗೆ ಶಾಂತ, ಏಕಮುಖ ವಾತಾವರಣಬೇಕು. ಅದರಲ್ಲಿಯೂ ವೈಚಾರಿಕ ಮತ್ತು ಆಧ್ಯಾತ್ಮಿಕ ಸಾಹಿತ್ಯ ರಚನೆಗೆ ಏಕಾಗ್ರ ಚಿತ್ತತೆ ಬೇಕು. ಆಡಳಿತ ನಿರ್ವಹಣೆಯಂತಹ ಕೆಲಸಗಳು ಸಾಹಿತ್ಯದ ಸೆಲೆಯನ್ನು ಬತ್ತಿಸಿಬಿಡುವುವು. ಮನಸ್ಸಿನಲ್ಲಿ ತುಮುಲ ಹೋರಾಟ ನಡೆಸುತ್ತ ಬೇಗನೆ ಅಭಿವ್ಯಕ್ತಗೊಳ್ಳಬೇಕೆಂದು ಅನೇಕ ವಿಚಾರಗಳು, ಬಸವಣ್ಣನವರ ವಚನಗಳು ಮುಂತಾದುವು ತುಡಿಯುತ್ತಿದ್ದರೆ ನನ್ನ ಚಿಂತನ ಶಕ್ತಿ ಶಾಲೆ, ಸಂಸ್ಥೆಗಳಲ್ಲಿ ಹರಿದು ಸಾಹಿತ್ಯ ರಚನೆಯಲ್ಲಿ ತಲ್ಲೀನವಾಗಲು ಬಿಡುವು ಪಡೆಯುತ್ತಿಲ್ಲ. ಒಮ್ಮೊಮ್ಮೆ ತೀವ್ರ ಪರಿತಾಪವಾಗುತ್ತದೆ. ಬೋಧೆ, ಬರವಣಿಗೆ, ಧರ್ಮಪ್ರಸಾರ, ಸಾಹಿತ್ಯ ಪ್ರಕಟಣೆಯಲ್ಲೇ ತಲ್ಲೀನವಾಗಿದ್ದರೆ ಎಷ್ಟು ಲೇಸಾಗಿರುತ್ತಿತ್ತು. ಸಾರ್ವಜನಿಕ ಜವಾಬ್ದಾರಿ ಬಹಳಷ್ಟು ಹೊರಬೇಕಾದ ಶಾಲೆಯ ನಿರ್ಮಾಣಕ್ಕೆ ಏಕೆ ಕೈಹಾಕಿದೆ ಎಂದು ತುಂಬಾ ಪರಿತಾಪವಾಗುತ್ತದೆ. ಆದರೆ ಮತ್ತೊಮ್ಮೆ ಎಷ್ಟು ಸಾಹಿತ್ಯ ಬರೆದರೇನಂತೆ, ಎಷ್ಟು ಪ್ರವಚನ ಮಾಡಿದರೇನಂತೆ ಒಳ್ಳೆಯ ಜನಾಂಗವನ್ನು ಈ ರಾಷ್ಟ್ರದಲ್ಲಿ ನಿರ್ಮಾಣ ಮಾಡದಿದ್ದರೆ ಈ ದೇಶದ ಪ್ರಗತಿ ಸಾಧ್ಯವಿಲ್ಲ ಎನಿಸಿ ಆದರ್ಶಗಳೆಂಬ ಬೀಜಗಳನ್ನು ಉತ್ತಿ ಬಿತ್ತಿ ಬೆಳೆ ತೆಗೆಯಬೇಕಾದ್ದು ಸಮಾಜ ಕ್ಷೇತ್ರದಲ್ಲಿ ತಾನೆ? ಎನಿಸಿ ಸಮಾಧಾನ ಮಾಡಿಕೊಳ್ಳುತ್ತೇನೆ.

ಇಷ್ಟೆಲ್ಲ ಪುರಾಣ, ಹಿನ್ನೆಲೆ ಏಕೆ ಬರೆದೆನೆಂದರೆ ಜೂನ್ ತಿಂಗಳ "ಕಲ್ಯಾಣ ಕಿರಣ"ದ ವಿಳಂಬ ಕುರಿತು ವಿವರಿಸಲು. ಮಲ್ಲೇಶ್ವರಮ್ ಪ್ರವಚನ, ದರ್ಶನಾರ್ಥಿಗಳು, ಶಾಲೆ-ವಸತಿ ಗೃಹದ ಕಟ್ಟಡ ನಿರ್ಮಾಣ, ಮಕ್ಕಳ ಶಾಲಾ ಪ್ರವೇಶಕ್ಕೆ ಧಾವಿಸಿ ಬರುವ ಪಾಲಕರು-ಈ ಎಲ್ಲ ಅವಾಂತರದ ಮಧ್ಯೆ ಲೇಖನಿ ಹಿಡಿಯಲು ಆಗಲಿಲ್ಲ.

ನನ್ನ ಬರವಣಿಗೆಯ ಪರಿಯೋ! ತಿಂಗಳ ಸಂಬಳ ಬರುತ್ತಿದ್ದಂತೆಯೇ ತಿಂಗಳಿಗೆ ಬೇಕಾಗುವ ಸಾಮಾನನೆಲ್ಲ ತಂದು, ಹಸನು ಮಾಡಿಟ್ಟುಕೊಂಡು ಶಾಂತವಾಗಿ ಗೃಹಕೃತ್ಯ ಮಾಡುವವರಂತಲ್ಲ; ಮನೆಗೆ ಅತಿಥಿಗಳು ಬಂದಾಗ ಒಲೆ ಮೇಲೆ ಪಾತ್ರೆ ಇಟ್ಟು, ಅಂಗಡಿಗೆ ಸಾಮಾನು ತರಲು ಕಳಿಸುವ ವ್ಯಕ್ತಿಯಂತೆ. ಅಲ್ಲಿ ಬೇಜವಾಬ್ದಾರಿ. ಸೋಮಾರಿತನಗಳು ಇರುವ ಸಾಧ್ಯತೆ ಇದೆ. ನನ್ನ ವಿಷಯದಲ್ಲಿ ಅದೂ ಕಾರಣವಲ್ಲ; ಸೋಮಾರಿತನ ಬೇಜವಾಬ್ದಾರಿ ಹತ್ತಿರವೂ ಸುಳಿಯವು. ಕೆಲಸದ ಒತ್ತಡದಿಂದಾಗಿ, ಮುದ್ರಣಶಾಲೆಯ ಕೆಲಸಗಾರರನ್ನು ಹಸಿದು ನಿಲ್ಲಿಸಿ, ಇಲ್ಲಿಂದ ಬರೆದು ಬರೆದು ಕಳಿಸಿ, ಅವರ ಕೈಗೆ ಉಣ್ಣಿಸುವ ಪರಿಸ್ಥಿತಿ. ವ್ಯವಸ್ಥಿತವಾಗಿ ಕುಳಿತು ಬರೆದರೆ ಎಷ್ಟು ಚೆನ್ನಾಗಿ ಬರೆಯಬಹುದಲ್ಲ ಎನಿಸುತ್ತದೆ. ಆದರೇನು ಮಾಡಲಿ ಕಡಿದಷ್ಟು ತುರಿಸಿಕೊಳ್ಳುವುದೇ ಆಗಿದೆ.

"ಬಸವ ಬೀಡಿನಿಂದ ಸಿರಿಯನಾಡಿಗೆ" ಈ ಮಾಲಿಕೆಯಲ್ಲಿ ನಾನು ಪ್ರಯಾಣ ಮಾಡಿದ ದಾಟಿಯಲ್ಲೇ ಬರೆಯಬೇಕಾದರೆ ಸಾನ್ ಫ್ರಾನ್ಸಿಸ್ಕೋ ವಿಚಾರ ಇನ್ನೂ ನಿಧಾನವಾಗಿ ಬರೆಯಬೇಕು. ಆದರೆ ಈ ಸಂಚಿಕೆಯಲ್ಲಿ ಪೂಜ್ಯ ನಾದಬ್ರಹ್ಮಾನಂದರ ವಿಷಯ ಬಂದಿರುವುದರಿಂದ, ಅವರ ಆಶ್ರಮ ಇರುವ ಸಾನ್ ಫ್ರಾನ್ಸಿಸ್ಕೋ ಬಗ್ಗೆ ಈಗಲೇ ಬರೆದುಬಿಡುತ್ತೇನೆ.

ಅಮೆರಿಕಾದ ಅನೇಕ ರಾಜ್ಯಗಳಲ್ಲಿ ಕ್ಯಾಲಿಫೋರ್ನಿಯಾ ಒಂದು. ಬೆಂಗಳೂರಿನಂತಹ ಹವಾಮಾನ ಹೊಂದಿ ಸಸ್ಯಸಂಪತ್ತಿನಿಂದ ತುಂಬಿರುವ, ಹಿತಕರ ಹವೆ ಪರಿಸರ ಹೊಂದಿರುವ ಕ್ಯಾಲಿಫೋರ್ನಿಯಾ ರಾಜ್ಯದ ಒಂದು ಪ್ರಮುಖ ನಗರ ಸಾನ್ ಫ್ರಾನ್ಸಿಸ್ಕೊ. ಯೂರೋಪ್ ಖಂಡದ ಅನೇಕ ಸಾಹಸಿ ನಾವಿಕರು, ವಲಸೆಗಾರರು ಹೋಗಿ ನೆಲೆಸಿದಾಗ, ಈ ಪ್ರದೇಶವು ಸ್ಪೇಯಿನ್‌ನವರ ಆಡಳಿತಕ್ಕೆ, ಪ್ರಭಾವಕ್ಕೆ ಒಳಪಟ್ಟಿದೆ.

ಮೊದಲು ಪ್ರಶಾಂತವಾದ, ಸ್ವಲ್ಪವೇ ಜನರುಳ್ಳ ಈ ವಸತಿ ನೆಲೆ ಇದ್ದಕ್ಕಿದ್ದಂತೆಯೇ ಕೀರ್ತಿಶಾಲಿಯಾದುದು 1849ರಲ್ಲಿ. ಅಲ್ಲಿ ಚಿನ್ನವು ಹೇರಳವಾಗಿ ದೊರೆಯುವುದೆಂಬ ವಾರ್ತೆಹರಡಿ ಜಗತ್ತಿನಾದ್ಯಂತದಿಂದ ಜನರು ಬಂದು ನೆಲೆಸತೊಡಗಿದರು. ಚಿನ್ನದ ರಾಜ್ಯ ಹೀಗಾಗಿ ಕಾಸ್ಮೊಪಾಲಿಟನ್ ಸ್ವರೂಪ ಹೊಂದಿದೆ. ಸ್ಪೇಯಿನ್, ಇಂಗ್ಲೀಷ್ ಭಾಷೆಯ ಜನರೇ ಅಲ್ಲದೆ ಚೀನೀಯರು, ಜಪಾನೀಯರು, ಗ್ರೀಕರು, ಸ್ಕಾಂಡಿನೇವಿಯನ್ನರು, ಇಟಲಿಯವರು ಇದ್ದಾರೆ. ಸಾನ್‌ಫ್ರಾನ್ಸಿಸ್ಕೋವು ಎಲ್ಲೆಡೆಯಿಂದಲೂ ಸಮುದ್ರದಿಂದ ಸುತ್ತುವರಿಯಲ್ಪಟ್ಟ ಕೊಲ್ಲಿಯಾಗಿದ್ದು ಅಡ್ಡಡ್ಡಲಾಗಿ ಬೆಳೆಯುವ

Digitalized by e-Sahithya Documentation Forum
Sponsored by Sarayu Foundation Trust

ಅವಕಾಶವಿಲ್ಲದೆ ಮೇಲಕ್ಕೇ ಬೆಳೆಯಬೇಕಾಗಿದೆ. ಹೀಗಾಗಿ ಇಲ್ಲಿ ಜಾಗಕ್ಕೆ ತುಂಬಾ ಬೆಲೆ. ಸಾಮಾನ್ಯ ಆದಾಯದವರು ಮನೆ ಕೊಳ್ಳುವುದು ದುಸ್ತರ.

ಕಡಿದಾದ ಬೆಟ್ಟಗಳು ಕಣ್ಣಿಗೆ ಹಬ್ಬವನ್ನುಂಟುಮಾಡುತ್ತವೆ. ಇಡೀ ನಗರವು ಸಮುದ್ರದಿಂದ ಸುತ್ತುವರಿದಿರುವುದರಿಂದ ವಿಪರೀತ ಸೇತುವೆಗಳಿವೆ. ಅವಂತೂ ಅತ್ಯಂತ ಸುಂದರವಾಗಿವೆ. ನಗರದಲ್ಲಿ ಇರುವ ಪಾರ್ಕ್‌ಗಳಂತೂ ತುಂಬಾ ಪ್ರಶಾಂತವು ರಮಣೀಯವೂ ಆಗಿವೆ. ಅತ್ಯಂತ ಸುಪ್ರಸಿದ್ಧ ಗೋಲ್ಡನ್‌ಗೇಟು ಬ್ರಿಡ್ಜ್ ಈ ನಗರದ ವಿಶೇಷ. ಸಾನ್‌ಫ್ರಾನ್ಸಿಸ್ಕೋ ನಗರವನ್ನು ಪ್ರವೇಶಿಸಲು ಇರುವುದು ಒಂದೇ ಮಾರ್ಗ—ಈ ಗೋಲ್ಡನ್‌ಗೇಟ್ ಬ್ರಿಡ್ಜ್. ಹೊರಗಿನ ಜಗತ್ತಿನೊಡನೆ ವಾಹನ ಮಾರ್ಗವಿರುವುದು ಇಲ್ಲಿ ಮಾತ್ರ. ಈ ಸೇತುವೆಯ ಉದ್ದ ಸುಮಾರು 4/5 ಮೈಲಿ, ಅಲೆಗಳ ಮಟ್ಟದಿಂದ 250 ಅಡಿ ಎತ್ತರ. ಈ ಸೇತುವೆಗಳಿಗೆ ವಿಶೇಷ ದೀಪಾಲಂಕಾರ ಮಾಡಿರುವುದರಿಂದ ರಾತ್ರಿಯ ವೇಳೆಯಲ್ಲಿ ನೋಡಲು ಕಣ್ಣಿಗೆ ಹಬ್ಬ. ಸಂತ ಫ್ರಾನ್ಸಿಸನ ಹೆಸರನ್ನು ಹೊಂದಿರುವ ಈ ನಗರದಲ್ಲಿ ರಸ್ತೆಯ ರೈಲುಗಳಿವೆ. ಅವುಗಳಿಗೆ ಕೇಬಲ್‌ಕಾರು ಎಂದು ಹೆಸರು. ರೇಲುಗಾಡಿಯ ಆಕಾರದಲ್ಲಿ ಇದ್ದು, ಹಳಿಗಳ ಮೇಲೆ ಓಡುತ್ತವೆ.

ಈ ನಗರದಲ್ಲಿ ಒಂದು ಅತ್ಯಂತ ವಕ್ರವಾದ ರಸ್ತೆ ಇದೆ. ತುಂಬಾ ಕಡಿದಾದ ಒಂದು ಬೆಟ್ಟವನ್ನು ನೇರವಾಗಿ ಇಳಿಯಲು ಮೋಟಾರು ರಸ್ತೆ ಮಾಡಲಾಗಿದೆ. ಕೆಳಗೆ ನಿಂತು ನೋಡಿದರೆ ಹಾವು ಮಲಗಿದಂತೆ ತೋರುತ್ತದೆ. ರಸ್ತೆಗೆ ಇಟ್ಟಂಗಿಗಳನ್ನು ನೆಲಕ್ಕೆ ಹಾಸಿ, ಕಾರಿನ ಗಾಲಿ ಜಾರದಂತೆ ಮಾಡಿದ್ದಾರೆ. ಕಾರಿನಲ್ಲಿ ನಿಧಾನವಾಗಿ ಈ ಹಾವಿನಂತಹ ಮತ್ತು ಕಡಿದಾದ Crookedest Road ಇಳಿಯುವಾಗ ತುಂಬಾ ಭಯವಾಗದಿರದು. ರಸ್ತೆಯ ಎರಡೂ ಬದಿಗಳಲ್ಲಿ ಹೂಗಿಡಗಳನ್ನು ಹಾಕಿ, ಆ ನಗರದ ವಿಶೇಷ ಸಂದರ್ಶನ ತಾಣವನ್ನಾಗಿ ಮಾಡಿದ್ದಾರೆ. ಲಲಿತಕಲೆಗಳ ಅರಮನೆ ಮತ್ತು ಇಡೀ ನಗರವನ್ನು ಅಂಗೈಯಲ್ಲಿಟ್ಟಂತೆ ತೋರುವ ಕಾಯಿಟ್ ಗೋಪುರಗಳು ತುಂಬಾ ರಮ್ಯ ಸ್ಥಳಗಳು. ಕ್ಯು ಗಾರ್ಡನ್ಸ್ ಎಂಬ ಸುಂದರ ಉದ್ಯಾನವಿದ್ದು, ಅಲ್ಲಿ ಗಾಜಿನ ಮನೆಯೊಂದಿದೆ. ಸೂರ್ಯನ ಶಾಖವನ್ನು ಆಕರ್ಷಿಸಿ, ಜಗತ್ತಿನ ವಿವಿಧ ಭಾಗಗಳಲ್ಲಿ ಬೆಳೆಯುವ ಹೂಗಿಡಗಳನ್ನು ಬೆಳೆಸಿರುವುದನ್ನು ಇಲ್ಲಿ ಕಾಣಬಹುದು.

ಇನ್ನೊಂದು ಸ್ಮರಣಾರ್ಹ ತಾಣ—ಇದು ಜಪಾನೀಯರ ಟೀ ಗಾರ್ಡನ್. ಅತ್ಯಂತ ಸುಂದರವಾಗಿ ಜಪಾನ್ ಸಂಸ್ಕೃತಿಯನ್ನು ಬಿಂಬಿಸುವ ಈ ತೋಟ ಆಕರ್ಷಣೆಯ ಕೇಂದ್ರ ಬಿಂದು. ಜಪಾನೀ ಮಾದರಿಯಲ್ಲಿ ಕ್ಯಾಂಟೀನ್ ಮುಂತಾಗಿ ಕಟ್ಟಲಾಗಿದೆ. ತಿಳಿಗೊಳಗಳು, ಸುಂದರ ಜಲಪಾತಗಳು, ಕೊಳಗಳಲ್ಲಿ ಈಜುವ ಬಣ್ಣ

ಬಣ್ಣದ ಸುಂದರ ಮೀನುಗಳು, 3000 ಜಪಾನ್ ಚೆರ್ರಿ ವೃಕ್ಷಗಳು. ಅಲ್ಲೊಂದು ಸುಂದರವಾದ, ಶಾಂತಮುದ್ರೆಯ ಬುದ್ಧವಿಗ್ರಹವಿದೆ. ಕ್ಯಾಂಟೀನಿನಲ್ಲಿ ಪೂರಿಯಂತಹ ಕೆಲವು ತಿಂಡಿ ಮಾರಲ್ಪಡುತ್ತವೆ. ನಮ್ಮೊಡನೆ, ತೋರಿಸಲು ಕರೆದುಕೊಂಡು ಬಂದಿದ್ದ ಕ್ರಿಯಾನಂದ, ಅವರ ಧರ್ಮಪತ್ನಿ ಮತ್ತು ಮಗು ಈಶ್ವರಿ ಇದ್ದರು. ಆ ಮಗುವಿಗೆಂದು ಪೂರಿ ತರಹದ ವಸ್ತುಗಳನ್ನು ಕೊಂಡುಕೊಟ್ಟೆ. ಒಂದೊಂದು ತುಣುಕಿನಲ್ಲಿಯೂ ಒಂದು ಪುಟ್ಟಹಾಳೆ. ಅದರಲ್ಲಿ ಪ್ರಸಿದ್ಧ ವ್ಯಕ್ತಿಗಳ ಉಕ್ತಿಗಳು, ಬುದ್ಧನ ವಾಣಿ. ಜನ ಅವನ್ನು ಓದುತ್ತಾ ಓದುತ್ತಾ ತಿಂಡಿ ತಿನ್ನುವ ಪರಿಪಾಠ.

ಇನ್ನೊಂದು ಚಿರಸ್ಮರಣೀಯ ಸ್ಮಾರಕವೆಂದರೆ ಮ್ಯೂರ್ ರೆಡ್‌ವುಡ್ ಫಾರೆಸ್ಟ್. ಜಗತ್ತಿನ ಎಲ್ಲ ಅರಣ್ಯಗಳಲ್ಲಿ ಇದು ಅತ್ಯಂತ ಸುಂದರ, ವೃಕ್ಷಪ್ರೇಮಿಗಳ ಸ್ವರ್ಗವಾದ ಅಭಯಾರಣ್ಯ. ಇಲ್ಲಿ ಗಿಡಗಳನ್ನು ಯಾರೂ ಕಡಿಯುವಂತಿಲ್ಲ. ಸುಪ್ರಸಿದ್ಧ ನಿಸರ್ಗ ವಿಜ್ಞಾನಿ ಜಾನ್ ಮ್ಯೂರ್‌ರ ಹೆಸರನ್ನು ಈ ಅರಣ್ಯಕ್ಕೆ ಇಡಲಾಗಿದೆ. ಈಗ ಕಾಣಬರುವ ರೆಡ್‌ವುಡ್ ವೃಕ್ಷಗಳ ಮೂಲವನ್ನು ವಿಜ್ಞಾನಿಗಳು 150 ಮಿಲಿಯ ವರ್ಷಗಳ ಹಿಂದಕ್ಕೆ ಅರಿಸಿದ್ದಾರೆ ಕೇವಲ ಭೂಮಿಯ ಉತ್ತರ ಗೋಲಾರ್ಧದಲ್ಲಿ ಕಂಡುಬಂದ ಈ ವೃಕ್ಷ ಸಂತತಿ ಕಾಲಾನಂತರದಲ್ಲಿ ನಶಿಸಿತು. ಈಗ ಈ ಸಂತತಿ ಉಳಿದಿರುವುದೇ ಕೆಲವೇ ಕೆಲವು ಕಡೆ. ಉರೇಗಾನ್ ರಾಜ್ಯದ 869 ಕಿಲೋಮೀಟರಿನ ಉದ್ದದ ಭೂಭಾಗದಲ್ಲಿ ಮತ್ತು V ಆಕಾರದ ಕಣಿವೆಯನ್ನುಳ್ಳ ಸಾನ್‌ಫ್ರಾನ್ಸಿಸ್ಕೋ ಬಳಿಯ ಊಖಿಯಾದಲ್ಲಿ. ಇದಕ್ಕೆ ತಂಪಾದ, ಮಂಜು ಕವಿದ ವಾತಾವರಣಬೇಕು. ಬೆಂಕಿಯ ಭಯ, ಕೀಟಭಯ ಅಷ್ಟಾಗಿ ಇಲ್ಲದ ಈ ವೃಕ್ಷಗಳು ಅತ್ಯಂತ ದಪ್ಪನಾದ ಅಂದರೆ 8 ಇಂಚಿನ ತೊಗಟೆಯನ್ನು ಹೊಂದಿವೆ. ಈ ವೃಕ್ಷದ ಆಯುಷ್ಯ 400 ರಿಂದ 800 ವರ್ಷ. ಮೂಲ ಬೇರು ಆರು ಅಡಿ ಮಾತ್ರ ಕೆಳಗಿಳಿದರೂ, ಸುತ್ತಲೂ ಹಬ್ಬುವ ಲ್ಯಾಟರಲ್ ಬೇರುಗಳು 150 ಅಡಿ ಸುತ್ತ ಹರಿಯುವುದರಿಂದ ಈ ವೃಕ್ಷ, ಭೂಮಿಯಲ್ಲಿ ಗಟ್ಟಿಯಾಗಿ ನಿಲ್ಲುತ್ತದೆ. ಮೊದಲ ನೂರು ವರ್ಷಕಾಲ ವರ್ಷಕ್ಕೆ ಹನ್ನೆರಡು ಅಂಗುಲ ಎತ್ತರ ಬೆಳೆಯುತ್ತದೆ. ಸದಾ ಹಸಿರು ಎಲೆಗಳಿಂದ ಕೂಡಿರುವ ಈ ವೃಕ್ಷ ಕೆಂಪು ಬಣ್ಣದಲ್ಲಿರುವುದರಿಂದ ಅದಕ್ಕೆ ಈ ಹೆಸರು. ಸುಮಾರು 360 ಅಡಿಗಳವರೆಗೂ ಬೆಳೆಯಬಲ್ಲ ಈ ರಕ್ಕಸವೃಕ್ಷ, 8 ರಿಂದ 16ಅಡಿವರೆಗೆ ದಪ್ಪನಾಗಬಲ್ಲದು. 16 ಅಡಿ ಅಗಲದ ಒಂದು ಕೋಣೆಯನ್ನು ನೆನಪಿಸಿಕೊಳ್ಳಿ. ಅದರ ಖಾಂಡದ ಒಳಗಿನಿಂದ ಒಂದು ಕಾರು ಹೋಗಬಲ್ಲದು.

ಇದು ರಕ್ತಬೀಜನಂತಹ ಗಿಡ. ರಕ್ತ ಬೀಜನ ದೇಹದ ಹನಿರಕ್ತ ಬೀಳುತ್ತಿದ್ದಂತೆಯೇ ಮತ್ತೊಬ್ಬ ರಕ್ತಬೀಜ ಹುಟ್ಟುತ್ತಿದ್ದನಂತೆ. ಹಾಗೆಯೇ ಈ ಗಿಡ

Digitalized by e-Sahithya Documentation Forum
Sponsored by Sarayu Foundation Trust

ಉರುಳಿದರೆ, ಅದು ನೆಲಕ್ಕೆ ಬೀಳುತ್ತಿದ್ದಂತೆ ಅದರ ಖಾಂಡದಿಂದ ಬೇರುಗಳು ಭೂಮಿಯಲ್ಲಿಳಿದು, ಅಲ್ಲೇ ಮೇಲೆ ಹಸಿರೆಲೆ ಚಿಗುರತೊಡಗುತ್ತವೆ. ಶಿಸ್ತಿನ ಸಿಪಾಯಿಯಂತೆ ಒಂಟಿಯಾಗಿ ನಿಂತು, ಮೇಲಕ್ಕೆ ಮಾತ್ರ ಬೆಳೆಯುವ ವೃಕ್ಷದ ತುದಿಯನ್ನು ನಾವು ನೋಡಲು ಸಾಧ್ಯವಿಲ್ಲ, ಕೇವಲ ಸೂರ್ಯನಷ್ಟೇ ನೋಡಬೇಕು. ನೆಲಕ್ಕೆ ಸೂರ್ಯನ ಬಿಸಿಲನ್ನಾಗಲಿ, ಚಂದ್ರನ ಬೆಳುದಿಂಗಳನ್ನಾಗಲೀ ಕೆಡವದೆ, ಮೇಲೆ ತಡೆಹಿಡಿಯುವ ಈ ವೃಕ್ಷಗಳ ಅರಣ್ಯದಲ್ಲಿ ಸುಮಧುರ ವಾಸನೆ, ಹಕ್ಕಿಗಳ ಚಿಲಿಪಿಲಿ ಕಲರವ. ಪ್ರವಾಸಿಗರಿಗೆ ಎಲ್ಲಾ ಅನುಕೂಲತೆಗಳಿರುವ ಈ ಅಭಯಾರಣ್ಯದಲ್ಲಿ ಕಾಲಕಳೆಯುವುದೆಂದರೆ ನಿಸರ್ಗಮಾತೆಯ ತೊಟ್ಟಿಲಲ್ಲಿ, ಗಿಡಮರ ಹಕ್ಕಿಪಕ್ಷಿಗಳ ಜೋಗುಳಲಾಲಿಸುತ್ತ ನಿದ್ರೆ ಮಾಡಿದ ಅನುಭವ. ಅಮೇರಿಕಾ ಸರ್ಕಾರ ವಿಶೇಷ ಕಾಳಜಿವಹಿಸಿ ಈ ಅರಣ್ಯವನ್ನು ರಕ್ಷಿಸುತ್ತಿದೆ. ಹೀಗೆ ಸಾನ್‌ಫ್ರಾನ್ಸಿಸ್ಕೋ ಕಿಷ್ಕಿಂದಾ ನಗರಿಯಾದರೂ ಪ್ರವಾಸಿಗರಿಗೆ ಸಂತಸವನ್ನುಂಟುಮಾಡುವ ನಿಸರ್ಗಮಾತೆಯ ಅಂತಃಪುರ.

ಅಮೇರಿಕಾ ದೇಶ ಪ್ರವಾಸಿಗರ ಸ್ವರ್ಗ. ಇಲ್ಲಿ ಸರ್ಕಾರದ್ದು ಎರಡೊಂದು ಉದ್ದೇಶ. ಒಂದು, ಜನರಿಗೆ ಒದಗಿಸುವ ಮನರಂಜನೆ! ಇನ್ನೊಂದು, ತನ್ನ ಬೊಕ್ಕಸಕ್ಕೆ ಆದಾಯ. (ನಮ್ಮವರಿಗೆ ಇವೆರಡೂ ಇಲ್ಲ)! ಯಾವುದೇ ಊರಿಗೆ ಹೋದರೂ ಬಂದ ಪ್ರವಾಸಿಗರಿಗೆ ನಿರಾಶೆಯಾಗದಂತೆ ಒಂದು ವಸ್ತುಸಂಗ್ರಹಾಲಯ, ಪಾರ್ಕು ಏನಾದರೂ ಇದ್ದೇ ಇರುತ್ತದೆ. ನಗರವಾಸದಿಂದ ಬೇಸತ್ತು ದಣಿದ ಜನರು ಪ್ರಶಾಂತ ತಾಣಗಳಿಗೆ ಹೋಗಿ ಕಾಲಕಳೆದು ಬರುತ್ತಾರೆ. ಒತ್ತಡದಿಂದ ಭಾರವಾದ ಹೃದಯಗಳು ಹಗುರಾಗುತ್ತವೆ. ಪ್ರವಾಸಿ ಕೇಂದ್ರಗಳ ಆದಾಯದಿಂದಾಗಿ ಸರ್ಕಾರದ ಬೊಕ್ಕಸ ವೃದ್ಧಿಯಾಗುತ್ತದೆ....ಜನರಲ್ಲಿಯೂ ಒಳ್ಳೆಯ ಅಭಿರುಚಿ ಬೆಳೆಯುತ್ತದೆ. ಇಷ್ಟು ಮಾತ್ರವಲ್ಲದೆ ಪ್ರವಾಸಮಾಡಬಯಸುವ ಜನರಿಗೆ ಮುಂಗಡವಾಗಿ ಕರೆದೊಯ್ದು, ನಂತರ ಕಂತಿನ ಮೇಲೆ ಹಣ ತುಂಬಿಸಿಕೊಳ್ಳುವ ಪ್ರವಾಸಿ ಸಂಸ್ಥೆಗಳೂ ಉಂಟು. ಪ್ರಾಮಾಣಿಕತೆಗೆ ಜನ ಅಪಾರ ಬೆಲೆಗೊಡುವುದರಿಂದ ಇಂಥ ವ್ಯವಸ್ಥೆ ಅಲ್ಲಿ ನಡೆಯುತ್ತದೆ.

ಆದರೆ ನಮ್ಮಲ್ಲಿ ಎಷ್ಟೋಬಾರಿ ಪ್ರವಾಸವು ಒಂದು ಪ್ರಯಾಸವಾಗಿ ಅಥವಾ ಪ್ರಸವ ವೇದನೆಯಾಗಿ ಭಾರಿ ಹಿಂಸೆಕೊಡುತ್ತದೆ. ಅದರಲ್ಲಿಯೂ ಮಧ್ಯಮವರ್ಗದವರಿಗೆ ತುಂಬಾ ತ್ರಾಸು. ಬೆಲೆ ಬಾಳುವ ಹೋಟೆಲುಗಳಿಗೆ ಹೋಗಿ ಶ್ರೀಮಂತರು ಹೇಗೋ ಕಾಲ ಹಾಕುತ್ತಾರೆ. ಮಧ್ಯಮ ವರ್ಗದ ಪ್ರವಾಸಿಗರಿಗೆ ಎಲ್ಲವೂ ಪ್ರಯಾಸವೇ! ಆ ದೇಶದಲ್ಲಿ ಬದುಕು ಹಗುರವಾಗಿರಲು, ಆರಾಮವಾಗಿರಲು ಎಷ್ಟೋ ವ್ಯವಸ್ಥೆಗಳಿವೆ.

ಸಾನ್‌ಫ್ರಾನ್ಸಿಸ್ಕೋ ತನಕ ಹೋಗಿ ನಾನು ಕಳೆದುಕೊಂಡಿದ್ದೆಂದರೆ ಶ್ರೀ ಪರಮೇಶ್ವರಪ್ಪನವರ ಮನೆಯ ಸಂದರ್ಶನ; ಇನ್ನೂ ಅಮೆರಿಕಾದ ಭೌಗೋಳಿಕ ವಿವರ ಅಷ್ಟಾಗಿ ತಿಳಿಯದಿದ್ದ ನಾನು, ಲಾಸ್ ಏಂಜಲೀಸ್‌ನಲ್ಲಿ ಇದ್ದಾಗ ಚರ್ಚಿಸಿದಾಗ ಅಲ್ಬನಿ ಎಂಬ ನಗರ ಎರಡುನೂರಾ ಐವತ್ತು ಮೈಲಿಗಳ ಮೇಲಿದೆ ಎಂಬ ವಿವರ ದೊರೆತಿತ್ತು. ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಪಿ.ಹೆಚ್.ಡಿ. ಮಾಡುತ್ತಿರುವ ಅರಣ್ಯ ಇಲಾಖೆಯ ಈ ಅಧಿಕಾರಿಗಳು ನಾನು ಭಾರತ ಬಿಡುವ ಒಂದೇ ತಿಂಗಳ ಮೊದಲಿಗೆ ಆಶ್ರಮಕ್ಕೆ ಬಂದು ತಮ್ಮಲ್ಲಿಗೆ ಬರಲು ಆಹ್ವಾನಿಸಿದ್ದರು. ತಮ್ಮ ವಿಶ್ವವಿದ್ಯಾಲಯದಲ್ಲಿ ಒಂದು ಭಾಷಣ ಇಡಿಸಲು ಉತ್ಸುಕರಾಗಿದ್ದರು. ಆದರೆ ನನ್ನದು ಪೂರ್ವ ನಿರ್ಧಾರಿತ ಒತ್ತಡದ ಕಾರ್ಯಕ್ರಮವಾದ್ದರಿಂದ ಮತ್ತು ವಾಷಿಂಗ್ಟನ್, ನ್ಯೂಯಾರ್ಕ್‌ಗಳಲ್ಲಿಂದ ಸಹಸ್ರಾರು ಮೈಲಿ ದೂರದಲ್ಲಿ ಕ್ಯಾಲಿಫೋರ್ನಿಯಾ ಇದ್ದುದರಿಂದ, ಅಲ್ಲಿಗೆ ಕಾರ್ಯಕ್ರಮ ಹಾಕಿಕೊಳ್ಳುವ ಸಾಹಸಮಾಡಿರಲಿಲ್ಲ. ನಂತರದಲ್ಲಿ ಆಕಸ್ಮಿಕವಾಗಿ ಕಾರ್ಯಕ್ರಮ ನಿಶ್ಚಿತವಾಗಿ ಕ್ಯಾಲಿಫೋರ್ನಿಯಾ ರಾಜ್ಯದ ಲಾಸ್ ಏಂಜಲೀಸ್‌ಗೆ ಹೊರಟೆನು. ಅಲ್ಬನಿಯ ಸಂದರ್ಶನದ ಬಗ್ಗೆ ಹೆಚ್ಚಾಗಿ ಗಮನ ಕೊಡಲಾಗದೆ ವಾಪಸ್ಸು ನ್ಯಾಷ್‌ವೀಲ್ ಟೆನಿಸ್ಸಿಗೆ ಪ್ರಯಾಣಿಸಿದೆ. ನಂತರ ತಿಳಿಯಿತು ಸಾನ್‌ಫ್ರಾನ್ಸಿಸ್ಕೋ ನಗರದ ಗೋಲ್ಡನ್‌ಗೇಟ್ ಸೇತುವೆಗೆ ಹತ್ತು ಕಿಲೋಮೀಟರ್ ದೂರದಲ್ಲಿ ಪರಮೇಶ್ವರಪ್ಪನವರ ಮನೆ ಇತ್ತು ಎಂಬುದಾಗಿ. ಈ ವಿಷಯ ತಿಳಿದಾಗ ನ್ಯೂಯಾರ್ಕಿಗೆ ವಾಪಸ್ಸಾಗಿದ್ದೆ. ಇನ್ನು ಸಾವಿರಾರು ಮೈಲು ಸಂಚರಿಸಿ ಅತ್ತ ಹೋಗುವುದು ಊಹೆಗೂ ನಿಲುಕದ್ದು. ಫೋನಿನಲ್ಲಿ ಅವರು ಮಾತನಾಡಿದಾಗ ಸಮಾಧಾನ ಪಡಿಸಿ, ಇನ್ನೊಮ್ಮೆ ಬಂದಾಗ ಬರುವುದಾಗಿ, ಅವರ ಪತ್ನಿ-ಪುತ್ರರನ್ನು ಸಂದರ್ಶಿಸುವುದಾಗಿ ಹೇಳಿದೆ. ಆ ದೇಶದಲ್ಲಿ ಜನರು ಪಯಣಿಸುವುದನ್ನು ನೋಡಿದರೆ, ಅದೇಕೆ ನಾನೇ ಪಯಣಿಸಿದ ವೇಗ ನೋಡಿದರೆ ಅಚ್ಚರಿಯಾಗದಿರದು. ಇಲ್ಲಿ ಒಂದೇ ಒಂದು ದಿನದ ಕಾರ್ಯಕ್ರಮಕ್ಕೆ ದೂರಹೋಗಲು ಬೇಸರ. ಅಲ್ಲಿ ಒಂದೊಂದು ವಾರಾಂತ್ಯದ ಕಾರ್ಯಕ್ರಮಕ್ಕೆ ಇನ್ನೂರು ಮೂನ್ನೂರು ಮೈಲಿ ಪ್ರಯಾಣ. ಪ್ರಯಾಣಕ್ಕೆ ತಕ್ಕ ಅನುಕೂಲತೆಗಳೂ ಅಲ್ಲಿರುವುದರಿಂದ ಪ್ರವಾಸದ ಪ್ರಯಾಸ ಅಷ್ಟಾಗಿ ಕಾಣದು. (ಸಶೇಷ)

Digitalized by e-Sahithya Documentation Forum
Sponsored by Sarayu Foundation Trust

ನಂಬಿಕೆಯ ಫಲ

—ಡಿ. ಆರ್. ಬಸವರಾಜ್

ಒಬ್ಬ ಚಿಲ್ಲರೆ ಅಂಗಡಿ ವ್ಯಾಪಾರಿ ಇದ್ದ. ಅವನು ತುಂಬಾ ಧರ್ಮಿಷ್ಟ, ನ್ಯಾಯ ಶೀಲನೂ ಕೂಡ. ವ್ಯಾಪಾರದಲ್ಲಿ ಮೋಸ ಮಾಡುವುದು, ಕಲಬೆರಕೆ ಮಾಡಿ ಪದಾರ್ಥಗಳನ್ನು ಮಾರಾಟ ಮಾಡುವದು, ಅವನ ಹತ್ತಿರ ಸುಳಿಯದ ಸಂಗತಿಗಳು, ಅತಿಯಾದ ಲಾಭಗಳಿಸಬೇಕೆಂಬ ಉದ್ದೇಶವೂ ಅವನದಾಗಿರಲಿಲ್ಲ. ಇದರಿಂದಾಗಿ ಪ್ರತಿಯೊಬ್ಬರ ಪ್ರೀತಿ ವಿಶ್ವಾಸಗಳನ್ನು ಗಳಿಸಿದ್ದ. ಒಮ್ಮೆ ಅವನ ಅಂಗಡಿಯಲ್ಲಿ ಕೊಂಡವರು ಮತ್ತೊಮ್ಮೆಯೂ ಅದೇ ಅಂಗಡಿಗೆ ಬರಲಾರಂಭಿಸಿದರು. ಅವನು ಅಂಗಡಿಗೆ ಬರುವುದೇನಾದರೂ ತಡವಾದರೆ ಬರುವವರೆಗೂ ಕಾಯುತ್ತಿದ್ದರೇ ಹೊರತು ಬೇರೆ ಅಂಗಡಿಯಲ್ಲಿ ಕೊಳ್ಳುತ್ತಿರಲಿಲ್ಲ. ಅಂಥ ಆಕರ್ಷಣಶಕ್ತಿಯನ್ನು ಅವನು ಗಳಿಸಿದ್ದ. ಅಂಗಡಿಗೆ ಬಂದವರು ತಮಗೆ ಬೇಕಾದ ಪದಾರ್ಥಗಳನ್ನು ಮಾತ್ರವಲ್ಲದೆ ಅಷ್ಟಿಷ್ಟು ಜ್ಞಾನವನ್ನೂ ಅವನಿಂದ ಪಡೆದು ಹೋಗುತ್ತಿದ್ದರು ಅಂಗಡಿಯಿಂದ. ಸಂಜೆಗೆ ಎಲ್ಲರನ್ನೂ ಅಂಗಡಿ ಹತ್ತಿರ ಬರಮಾಡಿಕೊಂಡು ಪ್ರಾರ್ಥನೆ, ಪ್ರವಚನ ಮಾಡುವ ಕಾರ್ಯಕ್ರಮಗಳನ್ನು ಇಟ್ಟುಕೊಂಡ. ಜನಗಳ ಕಣ್ಣಿಗೆ ಅವನೊಬ್ಬ ಅಂಗಡಿ ವ್ಯಾಪಾರಿಯಂತೆ ಕಾಣಿಸದೆ ಸತ್ಪುರುಷನಂತೆ ಕಾಣತೊಡಗಿದ.

ಅವನು ಅಂಗಡಿ ಬಾಗಿಲು ತೆರೆದರೆ ಸಾಕು, ಜನ ಮುತ್ತುತ್ತಿದ್ದರು. ಅಂಗಡಿ ತೆರೆದಿರುವಷ್ಟು ಕಾಲ ಒಬ್ಬಿಬ್ಬರಾದರೂ ಅಂಗಡಿಯಲ್ಲಿರುತ್ತಿದ್ದರೇ ಹೊರತು, ಅಂಗಡಿಯವನೊಬ್ಬನೇ ಇದ್ದುದಂತು ಇಲ್ಲವೇ ಇಲ್ಲ.

ಹೀಗಾಗಿ ಅವನಿಗೆ ಮನೆಗೆ ಹೋಗಿ ಬರುವುದಕ್ಕೂ ಬಿಡುವು ದೊರೆಯದಾಯಿತು. ತುರ್ತಾಗಿ ಮನೆಗೆ ಹೋಗಿ ಬರಬೇಕಾದ ಸಂದರ್ಭ ಬಂದರೆ ಅಂಗಡಿಯಲ್ಲಿದ್ದವರಿಗೆ ಸ್ವಲ್ಪ ಹೊತ್ತು ಅಲ್ಲಿಯೇ ಕುಳಿತಿರಲು ಹೇಳಿ ಹೋಗುತ್ತಿದ್ದ. ತಾನು ಮನೆಗೆ ಹೋದ ನಂತರ ಅವರು ಏನಾದರೂ ಸಾಮಾನನ್ನು ಸಾಗಹಾಕಿದರೆಂಬುದಾಗಲೀ, ಹಣವನ್ನು ಕದ್ದರೆಂಬುದಾಗಲೀ ಅವನ ತಲೆಯಲ್ಲಿ ಸುಳಿಯುತ್ತಿರಲಿಲ್ಲ. ಅವನಲ್ಲಿರುವ ನಂಬಿಕೆಯೇ ಅವನಿಟ್ಟ ಭದ್ರ ಕಾವಲಾಗಿತ್ತು. ಅಂಗಡಿಯಲ್ಲಿ ಅವನಿಲ್ಲದಾಗ ಕುಳಿತುಕೊಳ್ಳುವವರದೂ ಅಷ್ಟೆ. ನಂಬಿಕೆಗೆ ದ್ರೋಹವೆಸಗುವ ಮನ ಅವರಿಗುಂಟಾಗುತ್ತಿರಲಿಲ್ಲ.

ಒಂದು ದಿನ ಒಬ್ಬ ಕಳ್ಳ ವ್ಯಾಪಾರ ಮಾಡುವ ನೆಪದಿಂದ ಅವನ ಅಂಗಡಿಗೆ ಬಂದ. ಅಂಗಡಿಯವನ ಕಣ್ಣು ತಪ್ಪಿಸಿ ಏನಾದರೂ ಕದ್ದೊಯ್ಯಬೇಕೆಂಬ ಉದ್ದೇಶ ಅವನದು. ಆದರೆ ಅಂಗಡಿಯಲ್ಲಿ ಅವನಲ್ಲದೆ ಬೇರೆ ಯಾರೂ ಇರಲಿಲ್ಲ. ಬಂದದ್ದಕ್ಕೆ ಏನಾದರೂ ಮಾಡಬೇಕಲ್ಲ! ಅದು ಹೇಗೆ? ಇದು ಹೇಗೆ? ಎಂದು ಬೆಲೆಗಳನ್ನು ವಿಚಾರಿಸತೊಡಗಿದ. ಅವನ ಅದೃಷ್ಟಕ್ಕೆ ಸರಿಯಾಗಿ ಅದೇ ವೇಳೆಯಲ್ಲಿ ಅಂಗಡಿಯವನಿಗೆ ಬೇಗ ಮನೆಗೆ ಬಂದುಹೋಗಲು ಕರೆಬಂತು. ಅವನು ಹಿಂದು ಮುಂದು ನೋಡದೆ ಅಲ್ಲಿದ್ದ ಕಳ್ಳನನ್ನು ಕುರಿತು "ನಾನು ಮನೆಗೆ ಹೋಗಿ ಬರುವವರೆಗೂ ಇಲ್ಲಿಯೇ ಕುಳಿತಿರುತ್ತೀಯಾ?" ಎಂದ. ಕೇಳಬೇಕೇ; ಕಳ್ಳನಿಗೆ ತುಂಬಾ ಸಂತೋಷವಾಯಿತು. "ಆಗಲಿ" ಎಂದ. ದೇವರೇ ಈ ಅವಕಾಶವನ್ನು ತನಗೆ ಕಲ್ಪಿಸಿದನೆಂದುಕೊಂಡ. ಆದಷ್ಟು ಹೆಚ್ಚು ಬೆಲೆ ಬಾಳುವ ವಸ್ತುಗಳನ್ನೇ ಕದ್ದೊಯ್ಯಬೇಕೆಂದು ತೀರ್ಮಾನಿಸಿದ. ಆದರೆ ಅದೇಕೋ ಯಾವ ಪದಾರ್ಥವನ್ನು ಮುಟ್ಟಲೂ ಅವನ ಕೈಬಾರದಾಯಿತು.

"ಇಷ್ಟೊಂದು ನಂಬಿಕೆಯಿಂದ ಅಂಗಡಿ ಜವಾಬ್ದಾರಿಯನ್ನು ನಿನ್ನ ಮೇಲೆ ಬಿಟ್ಟು. ಹೋಗಿರುವಾಗ ನೀನೇನಾದರೂ ಕದ್ದೆಯಾದರೆ ಘೋರ ಪಾಪಕ್ಕೊಳಗಾಗುತ್ತಿಯೆ"

ಅವನ ಅಂತರಾತ್ಮ ಉಲಿಯಿತು.

ಕಳ್ಳ ಕುಳಿತಲ್ಲಿಂದ ಮೇಲೇಳಲಿಲ್ಲ. ಅಂಗಡಿಯವನು ಬಂದು "ಇದುವರೆಗೆ ಕುಳಿತಿದ್ದಕ್ಕೆ ನನ್ನ ವಂದನೆಗಳು" ಎಂದ.

"ನೀನು ಆಕಡೆ ಹೋದ ಮೇಲೆ ನಾನು ಹಣವನ್ನೂ, ಕೆಲವು ವಸ್ತುಗಳನ್ನೂ ಕದ್ದುಕೊಂಡು ಓಡಿ ಹೋಗಿದ್ದರೆ ನೀನೇನು ಮಾಡುತ್ತಿದ್ದೆ?"

ಕಳ್ಳ ನಗುತ್ತಾ ಪ್ರಶ್ನಿಸಿದ.

"ನೀನು ಹಾಗೆ ಮಾಡಲಾರೆ ಎಂಬ ನಂಬಿಕೆಯಿಂದಲೇ ನಾನು ಬಿಟ್ಟು ಹೋದದ್ದು. ಒಂದು ವೇಳೆ ನೀನು ಕದ್ದೊಯ್ದಿದ್ದರೂ ನಾನೇನೂ ಮಾಡಲಾಗುತ್ತಿರಲಿಲ್ಲ, ನಾನೇ ಏನೋ ತಪ್ಪು ಮಾಡಿದ್ದೇನೆ ಅದಕ್ಕೇ ನನ್ನ ಪದಾರ್ಥ ಕಳೆದು ಹೋಗಿರುವುದು ಎಂದು ತೆಪ್ಪಗಾಗುತ್ತಿದ್ದೆ"

ಎಂದು ನಿರ್ವಿಕಾರ ಧ್ವನಿಯಿಂದ ನುಡಿದ ಅಂಗಡಿಯವ. ಕಳ್ಳ ಗಳಗಳನೆ ಅತ್ತು ಬಿಟ್ಟ. ಅಂಗಡಿಯವನಿಗೆ ನಮಸ್ಕರಿಸಿದ. ತನ್ನೆಲ್ಲ ವಿಷಯವನ್ನು ತಿಳಿಸಿ ಇನ್ನೆಂದಿಗೂ

Digitalized by e-Sahithya Documentation Forum
Sponsored by Sarayu Foundation Trust

ಕಳ್ಳತನ ಮಾಡುವುದಿಲ್ಲವೆಂಬುದಾಗಿ ವಾಗ್ದಾನ ಮಾಡಿದ" ನಿಮ್ಮಿಂದ ನನ್ನ ಬಾಳು ಪುನೀತನಾಯಿತು. ಇಂದಿಗೆ ನನಗೆ ಜ್ಞಾನೋದಯವಾಯಿತು" ಎಂದ.

ಕೇವಲ ತನ್ನ ಸದ್ಗುಣದಿಂದ ಒಬ್ಬ ಕಳ್ಳನ ಮನಸ್ಸನ್ನೇ ಪರಿವರ್ತಿಸಿದ ವ್ಯಕ್ತಿಯೇ ಮುಂದೆ ಸಂತ ತುಕಾರಾಮನೆಂಬ ಹೆಸರನ್ನು ಪಡೆದು ವಿಖ್ಯಾತನಾದ ಸಂತನಾದವನು.

KALYANA KIRANA FOR AMERICAN READERS

Those who wish to get Kalyana Kirana magazine are requested to send an yearly subscription of Rs. 76/- to India. And those who wish to send their subscription in the form of U. S. A. dollars can post a cheque for $ 10-00 (dollars Ten) only as one year's subscription or $ 19-00 as two vears subscription to the following address;

Mrs. JAYA Dr. SHIVAMURTHY,
9, Hemmingway Drive
Dixx. Hills, NEW YORK-11746

Mrs. Jayashivamurthy, a sincere social worker and a very good organizer has agreed to do a favour for us by collecting subscription for Kalyana Kirana in U. S. A. We thank her for her kind co-operation. The cheque should be written in favour of Jagadguru Mate Mahadevi

Correspondent.

(೮೬ನೇ ಪುಟದಿಂದ ಮುಂದುವರೆದಿದೆ)

ಒಬ್ಬ ಕೆಡಿಸುವಂತೆ ಬಸವಣ್ಣನವರ ತತ್ತ್ವಗಳ ತಿರುಳು, ವೈಶಾಲ್ಯತೆ, ವೈಚಾರಿಕತೆ ಜನರಿಗೆ ಮನದಟ್ಟಾಗದಂತೆ ಒತ್ತಿ ಒತ್ತಿ ಜಾತೀಯತೆ ಮೂಢನಂಬಿಕೆಗಳ ಬಗ್ಗೆ ಶ್ರದ್ಧೆ ಬೆಳೆಯುವಂತೆ ಮಾಡುತ್ತಿದ್ದಾರೆ. ತಾವೂ ಸ್ವತಃ ವಿಚಾರ ಪರಿವರ್ತನೆ ಒಳಗಾಗಿ ಸಮಾಜವನ್ನು ತಿದ್ದಲು ಇಚ್ಛಿನದಿರುವುದಕ್ಕೆ ಅಜ್ಞಾನ-ಸಾರ್ಥಗಳೇ ಪ್ರಮುಖ ಕಾರಣಗಳು ಬಸವ ಧರ್ಮದ ಸಂವಿಧಾನದ ಪ್ರಕಾರ ಎಲ್ಲ ಮಾನವರೂ ಸಮಾನರು, ದೀಕ್ಷಾರ್ಹರು, ಕೃಪಾರ್ಹರು, ಮೋಕ್ಷಾರ್ಹರು.



Digitalized by e-Sahithya Documentation Forum
Sponsored by Sarayu Foundation Trust

Regd. No. KRNB 312
Licenced to post without pre-payment No. WPP-25



.....ಬೆಂಗಳೂರು ನಗರದ ಮಲ್ಲೇಶ್ವರಂ ಪ್ರವಚನ ಮುಕ್ತಾಯ ದಿನದಂದ[illegible]ಜ್ಯ ಮಾತಾಜಿಯವರಿಗೆ ಸತ್ಕಾರ

Digitalized by e-Sahithya Documentation Forum
Sponsored by Sarayu Foundation Trust